ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಸಮಗ್ರ ಶಿಕ್ಷಣ ಅಭಿಯಾನ

# ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

ಆಂತರಿಕ ಪ್ರಸಾರಕ್ಕಾಗಿ

ಶೈಕ್ಷಣಿಕ ಪತ್ರಿಕೆ    2020–21ನೇ ಸಾಲಿನ ಪ್ರಥಮ ಸಂಚಿಕೆ

E-mail : diet.shimoga@gmail.com, Ph : 08182 - 270597, Fax : 08182 - 228127

ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ



# ಸಂಹಿತೆ








**ಶ್ರೀ ಕೃಷ್ಣಪ್ಪಗೌಡರವರಿಗೆ ಸನ್ಮಾನ ಮಾಡಿದ ಕ್ಷಣ**



**2020–21ನೇ ಸಾಲಿನಲ್ಲಿ ಡಯಟ್ ಸಂಸ್ಥೆಯಿಂದ ನಿವೃತ್ತಿ ಹೊಂದಿದ**
**ಶ್ರೀ ಪ್ರಕಾಶ್ ತಹಸೀಲ್ದಾರ್,** ಉಪನ್ಯಾಸಕರು ಹಾಗೂ ಶ್ರೀ **ಪಾಂಡುರಂಗಯ್ಯ,** 'ಡಿ' ದರ್ಜೆ ನೌಕರರು
**ಅವರ ಬೀಳ್ಕೋಡುಗೆ ಸಮಾರಂಭ**

ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆ

# ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

# ಸಂಹಿತೆ

ಸಮಗ್ರ ಶಿಕ್ಷಣ ಅಭಿಯಾನ

ಶಿಕ್ಷಣದ ಹಕ್ಕು
ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

E-mail : diet.shimoga@gmail.com, Ph : 08182-270597, Fax : 08182-228127

## ಸಂಪಾದಕ ಮಂಡಳಿ


ಗೌರವ ಸಂಪಾದಕರು :

**ಶ್ರೀಮತಿ ವೈಶಾಲಿ ಎಂ.ಎಲ್.**
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ

ಪ್ರಧಾನ ಸಂಪಾದಕರು :

**ಶ್ರೀಮತಿ ಸುಮಂಗಲಾ ಪಿ. ಕುಚಿನಾಡ**
ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ
ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

**ಶ್ರೀ ರಮೇಶ್ ಎನ್.ಎಂ.**
ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ

ಸಹ ಸಂಪಾದಕರು :

**ಶ್ರೀ ಶೇರ್ ಅಲಿ ಹೆಚ್.ಆರ್.**
ಹಿರಿಯ ಉಪನ್ಯಾಸಕರು, IFIC ವಿಭಾಗದ ಮುಖ್ಯಸ್ಥರು,
ಶಿವಮೊಗ್ಗ

ಸದಸ್ಯರು :

**ಶ್ರೀ ವೀರಭದ್ರಪ್ಪ**
ಉಪಪ್ರಾಂಶುಪಾಲರು ಮತ್ತು PSTE ವಿಭಾಗದ ಮುಖ್ಯಸ್ಥರು
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

**ಶ್ರೀ ಶಂಕರಪ್ಪ**
ಡಿ.ವೈ.ಪಿ.ಸಿ., ಸರ್ವಶಿಕ್ಷಣ ಅಭಿಯಾನ, ಶಿವಮೊಗ್ಗ

**ಶ್ರೀ ಎಂ.ಎಸ್. ಫಣೀಶ**
ಹಿರಿಯ ಉಪನ್ಯಾಸಕರು, DRU ವಿಭಾಗದ ಮುಖ್ಯಸ್ಥರು,
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

**ಡಾ॥ ಹರಿಪ್ರಸಾದ್ ಜಿ.ವಿ.**
ಹಿರಿಯ ಉಪನ್ಯಾಸಕರು, P & M ವಿಭಾಗದ ಮುಖ್ಯಸ್ಥರು,
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

**ಶ್ರೀಮತಿ ಕೆ. ವೀಣಾ**
ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ


---


ಮುಖಪುಟ : **ತಾಲ್ಲೂಕು ಮಟ್ಟದಲ್ಲಿ ವಿದ್ಯಾಗಮ ಪ್ರಗತಿ ಪರಿಶೀಲನಾ ಸಭೆಯ ಚಿತ್ರಗಳು**

ತಾಂತ್ರಿಕ ಕಾರ್ಯ : **ಶ್ರೀ ಆದರ್ಶ ಎಂ., ಶಿವಮೊಗ್ಗ**


**ಪ್ರೀತಿಯ ಶಿಕ್ಷಕರೇ...**



## ನಿಮ್ಮೊಡನೆ...

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ ವತಿಯಿಂದ 2020–21ನೇ ಸಾಲಿನ **"ಸಂಹಿತ"** ಪ್ರಥಮ ಸಂಚಿಕೆಯನ್ನು ಹೊರ ತರುತ್ತಿರುವುದು ಸಂತಸದ ವಿಷಯವಾಗಿದೆ.

2020ರ ಹೊಸ್ತಿಲಲ್ಲೆ ಕೋವಿಡ್–19 ನಮ್ಮ ದೇಶಕ್ಕೆ ಆವರಿಸಿದ್ದು ಈ ಹಿನ್ನಲೆಯಲ್ಲಿ ಪ್ರಸ್ತುತ ಸಾಲಿನಲ್ಲಿ ಶಾಲೆಗಳು ಇನ್ನೂ ತೆರೆದಿರುವುದಿಲ್ಲ. ಇದರಿಂದ ಮಕ್ಕಳ ಕಲಿಕಾ ನಿರಂತರತೆಯ ಕೊರತೆ ಉಂಟಾಗುವ ಆತಂಕವಿತ್ತು. ಆದರೆ ಇಲಾಖೆಯ ಮಹತ್ವಪೂರ್ಣ ಯೋಚನೆಯಾದ **'ವಿದ್ಯಾಗಮ'** ಕಾರ್ಯಕ್ರಮವು ಈ ಕೊರತೆಯನ್ನು ನೀಗಿಸಿದೆ. ನಮ್ಮ ಜಿಲ್ಲೆಯಲ್ಲಿ ಮಕ್ಕಳ ಶಿಕ್ಷಣದ ಕಲಿಕಾ ಬಲವರ್ಧನೆಗಾಗಿ **'ವಿದ್ಯಾಗಮ'** ಕಾರ್ಯಕ್ರಮದ ಮೂಲಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಶಿಕ್ಷಕರು ಸಕ್ರೀಯವಾಗಿ ತೊಡಗಿಸಿಕೊಂಡು ಮಕ್ಕಳನ್ನು ವಿವಿಧ ಚಟುವಟಿಕೆಗಳ ಮೂಲಕ ಕಲಿಕೆಯಲ್ಲಿ ನಿರಂತರತೆಯನ್ನು ಒದಗಿಸುತ್ತಿರುವುದು ಹರ್ಷದ ವಿಷಯ. ಈ ಸಂಚಿಕೆಯಲ್ಲಿ ಅಂತಹ ದೃಷ್ಟಾಂತಗಳ ಪರಿಚಯವನ್ನು ನಿಮಗೆ ಮಾಡಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

ನಮ್ಮ ಸಂಸ್ಥೆಯು ಇಲ್ಲಿನ ಬೋಧಕವರ್ಗ, ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು, ಬಿ.ಆರ್.ಪಿ., ಸಿ.ಆರ್.ಪಿ. ಮತ್ತು ಜಿಲ್ಲೆಯ ಶಿಕ್ಷಕರ ಶೈಕ್ಷಣಿಕ ಬಲವರ್ಧನೆಗಾಗಿ ವೆಬಿನಾರ್‌ಗಳು, ಅದನ್ನು ನಿರ್ವಹಿಸುವ ಬಗೆಯನ್ನು ತಿಳಿಸಲಾಯಿತು. ಇದರಿಂದ ಹೆಚ್ಚಿನ ಶಿಕ್ಷಕರು ಸಂಪನ್ಮೂಲ ವ್ಯಕ್ತಿಗಳಾಗಿ ಪರಿವರ್ತನೆಯಾಗುವ ಅವಕಾಶಗಳನ್ನು ನೀಡಿ ಅವರಿಂದ ಅನೇಕ ತರಬೇತಿಗಳನ್ನು ಆನ್‌ಲೈನ್ ಮೂಲಕ ನೀಡಲಾಗಿದೆ.

ಕೋವಿಡ್ ಸಂದರ್ಭದಲ್ಲಿ ಶಿಕ್ಷಕರ ನಾವಿನ್ಯಯುತ ಯೋಚನೆಗಳು, ಯೋಜನೆಗಳು ಸಾಕಾರಗೊಂಡಿದ್ದು ಅದರ ಕಿರುಪರಿಚಯವನ್ನು ಈ ಸಂಚಿಕೆಯಲ್ಲಿ ಮೂಡಿಸುವ ಪ್ರಯತ್ನ ಮಾಡಲಾಗಿದೆ. ಈ ದಿಶೆಯಲ್ಲಿ ಶಿಕ್ಷಕರಿಗೆ ಪ್ರೇರಣೆ ನೀಡುವ ಕೆಲಸವನ್ನು ಮಾಡಲಾಗಿದೆ. ಈ ಬಗ್ಗೆ ಸಹಕರಿಸಿದ ನಿಮ್ಮೆಲ್ಲರಿಗೂ ಅಭಿನಂದನೆಗಳು.

**ಶ್ರೀಮತಿ ಸುಮಂಗಲಾ ಪಿ. ಕುಚಿನಾಡ**
ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

# ಪರಿವಿಡಿ


| | | |
|---|---|---|
| 1. | ಅಪ್ಯಾಯಮಾದ ರಜೆಯ ಅಚ್ಚರಿ | 1–3 |
| 2. | ನಿಷ್ಠಾ ತರಬೇತಿಯ ಮುನ್ನೋಟ | 4 |
| 3. | ಲಾಕ್‌ಡೌನ್ ಸಮಯದಲ್ಲಿ ಪುಟಿದೆದ್ದ "ವಾಟ್ಸಾಪ್" ತಂಡದ ಯಶೋಗಾಥೆ | 5–6 |
| 4. | "ಪ್ರಚಲಿತ ವಿದ್ಯಾಮಾನಗಳಲ್ಲಿ ಶಿಕ್ಷಣ" | 7–8 |
| 5. | ನಮ್ಮ ಶಾಲೆ–ನಲಿಕಲಿ / ಮುಚ್ಚಿದ ಶಾಲಾ ದೇಗುಲ | 9 |
| 6. | ಶೈಕ್ಷಣಿಕ ಪ್ರಗತಿಯಲ್ಲಿ ಸಮುದಾಯದ ಪಾತ್ರ | 10–15 |
| 7. | ಜೀವನ ಕೌಶಲ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಆನ್‌ಲೈನ್ ತರಬೇತಿ | 16 |
| 8. | ಜಿಲ್ಲೆಯಲ್ಲಿ ವಿದ್ಯಾಗಮ ಸಾಗುತ್ತಿರುವ ಹಾದಿ | 17–18 |
| 9. | ಸರ್ಕಾರಿ ಶಾಲೆಯ ಸಬಲೀಕರಣದಲ್ಲಿ ವಿದ್ಯಾಗಮ ಯೋಜನೆ | 19–21 |
| 10. | ವಿದ್ಯಾಗಮದ ಯಶಸ್ವಿ ಶಾಲೆಗಳತ್ತ ನನ್ನ ಚಿತ್ತ | 22–24 |
| 11. | ವಿದ್ಯಾಗಮ (ಜಾನಪದ ಶೈಲಿಯ ಕವನ) | 26 |
| 12. | ವಿದ್ಯಾಗಮ (ಭೋಗ ಷಟ್ಪದಿಯಲ್ಲೊಂದು ರಚನೆ) | 25 |
| 13. | ಕೊರೊನಾ ಕಲಿಸುತ್ತಿರುವ ವಿದ್ಯಾಗಮ ಪಾಠ | 27 |
| 14. | ವಿದ್ಯಾಗಮ ಶಿಕ್ಷಕ ಮಕ್ಕಳ ಸಮಾಗಮ... | 28 |
| 15. | ಪದಬಂಧ | 29 |
| 16. | ಮಡಿಲು | 31 |
| 17. | ಜೀವನ ಕೌಶಲಗಳು ಆನ್‌ಲೈನ್ ತರಬೇತಿ ಪ್ರೌಢಶಾಲಾ ಶಿಕ್ಷಕರಿಗೆ | 32–38 |
| 18. | ನನ್ನ ಶಾಲೆ / ಕೊರೊನಾದ ಮಹಿಮೆ | 39 |
| 19. | ಶಿಕ್ಷಣದ ಮಹತ್ವ | 40–41 |
| 20. | ವಿನೂತನ ವಿಧಾನದ ಮುಖೇನ ಯಶಸ್ವಿಯಾದ ಇಂಗ್ಲೀಷ್ ನಲಿಕಲಿ ಆನ್‌ಲೈನ್ ತರಬೇತಿ ಯಾನ | 42–44 |
| 21. | ಎಲ್ಲರಂತೆ ನೀವಲ್ಲ... ನಿಮ್ಮಂತೆ ಬೇರಾರಿಲ್ಲ... | 45 |
| 22. | ನಲಿ–ಕಲಿ ಪರಿಚಯಾತ್ಮಕ ಆನ್‌ಲೈನ್ ತರಬೇತಿ | 46–47 |
| 23. | ಟೆರೇಸ್ ಗಾರ್ಡನ್‌ನ ಮಡಿಲಲ್ಲಿ ಒಂದು ಪರ್ಯಟನೆ | 48–49 |

# “ಅಪ್ಯಾಯಮಾನದ ರಜೆಯ ಅಚ್ಚರಿ”

ಕೋವಿಡ್ – 19 ಮಹಾಮಾರಿ ಸಮಾಜದ ಎಲ್ಲಾ ಕ್ಷೇತ್ರಗಳ ಮೇಲೂ ತನ್ನ ಕರಿನೆರಳು ಚಾಚಿದ್ದು ಇದಕ್ಕೆ ಶಿಕ್ಷಣ ಕ್ಷೇತ್ರವೂ ಕೂಡ ಹೊರತಾಗಿಲ್ಲ ಸಹಜವಾಗಿ ಸಾಗುತ್ತಿದ್ದ ಶೈಕ್ಷಣಿಕ ಚಟುವಟಿಕೆಗಳು ಸ್ಥಗಿತಗೊಂಡವು. ವಿದ್ಯಾರ್ಥಿಗಳು ಮನೆಯಲ್ಲಿಯೇ ಆನ್‌ಲೈನ್ ತರಗತಿಗಳಿಗೆ ಅನಿವಾರ್ಯವಾಗಿ ಮೊರೆ ಹೋಗುವ ಸಂದಿಗ್ಧ ಪರಿಸ್ಥಿತಿ ಒದಗಿ ಬಂದಿತು. ಸದಾ ಮಕ್ಕಳ ಕಲರವದಿಂದ ಕಂಗೊಳಿಸುತ್ತಿದ್ದ ಶಾಲೆಗಳು ಮೌನಕ್ಕೆ ಶರಣಾದವು. ಮಕ್ಕಳೊಂದಿಗೆ ಮಕ್ಕಳಾಗಿ ಬೆರೆತು ಮುದಗೊಳ್ಳುತ್ತಾ ತಮ್ಮ ಕೈಂಕರ್ಯದಲ್ಲಿ ತೊಡಗಿಕೊಂಡಿದ್ದ ಶಿಕ್ಷಕ ಸಮೂಹಕ್ಕೂ ಮಕ್ಕಳೊಂದಿಗೆ ಬೆರೆತು ನೀಡದ ಅನುಕೂಲಿಸುವಿಕೆಯು ಅಗ್ನಿ ಪರೀಕ್ಷೆಯೇ ಆಗಿತ್ತು.  ಇಂತಹ ದುರ್ಭರ ದುಸ್ತರ ಕಾಲದಲ್ಲಿ ಎಲ್ಲಾ ಶೈಕ್ಷಣಿಕ ಸನ್ನಿವೇಶಗಳೂ ಬದಲಾಗುತ್ತ ಸಾಗುತ್ತಿರುವಾಗ ಜಿಲ್ಲೆಯ ಶೈಕ್ಷಣಿಕ ತರಬೇತಿಯ ಕೇಂದ್ರವಾದ ಡಯಟ್ ಸಹ ಶಿಕ್ಷಕರಿಗೆ ತರಬೇತಿ ನೀಡಲು ಪರ್ಯಾಯ ಆಲೋಚನೆಯನ್ನು ಮಾಡುವಂತಹ ಸಮಯದಲ್ಲಿ ಮುಖಾಮುಖಿ ತರಬೇತಿಗಳಿಗೆ ಸರಿಸಮನಾಗಿ ನಿಲ್ಲಬಲ್ಲಂತಹ, ತರಬೇತಿಗೆ ಶಕ್ತಿ ತುಂಬಲು ಆನ್‌ಲೈನ್ ಮಾಧ್ಯಮವನ್ನು ಅಳವಡಿಸಲಾಯಿತು.

ಮಾನ್ಯ ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರಾದ ಶ್ರೀಮತಿ ಸುಮಂಗಳಾ ಪಿ. ಕುಚಿನಾಡ ರವರ ಸಕಾಲಿಕ ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಔಚಿತ್ಯಪೂರ್ಣ ಮಾರ್ಗದರ್ಶನದಿಂದಾಗಿ ಲಾಕ್‌ಡೌನ್ ಸಂದರ್ಭದಲ್ಲಿ ವೆಬಿನಾರ್‌ಗಳನ್ನು ಆರಂಭಿಸಲಾಯಿತು.

ಕಲಿಕೆ ಪ್ರತಿ ಜೀವಿಯ ಸಹಜಗುಣ, ಅಭಿವೃದ್ಧಿಯ ಆಕರ ಈ ಕಲಿಕೆಯು ಮುಂದುವರೆದಲ್ಲಿ ಮಾತ್ರ ಕಲಿಕಾ ಪರಿಸರ ಕಲಿಯುವ ಜೀವಿ ಜೀವಂತವಾಗಿರಲು ಸಾಧ್ಯ ಆದ್ದರಿಂದ ವಿಶ್ವದಾದ್ಯಂತ ಪ್ರತಿ ದೇಶಗಳು ಅಲ್ಲಿನ ಕಾರ್ಯನಿರತರಿಗೆ ಅವರವರ ವಾರ್ಷಿಕ ಕಾರ್ಯನಿರ್ವಹಣಾ ಅವಧಿಯ ಶೇ 20 ರಷ್ಟನ್ನು ತರಬೇತಿಗೆ ಮೀಸಲಿರಿಸಿವೆ. ನಮ್ಮ ಭಾರತದಲ್ಲಿ ಈ ಸಮಯ ಕಡಿಮೆಯೇ ಇದೆ. ವಾರ್ಷಿಕವಾಗಿ ತರಬೇತಿಯು ಶಿಕ್ಷಣ ಇಲಾಖೆಯಲ್ಲಿ ಸಾಮಾನ್ಯವಾಗಿ ಹತ್ತು ದಿನಗಳದ್ದಾಗಿರುತ್ತದೆ. ಎನ್.ಇ.ಪಿ 2020 ಈ ಕಲಿಕಾ ಅವಧಿಗಳನ್ನು ವಾರ್ಷಿಕ 50 ಗಂಟೆಗಳಿಗೆ ಮಿಸಲಿರಿಸಿ ಶಿಫಾರಸ್ಸು ಮಾಡಿರುತ್ತದೆ. ಕೋವಿಡ್ – 19ರ ಹಿನ್ನಲೆಯಲ್ಲಿ ವೃತ್ತಿಪರ ಬೆಳವಣಿಗೆಯ ಭಾಗವಾಗಿ ಶಿಕ್ಷಕರ ಶಿಕ್ಷಣ ಅಥವಾ ಶಿಕ್ಷಕರ ಕಲಿಕೆ ನೆರವೇರಿಸಬೇಕಾದ ಸವಾಲು ನಮ್ಮ ಸಂಸ್ಥೆಯ ಮುಂದೆ ಬಂದಿತು. ಪರಿಸ್ಥಿತಿಗನುಗುಣವಾಗಿ ಉಪನಿರ್ದೇಶಕರು (ಅಭಿವೃದ್ಧಿ) ರವರ ನೇತೃತ್ವದಲ್ಲಿ ಡಯಟ್ ತಂಡವು ಸಂಕಷ್ಟದ ಸನ್ನಿವೇಶಕ್ಕೆ ಸ್ಥಿತಿಸ್ಥಾಪಕತೆಯ ರೂಪಾಂತರದ ಹೊಂದಾಣಿಕೆ ಮಾಡಿಕೊಂಡಿತು. ಅದರ ಫಲಶ್ರುತಿಯೇ ಆನ್‌ಲೈನ್ ತರಬೇತಿಗಳು.

ಈ ತರಬೇತಿಗಳನ್ನು ಎರಡು ಹಂತಗಳಲ್ಲಿ ಅನುಷ್ಠಾನಗೊಳಿಸಲು ನಿರ್ಧರಿಸಲಾಯಿತು. ಮೊದಲ ಹಂತದಲ್ಲಿ ಗುರುವಿಗೆ ಗುರುಗಳಾದ ಅಥವಾ ಸಂಪನ್ಮೂಲ ವ್ಯಕ್ತಿಗಳಾದ ಸಿ.ಆರ್.ಪಿ., ಬಿ.ಆರ್.ಪಿ. ಗಳನ್ನೊಳಗೊಂಡ ಮಾರ್ಗದರ್ಶಿ ಕಾರ್ಯನಿರತರಿಗೆ ಸತತವಾಗಿ 22 ದಿನಗಳ ಆನ್‌ಲೈನ್ ತರಬೇತಿಯನ್ನು ಆಯೋಜಿಸಲಾಯಿತು. ಎರಡನೇ ಹಂತದಲ್ಲಿ ಶಿಕ್ಷಕರಿಗೆ ಆನ್‌ಲೈನ್ ತರಬೇತಿಗಳನ್ನು 05 ದಿನಗಳಿಗೆ ಆಯೋಜಿಸಲಾಯಿತು. ಈ ತರಬೇತಿಗಳ ಆಯೋಜನೆ, ನಿರ್ವಹಣೆ ಮತ್ತು ಅನುಪಾಲನೆ, ಸವಾಲು, ಕಾರ್ಯತಂತ್ರ ಮತ್ತು ಸಂವಾದಗಳ ವಿವರಣೆಯನ್ನು ಈ

ಕೆಳಕಂಡಂತೆ ಕ್ಲುಪ್ತವಾಗಿ ದಾಖಲಿಸಿದೆ.

ತರಬೇತಿ ಆಯೋಜಿಸುವಾಗ ಮುಖಾಮುಖಿ ತರಬೇತಿಗೆ ಒಗ್ಗಿಕೊಂಡ ತರಬೇತುದಾರರು ಮತ್ತು ತರಬೇತಿ ಪಡೆಯುವವರನ್ನು ಅಂತರ್ಗತಗೊಳಿಸುವುದು ಸವಾಲಿನ ವಿಷಯವೇ. ಇದಕ್ಕೆ ಉಭಯತ್ರರು ಮೂಗು ಮುರಿದವರೇ, ತರಬೇತಿ ಸಾಧ್ಯವಿಲ್ಲ ಎಂದು ಭಾವಿಸಿದವರು, ಆಗಬಹುದು ಎಂದು ಬೆನ್ನು ತಟ್ಟಿದವರು ಹಾಗೂ ಅನುಮಾನಿಸಿದವರ ನಡುವೆ ಸಾಧ್ಯವೆಂದರೆ ಸಾಧ್ಯವೆಂದು ತರಬೇತಿಯನ್ನು ಆರಂಭಿಸಲಾಯಿತು. ಮೊದಲ ಹಂತದಲ್ಲಿ ತಾಂತ್ರಿಕ ಅಂಶ ಹಾಗೂ ಮೊಬೈಲ್, ಲ್ಯಾಪ್‌ಟ್ಯಾಪ್‌ಗಳಂತಹ ತಾಂತ್ರಿಕ ಸಲಕರಣೆಗಳಿಗೆ ಒಳಗೊಳ್ಳುವ, ಲಘುತಂತ್ರಕ್ಕೆ (Software) ಹೊಂದಿಕೊಳ್ಳುವ ತರಬೇತಿಯನ್ನೇ ಎರಡು ಬಾರಿ ಸಂಪನ್ಮೂಲ ವ್ಯಕ್ತಿಗಳಿಗೆ ಆಯೋಜಿಸಿ ಅವರ ವಿಶ್ವಾಸ ಗಳಿಸಲಾಯಿತು. ವಿಶೇಷವಾದ ಸಂತಸದ ಸಂಗತಿಯೆಂದರೆ ಈ ಪ್ರಯೋಗಾತ್ಮಕ ತರಬೇತಿಗೆ ಮುನ್ನ ಡಯಟ್‌ನಲ್ಲಿ ನಾವು ನಾವೇ ಹತ್ತಾರು ಜನ ತರಬೇತಿಯನ್ನು ಆಯೋಜಿಸಿಕೊಂಡು ಪುಟ್ಟ ಪ್ರಯೋಗವನ್ನು ಮಾಡಿಕೊಳ್ಳಲಾಗಿತ್ತು.

ನಂತರದ್ದು ಯಶೋಗಾಥೆ 22 ದಿನ ನಮ್ಮ ಡಯಟ್ ಎಲ್ಲಾ ಹಿರಿಯ ಉಪನ್ಯಾಸಕರು ಮತ್ತು ಉಪನ್ಯಾಸಕರು ಒಂದು ಅಥವಾ ಎರಡು ವಿಷಯಗಳಿಗೆ ಸಿದ್ದರಾಗಿ ತಾವೇ ತರಬೇತಿಯ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಸತತ 22 ದಿನ ಆನ್‌ಲೈನ್ ತರಬೇತಿಯು ಯಶಸ್ವಿಯಾಗಲು ಶ್ರಮಿಸಿದರು. ಕಾಣದ ಕೈಗಳಾಗಿ ತರಬೇತಿಗೆ ಗರಿ ಮೂಡಿಸಿದ ಲಿಪಿಕ ನೌಕರರು ಸಹಾ ಸ್ಮರಣೀಯ. ಆನ್‌ಲೈನ್ ತರಬೇತಿಗಳಲ್ಲಿ ಅಂತರ್‌ಕ್ರಿಯಾತ್ಮಕತೆಯು ಸವಾಲಿನ ವಿಷಯ ಈ ಸವಾಲನ್ನು ತಕ್ಕ ಮಟ್ಟಿಗೆ ಸಂವಾದದ ಮೂಲಕ ನಿವಾರಿಸಿಕೊಳ್ಳಲಾಯಿತು. ಪ್ರಶ್ನೋತ್ತರದ ಕೆಲವು ಸಂವಾದಗಳಂತೂ ಸಮಯ ಮೀರಿ ಒಂದುಗಂಟೆಯಿಂದ ಮೂರು ಗಂಟೆಗಳವರೆಗೂ ವಿಸ್ತ್ರತಗೊಂಡಿದ್ದು ಮಾರ್ಗದರ್ಶಿ ತಂಡದ ಆಸಕ್ತಿಯನ್ನು ತೋರುತಿತ್ತು. ಈ ಯಶಸ್ಸು ಶಿಕ್ಷಕರನ್ನು ನೇರವಾಗಿ ತಲುಪಲು ಅಡಿಗಲ್ಲಾಯಿತು.

ಶಿಕ್ಷಕರಿಗೆ ನೀಡಿದ 10 ದಿನಗಳ ತರಬೇತಿಯೂ ಮತ್ತೊಂದು ಸವಾಲಿನ ಕೆಲಸವಾಗಿತ್ತು. ಕಾರಣ ಯಾವುದೇ ಉಚಿತ ತಂತ್ರಾಂಶದ ಭಾಗವಹಿಸುವಿಕೆಯ ಮಿತಿ ನೂರು ಆಗಿತ್ತು. ಇದಕ್ಕೆ ಪರಿಹಾರವನ್ನು ಸಹಾ ಕಂಡುಕೊಳ್ಳಲಾಯಿತು. ಆಯಾ ಸಿ.ಆರ್.ಪಿ ರವರು ರಜೆಯ ಅವಧಿಯಲ್ಲಿ ತರಬೇತಿಯ ಫಲಾನುಭವಿಗಳಾಗಿ ಭಾಗವಹಿಸಿದ್ದವರನ್ನು ತರಬೇತಿಯ ಆಯೋಜಕರೂ ಮತ್ತು ಅತಿಥೇಯರನ್ನಾಗಿ (Host) ಪರಿವರ್ತಿಸುವ ಪರಿಹಾರಾತ್ಮಕ ಕ್ರಮ ಡಯಟ್‌ನಲ್ಲಿ ಆಯೋಜಿಸಲಾಯಿತು. ಹಾಗೆಯೇ ಆಯಾ ಬಿ.ಆರ್.ಸಿ. ಗಳಲ್ಲಿ ಸಮನ್ವಯಾಧಿಕಾರಿಗಳು ತಮ್ಮ ತರಬೇತಿಗೆ Host ಆಗಿ ಕಾರ್ಯನಿರ್ವಹಿಸುವ ತರಬೇತಿಯನ್ನು ಆಯೋಜಿಸಿ ಅವರನ್ನು ಸನ್ನದಗೊಳಿಸಿದರು. ಆನ್‌ಲೈನ್ ತರಬೇತಿಗಳ ನಿಜವಾದ ಯಶಸ್ಸು, ಫಲಶ್ರುತಿ ಮತ್ತು ಸಿ.ಆರ್.ಪಿ. ಗಳ ಆತ್ಮಗೌರವ ಹೆಚ್ಚಿಸುವ ನೈಜ ತರಬೇತಿ ಈ ಅತಿಥೇಯ ತಂತ್ರಾಂಶದ ಬಲವರ್ಧನಾ ತರಬೇತಿಯೇ ಆಗಿತ್ತು.

ಮೊದಮೊದಲು ಆಯೋಜಕರಾಗಿ ಸಿ.ಆರ್.ಪಿ.ಗಳು ಕೇಳುವ ಪ್ರಶ್ನೆ ಪಡೆದ ಯಶಸ್ಸಿಗೆ ಬೆಂಬಲ ಸಹಾಯಹಸ್ತವನ್ನು ಸಂಸ್ಥೆಯಿಂದ ನೀಡಲಾಯಿತು. ಸಂತಸದ ಉತ್ತುಂಗ ಆಮೇಲಿನ ಪ್ರತ್ಯುತ್ಪನ್ನವಾಗಿತ್ತು. ಶಿಕ್ಷಕರಿಗೆ ಸಿ.ಆರ್.ಪಿ ಗಳ ಮೂಲಕ ನೀಡಿದ ತರಬೇತಿಯು ಶಿಕ್ಷಕರಿಗೆ ನೀಡಿದ ಮೌಲ್ಯಯುತ ಸಂವಾದಗಳು ಅಭೂತಪೂರ್ವ ಯಶಸ್ಸನ್ನು ಪಡೆದವು ಆ ಯಶಸ್ಸಿನಲ್ಲಿ ನಮ್ಮ ಸಂಸ್ಥೆಯ ಎಲ್ಲರೂ ಸಾಕ್ಷಿಗಳಾಗಿ ಸಂತಸವನ್ನು ಅನುಭವಿಸಿದ್ದು ಅವಿಸ್ಮರಣೀಯ.

**ತರಬೇತಿಯಲ್ಲಿ ಚರ್ಚಿಸಿದ ಕೆಲವು ಪ್ರಮುಖ ಶೀರ್ಷಿಕೆಗಳು ಈ ಕೆಳಕಂಡಂತಿವೆ.**

| ಸಂಖ್ಯೆ | ವಿಷಯ |
|---|---|
| 1 | ವೆಬೆಕ್ಸ್ ಪರಿಚಯಾತ್ಮಕ ಕಾರ್ಯ, ಶಾಲಾರಂಭದ ಪೂರ್ವ ಸಿದ್ಧತೆ (ಬಿ.ಇ.ಒ. ಬಿ.ಆರ್.ಸಿ ಅವರೊಂದಿಗೆ) |
| 2 | ಕೋವಿಡ್ 19ರ ಇತಿಹಾಸ, ಸವಾಲುಗಳು – ಶಾಲಾ ದಿನಗಳು. |
| 3 | ರಜಾ ಅವಧಿಯಲ್ಲಿ ಶಿಕ್ಷಕರು ಮತ್ತು ಮಕ್ಕಳ ಕಾರ್ಯಗಳು, ಶಾಲಾ ಶೈಕ್ಷಣಿಕ ಯೋಜನೆ |
| 4 | ಸೇತುಬಂಧ, 7 ನೇ ತರಗತಿ ಕಲಿಕಾ ಚರ್ಚೆ |
| 5 | ಇ–ವೇಸ್ಟ್ ಮ್ಯಾನೇಜ್‌ಮೆಂಟ್, ಇ ಕಂಟೆಂಟ್ & ದೀಕ್ಷಾ ಪೋರ್ಟಲ್ ವಿವರ |
| 6 | ಶಾಲಾಭಿವೃದ್ಧಿ ಯೋಜನೆ |
| 7 | ಶಾಲಾ ಪಂಚಾಂಗ |
| 8 | ಯಶೋಗಾಥೆ & ದಾಖಲೀಕರಣ |
| 9 | ಜಿಲ್ಲಾ "ಸಮಗ್ರ ಶಿಕ್ಷಣ ಕರ್ನಾಟಕ" ಯೋಜನೆ – ಸಿದ್ಧತೆ |
| 10 | ರಚನಾವಾದ ಮತ್ತು ಕಲಿಕೆ ಅನುಕೂಲಿಸುವಿಕೆ, 5E ಮಾದರಿ ಚರ್ಚೆ |
| 11 | ಸಿ.ಸಿ.ಇ ಶಾಲಾಧಾರಿತ ಮೌಲ್ಯಾಂಕನ (ಎಸ್.ಬಿ.ಎ) |
| 12 | ವಿಜ್ಞಾನ ಪ್ರಯೋಗ, ಕಲಿಕೆ ಮತ್ತು ಸಂಘ ಸಂಸ್ಥೆಗಳ ಪಾತ್ರ |
| 13 | ಶನಿವಾರ ಸಂಭ್ರಮ |
| 14 | ಶಾಲಾ ನಾಯಕತ್ವ |
| 15 | ಕೆ.ಪಿ.ಎಸ್.ಶಾಲೆಗಳ ಸಿದ್ಧತೆಗಳು, – ಆಂಗ್ಲ ಮಾಧ್ಯಮ ಶಾಲಾ ಸಿದ್ಧತೆ, ಪೂರ್ವ ಪ್ರಾಥಮಿಕ ತರಗತಿಗಳು |
| 16 | 10 ಅಂಶಗಳ ಕಾರ್ಯಕ್ರಮ |
| 17 | ಶಾಲಾ ಭೇಟಿ, ಬೆಂಬಲ |
| 18 | 10 ನೇ ತರಗತಿ ಕಲಿಕೆ, ಪರೀಕ್ಷಾ ವಿವರ |
| 19 | ಎನ್.ಟಿ.ಎಸ್.ಇ. ಮತ್ತು ಎನ್.ಎಂ.ಎಂ.ಎಸ್ ವಿವರ |
| 20 | ಶಾಲಾ ಆರಂಭೋತ್ಸವ, ದಾಖಲಾತಿ ಆಂದೋಲನ |

ವೃತ್ತಿ ಪರ ಬೆಳವಣಿಗೆಯ ಮೇಲ್ಕಂಡ ಪ್ರತಿ ಅಂಶಗಳ ಬಹುಚರ್ಚಿತ ಹಾಗೂ ಅಭಿವೃದ್ಧಿ ಪೂರಕ ಮೇಲ್ಕಂಡ ವಿಷಯಗಳನ್ನು ಸಂಪನ್ಮೂಲ ವ್ಯಕ್ತಿಗಳೊಂದಿಗೆ ಹಂಚಿಕೊಂಡರೆ, ಶಿಕ್ಷಕರೊಂದಿಗೆ ಜೀವನ ಕೌಶಲದ ಅಂಶಗಳನ್ನು ಸೇರ್ಪಡೆಗೊಳಿಸಿಕೊಂಡು ನಿಯೋಜಿತ ಕಾರ್ಯಗಳನ್ನು ನೀಡುವ ಅಂತರ್‌ಕ್ರಿಯಾತ್ಮಕ ತರಬೇತಿಗಳನ್ನು ನೀಡಿದ್ದು ನಮಗೆ ಹೊಸ ಅನುಭವ. ಶಿಕ್ಷಕರು ತರಬೇತುದಾರರಾಗುವ ಹೊಸ ಅವಕಾಶ ತೆಗೆದುಕೊಂಡಿದ್ದು ಶಿಖರಗಾಮಿ ಪ್ರಯತ್ನವಾಗಿದೆ.

**ಜ್ಯೋತಿ ಕುಮಾರಿ ಕೆ.ವಿ.**
ಉಪನ್ಯಾಸಕರು, ಡಯಟ್, ಶಿವಮೊಗ್ಗ

# ನಿಷ್ಠಾ ತರಬೇತಿಯ ಮುನ್ನೋಟ

ಸಮಗ್ರ ಶಿಕ್ಷಣ ಯೋಜನೆ ಅಡಿಯಲ್ಲಿ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು 2019-20ರಲ್ಲಿ ವಿನೂತನವಾಗಿ NISHTHA ಕಾರ್ಯಕ್ರಮವನ್ನು ಜಾರಿಗೆ ತಂದಿತು. NISHTHA ಅಂದರೆ National Initiative for School Heads and Teachers Holistic Advancement ("ಶಾಲಾ ಮುಖ್ಯಸ್ಥರು ಮತ್ತು ಶಿಕ್ಷಕರ ಸಮಗ್ರ ಮುನ್ನಡೆಗಾಗಿ ರಾಷ್ಟ್ರೀಯ ಉಪಕ್ರಮ") ಎಂಬ ಅರ್ಥವನ್ನು ಹೊಂದಿದೆ.

**ನಿಷ್ಠಾ ತರಬೇತಿಯ ಉದ್ದೇಶಗಳು :**

* ಶಿಕ್ಷಕರು ಮತ್ತು ಸಂಪನ್ಮೂಲ ವ್ಯಕ್ತಿಗಳಲ್ಲಿ ಹೊಸ ಬೋಧನಾ ಕಲಿಕಾ ಪದ್ಧತಿಗಳ ದೃಷ್ಟಿಕೋನಗಳನ್ನು ಅರ್ಥೈಸಿಕೊಳ್ಳುವಂತೆ ಮಾಡುವುದರ ಮೂಲಕ ಮಕ್ಕಳು ಕಲಿಕಾ ಫಲಗಳನ್ನು ಉತ್ತಮವಾಗಿ ಗಳಿಸುವಂತೆ ಮಾಡುವುದು.
* ಶಿಕ್ಷಕರು ಶಾಲಾಧಾರಿತ ಮೌಲ್ಯಾಂಕನವನ್ನು ತಮ್ಮ ಶಾಲೆಗಳಲ್ಲಿ ಅನುಷ್ಠಾನಗೊಳಿಸುವಂತೆ ಸಹಾಯ ಮಾಡುವುದು.
* ಪ್ರತಿ ತರಗತಿಯ ವಿಷಯಗಳಲ್ಲಿ ನಿಗದಿಪಡಿಸಿದ ಎಲ್ಲಾ ಕಲಿವಿನ ಫಲಗಳನ್ನು ಮಕ್ಕಳು ಗಳಿಸುವಂತೆ ಮಾಡಲು ಶಿಕ್ಷಕರ ಸಾಮಾರ್ಥ್ಯವನ್ನು ವೃದ್ಧಿಸುವುದು.
* ಕಲಿಕಾ ಫಲಗಳು, ರಾಷ್ಟ್ರೀಯ ಮೌಲ್ಯಾಂಕನ ಸಮೀಕ್ಷೆಯ ಅಂಶಗಳು ಇತ್ಯಾದಿಗಳ ಅನುಪಾಲನೆಗಾಗಿ, ಶಾಲೆಗಳಲ್ಲಿ ನಾವೀನ್ಯಯುತ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಮುಖ್ಯಶಿಕ್ಷಕರನ್ನು ಸಿದ್ಧಗೊಳಿಸುವುದು.

ನಿಷ್ಠಾ ತರಬೇತಿಯನ್ನು ಎರಡು ವಿಭಾಗಗಳಲ್ಲಿ ಪ್ರಸ್ತುತಪಡಿಸಲಾಗಿದೆ. ಮೊದಲನೆಯ ವಿಭಾಗವು ಸಾಮಾನ್ಯ ವಿಭಾಗವಾಗಿದ್ದು. 7 ಮಾಡ್ಯುಲ್‌ಗಳನ್ನು ಹಾಗೂ ಎರಡನೇಯ ವಿಭಾಗವು ವಿಷಯಾಧಾರಿತವಾದ ಬೋಧನಾ ಕಲಿಕಾ ವಿಷಯಗಳು 5 ಮಾಡ್ಯುಲ್‌ಗಳನ್ನು ಒಳಗೊಂಡಿರುತ್ತದೆ. ಹಾಗೂ SRP ಗಳು ನಿರ್ವಹಿಸುವ 5 ಮಾಡ್ಯುಲ್‌ಗಳು ಸೇರಿದಂತೆ ವಿನೂತನವಾದ ಕೋವಿಡ್-19 ಕುರಿತಂತೆ ಒಂದು ಮಾಡ್ಯುಲ್ ಒಳಗೊಂಡಂತೆ ಒಟ್ಟಾರೆ 18 ಮಾಡ್ಯುಲ್‌ಗಳಿವೆ.

ತರಬೇತಿಯನ್ನು Online ಮೂಲಕ ನೀಡಲು ಉದ್ದೇಶಿಸಿರುತ್ತಾರೆ. NCERT 60ನೇ ವರ್ಷ ಸ್ಥಾಪನೆಯ ಹಿನ್ನಲೆಯಲ್ಲಿ ನಿಷ್ಠಾ ತರಬೇತಿಯ ಆನ್‌ಲೈನ್ ಮಾಡ್ಯುಲ್‌ಗಳನ್ನು ಮಾನ್ಯ ಕೇಂದ್ರ ಶಿಕ್ಷಣ ಸಚಿವರಾದ ಶ್ರೀ ರಮೇಶ್ ಪೋಕ್ರಿಯಾಲ್ ಇವರಿಂದ ಉದ್ಘಾಟನೆಯಾಯಿತು.

**ನಿಷ್ಠಾ ತರಬೇತಿಗೆ ಸಿದ್ಧತೆ :** ಜಿಲ್ಲಾ ಹಂತ ತಾಂತ್ರಿಕ ಮತ್ತು ಅನುಷ್ಠಾನದ ಸಮಿತಿಯನ್ನು ಮಾನ್ಯ ಉಪನಿರ್ದೇಶಕರು (ಅಭಿವೃದ್ಧಿ) ಇವರ ನೇತೃತ್ವದಲ್ಲಿ ರಚನೆ ಮಾಡಿದ್ದು ಬ್ಲಾಕ್ ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ನೇತೃತ್ವದಲ್ಲಿ ತಾಂತ್ರಿಕ ಮತ್ತು ಅನುಷ್ಠಾನ ಸಮಿತಿಯನ್ನು ರಚನೆ ಮಾಡಲಾಗಿದೆ.

ರಾಜ್ಯ ಹಂತದಲ್ಲಿ 42,000 ಶಿಕ್ಷಕರಿಗೆ ತರಬೇತಿ ನೀಡುವ ಗುರಿಹೊಂದಿದ್ದು, ಶಿವಮೊಗ್ಗ ಜಿಲ್ಲೆಯಲ್ಲಿ 5604 ಶಿಕ್ಷಕರಿಗೆ ನಿಷ್ಠಾ ತರಬೇತಿ ನೀಡುವ ಗುರಿ ಹೊಂದಿದ್ದು ಇದಕ್ಕೆ ಪೂರ್ವ ತಯಾರಿಯಾಗಿ ರಾಜ್ಯ ಹಂತದಲ್ಲಿ 40 KRPಗಳು ಹಾಗೂ 8 SRP ಗಳು ತರಬೇತಿ ಪಡೆದಿರುತ್ತಾರೆ.

**ಶೇರ್ ಅಲಿ ಹೆಚ್.ಆರ್.**
ಹಿರಿಯ ಉಪನ್ಯಾಸಕರು, ಡಯಟ್, ಶಿವಮೊಗ್ಗ

# ಲಾಕ್‌ಡೌನ್ ಸಮಯದಲ್ಲಿ ಪುಟಿದೆದ್ದ "ವಾಟ್ಸ್‌ಆಪ್" ತಂಡದ ಯಶೋಗಾಥೆ

ಏಪ್ರಿಲ್ ತಿಂಗಳ ರಜೆಯಲ್ಲಿ ಒಂದಿಷ್ಟು ಪುಸ್ತಕಗಳನ್ನು ಓದಲು ತಯಾರು ಮಾಡಿಕೊಂಡು ಕುಳಿತಿದ್ದೆ ಗೆಳತಿಯೊಬ್ಬಳ ವಾಟ್ಸ್‌ಆಪ್ ಸ್ಟೇಟಸ್‌ನಲ್ಲಿ 'Queen of the Quiz' ಎಂಬ ಕಿರೀಟ ನೋಡಿದೆ. ಖುಷಿಯಿಂದ ಏನೆಂದು ಕೇಳಿದೆ. ಆನ್‌ಲೈನ್ ಕ್ವಿಜ್ ನಿನಗೂ ಆಸಕ್ತಿ ಇದ್ದರೆ ಸೇರು ಅಂದಳು. ಮೊದಲಿನಿಂದಲೂ ಕ್ವಿಜ್ ಅಂದ್ರೆ ತುಂಬಾ ಇಷ್ಟಪಡುವ ನಾನು ನನ್ನನ್ನು ಸೇರಿಸು ಅಂದೆ. ಮಾರನೆ ದಿನ ಒಂದು ಪೋನ್‌ಕಾಲ್ ಬಂತು. ಪೂರ್ವ ಪರೀಕ್ಷೆ ಪ್ರಶ್ನೆ ಪತ್ರಿಕೆ ಕೊಡುತ್ತೇನೆ ಉತ್ತರ ಬರೆದು ಹಾಕಿ ಎಂಬ ಸುಮಧುರವಾದ ಮಹಿಳಾ ಸುಗಮಕಾರರ ಧ್ವನಿ. ಸರಿ ಮೇಡಂ ಎಂದು ಬರೆದು ಹಾಕಿದೆ. ನನ್ನೆಲ್ಲಾ ಪೂರ್ವಜ್ಞಾನದ ಪರೀಕ್ಷೆ ಅದಾಗಿತ್ತು. 20 ಕ್ಕೆ 19 ಅಂಕ ಬಂತು. ಒಂದು ಅಂಕ ಹೋಯ್ತಲ್ಲ ಅಂತ ಬೇಸರನೂ ಆಯ್ತು. ನಾನು ಗುಂಪಿನ ಹೊಸ ಸದಸ್ಯೆ ಆದೆ. ಗುಂಪಿನಲ್ಲಿ ಪರಿಚಯ ಮಾಡಿಕೊಂಡು. ಗುಂಪು ನೋಡುತ್ತೇನೆ ಈಗಾಗಲೇ 60 ಮಂದಿ ಇದ್ದಾರೆ. ಎಲ್ಲರೂ ಮಹಿಳಾ ಸುಗಮಕಾರರು (ಡಯಟ್ ಉಪನ್ಯಾಸಕರು ಹಾಗೂ ಸಂಪನ್ಮೂಲ ವ್ಯಕ್ತಿಗಳನ್ನು ಹೊರತುಪಡಿಸಿ) ಗುಂಪಿನ ನಾಮಕರಣ ಈಗಾಗಲೇ(ಆಗಿತ್ತು) 'ನಲಿಕಲಿ ಕ್ರಿಯಾಶೀಲ ತಾರೆಯರು' ಎಂದಾಗಿತ್ತು. ತಾರೆಯರು ನಿಜವಾಗಲೂ ಹೌದು ಹಿರಿಯ – ಕಿರಿಯ ಪ್ರಕಾಶಮಾನ ತಾರೆಯರು ಈ ಗುಂಪಿನಲ್ಲಿ ಈಗಾಗಲೇ ವಿರಾಜಮಾನರಾಗಿದ್ದರು. ಮಹಿಳೆಯರದ್ದೆ ತಂಡವಾಗಿರುವುದರಿಂದ ಅನಿಸಿಕೆ ಅಭಿಪ್ರಾಯಗಳನ್ನು ನಾವು ಮುಕ್ತವಾಗಿ ಹಂಚಿಕೆ ಮಾಡಿಕೊಳ್ಳಲು ಯಾವುದೇ ಮುಜುಗರ ಇರುತ್ತಿರಲಿಲ್ಲ. ಲಾಕ್‌ಡೌನ್ ಸಂದರ್ಭದಲ್ಲಿ ಏಪ್ರಿಲ್ 04 ರಿಂದ ಆರಂಭವಾದ ಈ ಗುಂಪು ನಮ್ಮ ಜ್ಞಾನದ ಹಸಿವಿಗೆ ಮೃಷ್ಟಾನ್ನ ಭೋಜನವನ್ನೇ ಕೊಡುತ್ತಾ ಬಂತು. ಅದರ ವೈಶಿಷ್ಟ್ಯತೆ ಬಗ್ಗೆ ಒಂದಿಷ್ಟನ್ನು ನಿಮ್ಮ ಮುಂದೆ ಹಂಚಿಕೊಳ್ಳುತ್ತಿದ್ದೇನೆ.

ನಾವೆಲ್ಲಾ ತಾರೆಯರಾದರೆ ಈ ಗುಂಪಿನ 'ಸ್ಪರ್ಶಮಣಿ' ಹಾಗೂ ಸಾರಥಿ ಶ್ರೀಮತಿ ಫೌಜಿಯಾ ಷರಾವತ್. ನಲಿಕಲಿ ಸಂಪನ್ಮೂಲ ವ್ಯಕ್ತಿಯಾಗಿ ಚಿರಪರಿಚಿತರಾಗಿರುವ ಇವರಿಗೆ ಇಂಥಹದೊಂದು ಕನಸೇ ಈ ತಂಡ ಕೊರೊನಾ ಸಮಯದಲ್ಲಿ ನಮಗೆ ಬಿಡುವಿಲ್ಲದಷ್ಟು ಚಟುವಟಿಕೆ ನೀಡಿ ತಂಡದ ನಿಯಮಾನುಸಾರ ಕ್ರಿಯಾಶೀಲವಾಗಿ ಮುಂದುವರಿಸಿಕೊಂಡು ಬಂದಿರುವುದು ಅವರ ಕಾರ್ಯಚಾತುರ್ಯ ಎಂದರೂ ತಪ್ಪಾಗಲಾರದು.

ಈ ತಂಡದಲ್ಲಿ 'ರಸಪ್ರಶ್ನೆ' ಎಂಬ ಶೀರ್ಷಿಕೆಯಲ್ಲಿ ಒಂದು ಚಟುವಟಿಕೆ ನಡೆಯುತ್ತೆ. ನಿಮಗೆ ರಸಪ್ರಶ್ನೆ ಅಂದರೆ ಏನು ವಿಶೇಷ. ಒಂದಿಷ್ಟು ಪ್ರಶ್ನೆಗಳು ಕೇಳ್ತಾರೆ ಉತ್ತರ ನೀಡಿದರಾಯ್ತು ಅನಿಸಬಹುದು. ಆದರೆ ಈ ತಂಡದಲ್ಲಿ ಹಾಗಲ್ಲ ನಲಿಕಲಿ ಸಂಪನ್ಮೂಲ ಸಾಹಿತ್ಯ, ಶಿಕ್ಷಣ, ರಂಗಕಲೆ, ಸಮನ್ವಯ ಶಿಕ್ಷಣ, ಲಿಂಗ ಅಸಮಾನತೆ ಹೀಗೆ ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ವಾರಕ್ಕೆ 4 ಆಡಿಯೋಗಳನ್ನು ಸಂಪನ್ಮೂಲ ವ್ಯಕ್ತಿಗಳು ಭಾನುವಾರ ಬೆಳ್ಳಿಗ್ಗೆ 11 ಗಂಟೆಗೆ ಕಳುಹಿಸುತ್ತಾರೆ. ಕನಿಷ್ಠ 20 ನಿಮಿಷದ ಆಡಿಯೋವನ್ನು ಆಲಿಸಿಕೊಂಡು ಅರ್ಥೈಸಿಕೊಂಡು ನೋಟ್ಸ್ ಮಾಡಿಕೊಳ್ಳುತ್ತಿದ್ದೆವು 12:30ಕ್ಕೆ ಪ್ರಶ್ನೆ ಪತ್ರಿಕೆ ಬರುತ್ತಿತ್ತು 20 ಅಂಕಗಳಿಗೆ ಸೀಮಿತವಾದ ಈ ಪತ್ರಿಕೆಯಲ್ಲಿ ಬಿಟ್ಟಸ್ಥಳ,

ಸರಿತಪ್ಪು, ಒಂದು – ಎರಡು ಅಂಕದ ಪ್ರಶ್ನೆಗಳು ಹಾಗೂ ಅನ್ವಯಿಕ ಪ್ರಶ್ನೆಗಳು ಇರುತ್ತಿದ್ದವು. ನೀವು ನಂಬುತ್ತಿರೋ ಇಲ್ಲವೊ ಗೊತ್ತಿಲ್ಲ. ಇಲ್ಲಿ ಉತ್ತರ ಬರೆದು ಹಾಕುವಲ್ಲಿ ಬಹು ಪೈಪೋಟಿ ನಡೆಯುತ್ತಿತ್ತು. ಸಂಪೂರ್ಣ ಅಂಕ ಪಡೆದು ಮೊದಲು ಹಾಕಿದ ಸುಗಮಕಾರರು ಇಲ್ಲಿ 'Queen of the Quiz' ಎಂಬ ಕಿರೀಟಧಾರಣೆಗೆ ಭಾಜನರಾಗುತ್ತಿದ್ದರು ನಮಗೆ ಈ ವಾರ ಯಾರು ಆಗುತ್ತಾರೆ ಎಂಬ ಕುತೂಹಲವಾದರೆ, ಫೌಜಿಯಾ ಮೇಡಂಗೆ 45 – 50 ಉತ್ತರ ಪತ್ರಿಕೆಯನ್ನು ತಿದ್ದಿ ಅಂಕ ನೀಡಿ, ತಾಂತ್ರಿಕ ನೈಪುಣ್ಯತೆಯಿಂದ ಸುಂದರವಾದ ವಿನ್ಯಾಸದ ಮೂಲಕ ಕೃತಿರೂಪಕ್ಕೆ ತರುವುದು ಸುಲಭದ ಮಾತಲ್ಲ. ಈ ಚಟುವಟಿಕೆ ತುಂಬಾ ಮನ್ನಣೆಗೂ ಪಾತ್ರವಾಯ್ತು.

ವಿಶೇಷವಾಗಿ ಹಿರಿಯ ಉಪನ್ಯಾಸಕರಾದ ಶ್ರೀಯುತ ಫಣೀಶ್, ಹಿರಿಯ ಉಪನ್ಯಾಸಕರು ನಮ್ಮ ತಂಡದ ನಿರಂತರ ಎನರ್ಜಿ ಬೂಸ್ಟರ್. ನನಗೆ ಅವರನ್ನು ಪ್ರೀತಿಯಿಂದ ಹೆಡ್‌ಮಾಸ್ಟರ್ ಅನ್ನಬೇಕು ಅನಿಸುತ್ತದೆ. ಅವರ ತಾಳ್ಮೆ ಪ್ರತಿಯೊಂದು ಸಂದೇಹಗಳಿಗೆ ಅವರು ನೀಡುವ ಪ್ರತಿಕ್ರಿಯೆ ಹಾಗೂ ನಮ್ಮನ್ನು ಬೆಂಬಲಿಸುವ ಪರಿಯನ್ನು ನೋಡಿದಾಗ ಅವರೊಬ್ಬ ಹಿರಿಯ ಅಧಿಕಾರಿ ಅನ್ನುವುದನ್ನು ಮರೆತು ನಾವು ನಮ್ಮ ಶಾಲೆಯ ಒರ್ವ ಹೆಡ್‌ಮಾಸ್ಟರ್ ಏನೋ ಅನ್ನುವ ಆಪ್ತತೆ ತೋರುತ್ತೇವೆ. ನಮ್ಮನ್ನು ತಿದ್ದುತ್ತಾ, ಪ್ರೋತ್ಸಾಹಿಸುತ್ತಾ, ಅಗತ್ಯವಾದ ಸಲಹೆ ನೀಡಿ ನಮ್ಮ ಚಟುವಟಿಕೆಯಲ್ಲಿ ನಾವೇನು ಬದಲಾವಣೆ ಮಾಡಿಕೊಳ್ಳಬಹುದು ಎಂಬುದನ್ನು ವಿಮರ್ಶಿಸುವಂತೆ ಮಾಡುವ ಅವರ ಚೈತನ್ಯಕ್ಕೆ ವೈಯುಕ್ತಿಕವಾಗಿ ಧನ್ಯವಾದಗಳನ್ನು ಸಲ್ಲಿಸುತ್ತಿದ್ದೇನೆ.

ಅಬ್ಬಬ್ಬಾ! ಒಂದು ವಾಟ್ಸ್‌ಆಫ್ ಗ್ರೂಪ್ ಇಷ್ಟೆಲ್ಲಾ ಮಾಡಬಹುದಾ ? ಎಂಬ ಅಚ್ಚರಿ ನಿಮಗಾಗುತ್ತಿದೆ ಅಲ್ವಾ ? ಇದು ಖಂಡಿತ ಸಾಧ್ಯ ಎಂಬುದನ್ನು ನಾವು ಮಾಡಿತೋರಿಸಿದ್ದೇವೆ. ಸಾಮಾನ್ಯವಾಗಿ ವಾಟ್ಸ್‌ಆಫ್ ಗ್ರೂಪ್‌ನಲ್ಲಿ ಅಲ್ಲಲ್ಲಿ ತಳ್ಳಲ್ಪಟ್ಟ ಒಂದಿಷ್ಟು ಮೆಸೇಜ್‌ಗಳು, ವಿಡಿಯೋಗಳು ಬರುತ್ತವೆ. ಹಾಗಾಗಿ ಗ್ರೂಪ್ ಎಂದರೆ ವಾಕರಿಕೆ ಬಂದು ಡಿಲೀಟ್‌ಆಲ್ ಕೊಡುವ ಸಂದರ್ಭಗಳೂ ಬರುತ್ತವೆ. ಅದಕ್ಕೆ ತದ್ವಿರುದ್ಧವಾಗಿ ಕ್ರಿಯಾಶೀಲವಾಗಿ ಒಂದು ವಾಟ್ಸ್‌ಆಫ್ ಗ್ರೂಫ್ ಹೀಗೆ ನಡೆಯಬಹುದು ಎಂಬುದಕ್ಕೆ ಪ್ರತ್ಯಕ್ಷ ಉದಾಹರಣೆ ನಮ್ಮ ನಲಿಕಲಿ ಕ್ರಿಯಾಶೀಲ ತಾರೆಯರ ಗುಂಪು. ಆರಂಭದಲ್ಲಿದ್ದ ಉತ್ಸಾಹ, ಬದ್ಧತೆ ಇಂದಿಗೂ ಎಲ್ಲರಲ್ಲಿ ಇರುವಂತೆ ಪ್ರೇರಣೆ ನೀಡುತ್ತಿರುವ ನಮ್ಮ ಸಾರಥಿಗೆ ಅಭಿನಂದನೆಗಳು.

ಈ ತಂಡಕ್ಕೆ ನಿರಂತರವಾಗಿ ಮಾರ್ಗದರ್ಶನ ಮಾಡುತ್ತಾ ಬಂದಿರುವ ಪ್ರೇರಕ ಶಕ್ತಿಗಳೆಂದರೆ. ಡಯಟ್‌ನ ಪ್ರಾಂಶುಪಾಲರಾದ ಶ್ರೀಮತಿ ಸುಮಂಗಳಾ ಪಿ. ಕುಚಿನಾಡರವರು, ಉಪನ್ಯಾಸಕರಾದ ಶ್ರೀಮತಿ ರೇಣುಕಾ ಹಾಗೂ ಶ್ರೀಮತಿ ಫಾತಿಮಾ ನಿರಂತರವಾಗಿ ವೆಬಿನಾರ್‌ನಲ್ಲಿ ನಮಗೆ ಮಾರ್ಗದರ್ಶನ ಮಾಡುತ್ತಿದ್ದರು. ಉಳಿದ ಉಪನ್ಯಾಸಕ ವೃಂದದವರೂ, ಹಿರಿಯ ಉಪನ್ಯಾಸಕರು ಸಲಹೆ ಮಾರ್ಗದರ್ಶನ ಮಾಡುತ್ತಾ ನಮ್ಮ ತಂಡ ಮುನ್ನಡೆಸಲು ಪ್ರೇರಣೆಯಾಗಿದ್ದಾರೆ. ಎಲ್ಲಾ ಹಿರಿಯ ಅಧಿಕಾರಿಗಳಿಗೆ ನಾವು ಆಭಾರಿಯಾಗಿದ್ದೇವೆ.

**ರೇಖಾ.ಪಿ. ಕುಲಾಲ್**
ಸಹಶಿಕ್ಷಕಿ, ಸ.ಹಿ.ಪ್ರಾ.ಶಾಲೆ ನೂಲಿಗ್ಗೇರಿ
ಹೊಸನಗರ ತಾ॥

# "ಪ್ರಚಲಿತ ವಿದ್ಯಾಮಾನಗಳಲ್ಲಿ ಶಿಕ್ಷಣ "

ಮೇ ತಿಂಗಳು ಬಂತೆಂದರೆ ಶಾಲಾ ಮಕ್ಕಳಿಗೆ ಎಲ್ಲಿಲ್ಲದ ಉತ್ಸಾಹ ಏಕೆಂದರೆ ಪರೀಕ್ಷೆ. ಬರೆದು ಉತ್ತೀರ್ಣರಾಗಿ ಮುಂದಿನ ತರಗತಿಗೆ ಕುಳಿತುಕೊಳ್ಳಲು ಎಷ್ಟೊಂದು ಉತ್ಸಾಹವಿತ್ತು. ಶಾಲಾ ಕಾಲೇಜುಗಳು ಇಷ್ಟೋತ್ತಿಗಾಗಲೆ ಪ್ರಾರಂಭಗೊಂಡು ಶಾಲಾ ಆವರಣ ಕಂಗೊಳಿಸುತ್ತಿತ್ತು. ಶಿಕ್ಷಕರು ಹಸನ್ಮುಖರಾಗಿ ಮಕ್ಕಳನ್ನು ಹೊಸ ತರಗತಿಗಳಿಗೆ ಸ್ವಾಗತಿಸಿ ಕ್ರಿಯಾಶೀಲರಾಗಿ ಕಾರ್ಯೋನ್ಮುಖರಾಗುತ್ತಿದ್ದರು. ಆದರೆ ಇಂದು ಪ್ರಪಂಚದಾದ್ಯಂತ ಚೈನಾ ದೇಶದಿಂದ ಹರಡುತ್ತಿರುವ ಮಹಾಮಾರಿಯಾಗಿ ಎಲ್ಲರನ್ನು ಕಾಡುತ್ತಿರುವ ಕೋವಿಡ್ – 19 ಸೋಂಕು ತಗುಲಿ ಇಡೀ ಪ್ರಪಂಚವನ್ನೆ ಕಾಡುತ್ತಿದೆ.

ಈ ಹಿನ್ನಲೆಯಲ್ಲಿ ಭಾರತ್ ಲಾಕ್‌ಡೌನ್ ಮಾಡಿದರೂ ಸಹ ಕೊರೋನಾ ಪೀಡನೆ ತಡೆಗಟ್ಟಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಶಾಲಾ ಕಾಲೇಜುಗಳು ಸಹ ಪ್ರಾರಂಭವಾಗಿಲ್ಲ. ಸರ್ಕಾರವು ಸಹ ಕೇಂದ್ರದ ಆದೇಶವನ್ನು ಪರಿಪಾಲಿಸಬೇಕಾಗಿದೆ. ದಿನೇ ದಿನೇ ಹೆಚ್ಚುತ್ತಿರುವ ಕೊರೊನ ಹಿನ್ನಲೆಯಲ್ಲಿ ಪೋಷಕರು ಮಕ್ಕಳನ್ನು ಶಾಲೆಗೆ ಕಳಿಸುವುದಕ್ಕೆ ಧೈರ್ಯವಿಲ್ಲದೆ ಮಾನಸಿಕವಾಗಿ ತೊಳಲಾಡುವಂತಾಗಿದೆ.

ಕೆಲವು ಶಾಲೆಗಳಲ್ಲಿ ಅಂತರ್ಜಾಲ ತರಗತಿಗಳನ್ನು ಅಂದರೆ ಆನ್‌ಲೈನ್ ತರಗತಿ ಶುರುಮಾಡುವುದರ ಮೂಲಕ ಮಕ್ಕಳ ಕಲಿಕೆಗೆ ಗಮನ ಕೊಡುತ್ತಿದ್ದಾರೆ. ಆದರೆ ನಗರದಲ್ಲಿ ವಾಸಮಾಡುವ ವಿದ್ಯಾರ್ಥಿಗಳಿಗೆ ಮಾತ್ರ ಈ ಶಿಕ್ಷಣ ಲಭ್ಯವಿದೆ. ಆದರೆ ಎಷ್ಟರ ಮಟ್ಟಿಗೆ ಪರಿಣಾಮಕಾರಿ ಆಗಬಹುದು. ಏಕೆಂದರೆ ತರಗತಿಯಲ್ಲಿ ಕುಳಿತು ಕಲಿತ ಮಕ್ಕಳಿಗೆ ಒಮ್ಮೊಮ್ಮೆ ಸರಿಯಾಗಿ ಅರ್ಥ ಆಗಲಾರದು. ಇದು ಶೈಕ್ಷಣಿಕವಾಗಿ ವಿದ್ಯಾರ್ಥಿಗಳ ಪ್ರಗತಿಗೆ ಪೂರಕವಾಗಲಾರದು. ಆದರೆ ನಮ್ಮ ಹಳ್ಳಿಯ ಶಾಲೆ ಮಕ್ಕಳು ಬಹಳವಾಗಿ ಬಡ ಕುಟಂಬದಿಂದ ಬರುವವರು ಬಸ್ಸಿನ ಸೌಕರ್ಯಗಳು ಕಡಿಮೆ ಮತ್ತು ಇಂಟರ್‌ನೆಟ್ ಬಳಕೆ ಎಲ್ಲರಿಗೂ ಸೌಲಭ್ಯ ಇರುವುದಿಲ್ಲ. ಆದರೂ ನಮ್ಮ ಶಿಕ್ಷಣ ಇಲಾಖೆ ವತಿಯಿಂದ ಎಲ್ಲಾ ಶಿಕ್ಷಕರಿಗೆ ಆನ್‌ಲೈನ್, ವಿದ್ಯಾಗಮ ಮತ್ತು ಜೀವನ ಕೌಶಲ ತರಬೇತಿ ನೀಡಿರುವುದು, ಬಹಳ ಪ್ರಶಂಸನೀಯವಾಗಿದೆ. ಈ ಮೂಲಕ ಅವರವರ ಶಾಲಾ ಮಕ್ಕಳನ್ನು ತರಬೇತಿಯ ಮಾರ್ಗದರ್ಶನದಂತೆ ಕಲಿಕಾ ಗುಂಪುಗಳನ್ನಾಗಿ ಮಾಡಿ ಆನ್‌ಲೈನ್ ಕಲಿಕಾ ಕೊಠಡಿಗಳನ್ನು ತಯಾರು ಮಾಡಿ ಅವುಗಳ ಮೂಲಕ ಕಲಿಕಾ ಪ್ರಕ್ರಿಯೆ ಪ್ರಾರಂಭವಾಗಿದೆ.

ತರಗತಿ ವಿಧ – 1, ತರಗತಿ ವಿಧ –2, ತರಗತಿ ವಿಧ –3, ತಯಾರು ಮಾಡಿಕೊಂಡು ಇದರಿಂದ ಮಕ್ಕಳು ಯಾವುದೇ ಖರ್ಚಿಲ್ಲದೆ ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಅನುಕೂಲವಾಗಿದೆ. ಇದಲ್ಲದೆ ಯೂಟ್ಯೂಬ್ ಟಿ ವಿ ಚಾನಲ್‌ನಲ್ಲೂ ಸಹ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟು ಶಾಲಾ ಮಕ್ಕಳಿಗೆ ಕಲಿಕೆಯ ಹಾದಿಯಲ್ಲಿ ಪ್ರಶಂಸನೀಯವಾಗಿದೆ. ಅದರಲ್ಲೂ ಚಂದನ ವಾಹಿನಿ ಟಿ.ವಿ. ಚಾನಲ್‌ನಲ್ಲೂ ಸಹ ತರಗತಿವಾರು ಮತ್ತು ವಿಷಯವಾರು ತರಗತಿಗಳಿಗೆ ಪ್ರಸಾರ ಮಾಡಿ ಮಕ್ಕಳ ಕಲಿಕೆಯನ್ನು ಕ್ರಿಯಾಶೀಲ ಗೊಳಿಸಲು ಸಹಕಾರಿಯಾಗಿದೆ. ವಿದ್ಯಾಗಮ ನಿರಂತರ ಕಲಿಕೆಯನ್ನು ಸಾರ್ವತ್ರಿಕ ನಿಯಮದ ಮೇರೆಗೆ ಮೊಬೈಲ್ ಬಳಕೆ ಇಲ್ಲದ ಕಲಿಕೆಯ ಗುಂಪುಗಳನ್ನಾಗಿ ಮಾಡಿ, ಬಸ್ಸಿನ ಸಂಚಾರ ವ್ಯವಸ್ಥೆ ಇಲ್ಲದಿದ್ದರೂ ಸಹ ಸ್ವತ: ವಾಹನ ವ್ಯವಸ್ಥೆ ಮಾಡಿಕೊಂಡು ಆ ಮಕ್ಕಳು ಇರುವ ಹಳ್ಳಿಗಳಿಗೆ ಹೋಗಿ ದೇವಸ್ಥಾನ ಅಥವಾ ಕಲ್ಯಾಣ ಮಂದಿರ, ಕಟ್ಟೆಗಳ ಮೇಲೆ ಕೂರಿಸಿಕೊಂಡು ಮುಖಕ್ಕೆ ಮಾಸ್ಕ್ ಧರಿಸಿ ಸಾಮಾಜಿಕ ಅಂತರ

ಕಾಯ್ದುಕೊಂಡು ಕಲಿಕೆಯ ಹಂತಕ್ಕೆ ಒಳಪಡಿಸಿರುವುದು ನಮ್ಮ ಶಿಕ್ಷಣ ಇಲಾಖೆಯೇ ಹೆಮ್ಮೆಪಡುವಂತಹ ವಿಚಾರವಾಗಿದೆ.

ಪ್ರಚಲಿತ ವಿದ್ಯಮಾನಗಳಲ್ಲಿ ಶಿಕ್ಷಣವನ್ನು ಶಾಲಾ ಮಕ್ಕಳಿಗೆ ಕಾರ್ಯಗತಗೊಳಿಸುವಲ್ಲಿ ಹಾಗೂ ಯಶಸ್ವಿಗೊಳಿಸುವಲ್ಲಿ ಶಿಕ್ಷಣ ಇಲಾಖಾ ಆಯುಕ್ತರು, ಶಿವಮೊಗ್ಗ ಜಿಲ್ಲಾ ಉಪ ನಿರ್ದೇಶಕರು, ಡಯಟ್ ಪ್ರಾಂಶುಪಾಲರು, ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಂಪನ್ಮೂಲ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಂಪನ್ಮೂಲ ಅಧಿಕಾರಿಗಳು ಮತ್ತು ಕ್ಲಸ್ಟರ್ ಅಧಿಕಾರಿಗಳು ಈ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಿದ್ದಾರೆ. ಅದಕ್ಕಾಗಿ ವೈಯಕ್ತಿಕವಾಗಿ ಅಭಿನಂದನೆಗಳನ್ನು ಸಮರ್ಪಿಸುತ್ತೇನೆ ಹಾಗೂ ಜಿಲ್ಲೆಯ ಎಲ್ಲಾ ಶಿಕ್ಷಕರು ಸಹ ಮಕ್ಕಳ ಕಲಿಕೆಗೆ ಬೆನ್ನೆಲುಬಾಗಿ ನಿಂತು ಸಹಕಾರಿಯಾಗಿದ್ದಾರೆ. ಅವರಿಗೆಲ್ಲರಿಗೂ ಹಾರ್ದಿಕ ಅಭಿನಂದನೆಗಳು ಹಾಗೂ ಧನ್ಯವಾದಗಳು.

ಈಗಂತೂ ಮಾಸ್ಕ್ ಇಲ್ಲದೆ ಹೊರಗೆ ಹೋಗುವ ಹಾಗೆ ಇಲ್ಲ. ಆಕಸ್ಮಾತ್ ಧರಿಸದಿದ್ದರೇ ಕೊರೊನ ಸೋಂಕು ತಗಲುವ ಸಾಧ್ಯತೆ ಇದೆ. ಎಸ್.ಎಸ್.ಎಲ್.ಸಿ. ಪರೀಕ್ಷೆ ಕೂಡ ಸಮಾಜಕ್ಕೆ ಸವಾಲಾಗಿತ್ತು. ಆದರೆ ಮಾನ್ಯ ಶಿಕ್ಷಣ ಸಚಿವರಾದ ಶ್ರೀಯುತ ಸುರೇಶ್ ಕಮಾರ್ ರವರ ಸಾರಥ್ಯದಲ್ಲಿ ಪರೀಕ್ಷೆಗಳು ಮುಗಿದು ಫಲಿತಾಂಶವು ಸಹ ಯಾವುದೇ ಸಮಸ್ಯೆ ಇಲ್ಲದೆ ಪ್ರಕಟಣೆಗೊಂಡಿತ್ತು. ಈ ನಿಟ್ಟಿನಲ್ಲಿ ಶಾಲಾ ಕಾಲೇಜುಗಳು ಪ್ರಾರಂಭವಾದರೂ ಸಹ ವಿದ್ಯಾರ್ಥಿಗಳನ್ನು ಪೋಷಕರು ಶಾಲೆಗೆ ಕಳಿಸುತ್ತಾರೆಯೇ?

ಈಗ ಶಿಕ್ಷಣಕ್ಕಿಂತ ಆರೋಗ್ಯ ಮುಖ್ಯ ಎನಿಸಿದೆ. ಶಿಕ್ಷಕರು ಸರ್ಕಾರದ ಆದೇಶವನ್ನು ಯಾವ ರೀತಿ ಬಂದರೂ ಸ್ವೀಕಾರ ಮಾಡಲೇ ಬೇಕು. ಜನರೇ ಹೊರಗೆ ಓಡಾಡಲು ಭಯ ಭೀತರಾಗಿರುವಾಗ ಮಕ್ಕಳು ಮೊದಲಿನಂತೆ ಶಾಲೆಗೆ ಬರುತ್ತಾರೆಯೇ? ಕಾದು ನೋಡಬೇಕಾಗಿದೆ.! ನೀವೆಲ್ಲಾ ಏನಂತಿರಾ....?

**ಡಾ. ಎನ್.ಆರ್. ಮಂಜುಳ**

ಹಿಂದಿಭಾಷಾ ಶಿಕ್ಷಕಿ, ಸ.ಪ್ರೌ.ಶಾಲೆ, ಎಸ್.ಕೆ.ಮಗ್ಗಿ

ಭದ್ರಾವತಿ ತಾ, ಶಿವಮೊಗ್ಗ ಜಿಲ್ಲೆ. 94493 26765

## ನಮ್ಮ ಶಾಲೆ – ನಲಿಕಲಿ

ಸಹ್ಯಾದ್ರಿಯ ಮಡಿಲಿನಲ್ಲಿ
ಇರುವುದೆಮ್ಮ ಶಾಲೆ ಅಲ್ಲಿ
ಆಹಾ! ಎಂಥ ಸುಂದರ
ಓಹೋ! ಎಂಥ ಸುಂದರ

ಸುತ್ತಮುತ್ತ ಎತ್ತಲೂ
ಪಕ್ಷಿಗಳ ಇಂಚರ
ಶಾಲೆಯೊಳಗೆ ಹೋಗಲು
ಮಕ್ಕಳ ಸಡಗರ

ನಲಿಕಲಿ ಮಕ್ಕಳು
ಏರುವರು ಮೆಟ್ಟಿಲ
ತಟ್ಟೆಯಿಂದ ತಟ್ಟೆಗೆ
ಹಾರಲು ಗದ್ದಲ

ನಲಿಯುತ್ತ ಕುಣಿಯುತ್ತ
ಕಲಿಯುವರು ಪಾಠವ
ನಲಿಯೋಣ ಕುಣಿಯೋಣ
ಹೇಳುವರು ಗೀತೆಯ

ತಮ್ಮ ಪ್ರಗತಿ ತಾವೇ ಕಂಡು
ಗುರುತಿಸುವರು ಪ್ರಗತಿ ನೋಟದಿ
ಲೋಗೋಲಿರುವ ಚಿತ್ರ ನೋಡಿ
ಸಾಗುವರು ಮುದದಿ

ಬಿಸಿಲು ಮೋಡ ಗುಡುಗು ಮಳೆಯ
ನೋಡುವರು ಪ್ರತಿದಿನ
ನೋಡಿ ನೋಡಿ ಓಡಿ ಬಂದು
ಹಾಕುವರು ಹವಾಮಾನ ನಕ್ಷೆಯ

ತಟ್ಟೆಯಿಂದ ತಟ್ಟೆಗೆ ಜಿಗಿದು
ಏರುವರು ಏಣಿಯ
ಮರೆಯರು ಎಂದಿಗೂ
ನಲಿಕಲಿ ತರಗತಿಯ

**ಹೇಮಾ ಜಟ್ಟಪ್ಪ ನಾಯ್ಕ**
ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ
ಸಾತ್‌ಕೇರಿ, ಸಾಗರ ತಾ.

## ಮುಚ್ಚಿದ ಶಾಲಾ ದೇಗುಲ

ಕೊರೋನಾ ಎಂಬ ಕಾರ್ಮೋಡದಲ್ಲಿ:
ಮುಸುಕು ಮುಚ್ಚಿದ ಶಾಲೆಗೆ
ಪುಟಾಣಿಗಳ ಹೆಜ್ಜೆ ಸದ್ದಿಲ್ಲ:
ಜಡ್ಡುಗಟ್ಟಿದೆ ಅಂಗಳಕೆ.

ಪ್ರಾರ್ಥನಾ ಗೀತೆಯ, ಪಂಚಾಂಗ ಪಠಣದಲ್ಲಿ
ಪ್ರತಿ ದಿನವೂ ಹೊಸತನವ ಪಡೆಯುತ್ತಿತ್ತು.
ಆಟ–ಪಾಠಗಳಿಂದ ಹಾಡು – ಕುಣಿತಗಳಿಂದ
ಚೈತನ್ಯದ ಚಿಲುಮೆ ಚಿಮ್ಮುತ್ತಿತ್ತು.

ಘಂಟೆನಾದ ಮೌನವಾಗಿದೆ
ದೇವರಿಲ್ಲಿ ಕಲ್ಲಾಗಿದೆ.
ಶಾಲೆಯಿಂದು ಭಾಸವಾಗುತ್ತಿದೆ
ಜೀವವಿಲ್ಲದ ದೇಹದಂತೆ... !!

ಶಾಲಾ ದೇಗುಲ ಬಾಗಿಲುತೆಗೆ ಬೇಗ,
ಕೈತೋಟದಲಿ ಅರಳಲಿ ಮಗುವಿನ ಮೊಗ;
ಇಮ್ಮಡಿಯಾಗಲಿ ಗುರುವಿನ ಸಂಭ್ರಮ;
ಶಿಕ್ಷಣವಾಗಲಿ ಮತ್ತೆ ಸುಗಮ.

**ವಾಣಿ ಎಂ.,**
ಸಹಶಿಕ್ಷಕರು,
ಸ.ಕಿ.ಪ್ರಾ.ಶಾಲೆ, ಕೀಳೇರಿಮೂಡ್ಲಿ
ಹೊಸನಗರ ತಾ॥

# ‘ಶೈಕ್ಷಣಿಕ ಪ್ರಗತಿಯಲ್ಲಿ ಸಮುದಾಯದ ಪಾತ್ರ’

ಒಂದು ಸಮಾಜ ಅಥವಾ ಸಮುದಾಯದ ಅಭಿವೃದ್ಧಿಯು ಅದು ಪಡೆದುಕೊಂಡಿರುವ ಶಿಕ್ಷಣವನ್ನು ಅವಲಂಬಿಸಿರುತ್ತದೆ. ಒಂದು ದೇಶದ ಅಭಿವೃದ್ಧಿಯು ಸಹ ಆ ದೇಶದ ಶಿಕ್ಷಣ ವ್ಯವಸ್ಥೆಯನ್ನು ನೆಚ್ಚಿಕೊಂಡಿರುತ್ತದೆ ಎಂಬ ಮಾತನ್ನು ಗಮನಿಸಿದಾಗ ಶಿಕ್ಷಣದ ಪ್ರಾಮುಖ್ಯತೆ ಚೆನ್ನಾಗಿ ಅರ್ಥವಾಗುತ್ತದೆ. ಒಂದು ದೇಶ ಅಥವಾ ಸಮಾಜವು ಸರಳ ರಚನೆಯನ್ನು ಹೊಂದಿರದೆ ಬಹಳ ಸಂಕೀರ್ಣವಾದ ವ್ಯವಸ್ಥೆಯನ್ನು ಹೊಂದಿರುತ್ತದೆ. ಜಾತಿ, ಧರ್ಮ, ಭಾಷೆ, ಆಹಾರ, ರೂಢಿ ಸಂಪ್ರದಾಯಗಳ ಮೂಲಕ ತನ್ನದೇ ಆದ ಛಾಪನ್ನು ಮೂಡಿಸುತ್ತದೆ. ಇಂದು ಪ್ರಪಂಚದಲ್ಲಿ ಅನೇಕ ದೇಶಗಳು ಶೈಕ್ಷಣಿಕವಾಗಿ ಮತ್ತು ತಾಂತ್ರಿಕವಾಗಿ ಬಹಳ ಎತ್ತರದ ಸಾಧನೆಯನ್ನು ಸಾಧಿಸುತ್ತಿರುವುದರ ಹಿಂದೆ ಆ ದೇಶಗಳು ಹೊಂದಿದ ದೂರದೃಷ್ಟಿ ಮತ್ತು ಜ್ಞಾನ ವಲಯದಲ್ಲಿ ಅವುಗಳು ಮಾಡಿದ ಸಾಧನೆಯು ಮೂಲ ಬಂಡವಾಳವಾಗಿವೆ. ಇಂದು ಪುಟ್ಟ ರಾಷ್ಟ್ರ ಜಪಾನ್ ದೇಶವು ವಿಜ್ಞಾನ ಕ್ಷೇತ್ರದಲ್ಲಿ ಸಾಧಿಸುತ್ತಿರುವ ಸಾಧನೆಗೆ ಆ ದೇಶ ಪಡೆದುಕೊಂಡಿರುವ ಶಿಕ್ಷಣ ಮತ್ತು ಅದಕ್ಕಿರುವ ಭೌಗೋಳಿಕ ಸನ್ನಿವೇಶಗಳೇ ಕಾರಣವಾಗಿದೆ.

“ಮನುಷ್ಯನನ್ನು ಮೃಗತ್ವದಿಂದ ನಾಗರೀಕತೆಯ ಕಡೆಗೆ ಕರೆದುಕೊಂಡು ಬರುವುದೇ ಶಿಕ್ಷಣ.” “ಮಗುವಿನಲ್ಲಿ ಈಗಾಗಲೇ ಹುದುಗಿರುವ ಸುಪ್ತಪ್ರತಿಭೆಗಳನ್ನು ಹೊರತರುವುದೇ ಶಿಕ್ಷಣ” – ಸ್ವಾಮಿ ವಿವೇಕಾನಂದ, “ಮಗುವಿನ ಸರ್ವತೋಮುಖ ಬೆಳವಣಿಗೆಯೇ ಶಿಕ್ಷಣ” – ಗಾಂಧೀಜಿ, “ಅನುಭವವೇ ಶಿಕ್ಷಣ” – ಜಾನ್ ಡ್ಯೂಯಿ ಇವರೆಲ್ಲರ ಹೇಳಿಕೆಗಳನ್ನು ಗಮನಿಸಿದಾಗ ನಮಗೆಲ್ಲ ಒಂದು ಸಂಗತಿ ಗಮನಕ್ಕೆ ಬರುತ್ತಿರುವುದು ಬಹಳ ಸ್ಪಷ್ಟವಾಗುತ್ತಿದೆ. ಅದೇನೆಂದರೆ ಶಿಕ್ಷಣವು ಸಮಾಜದ ಬದಲಾವಣೆಯಲ್ಲಿ ಬಹುದೊಡ್ಡ ಕೀಲಿಕೈ ಆಗಿ ಕೆಲಸ ಮಾಡುತ್ತದೆ. ಶಿಕ್ಷಣವು ವ್ಯಕ್ತಿಯ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗಿ ಕೆಲಸ ಮಾಡುತ್ತದೆ. ಮನುಷ್ಯನ ಯೋಚನಾ ಕ್ರಮದ ದಿಕ್ಕನ್ನು ಬದಲಾಯಿಸುವ ಶಕ್ತಿಯನ್ನು ಹೊಂದಿದೆ. ವಿದ್ಯೆ ಎನ್ನುವುದು ಕಣ್ಣಿಗೆ ಕಾಣದ ಒಂದು ಮಾನಸಿಕ ಶಕ್ತಿ ಅದ್ಭುತವಾದ ಬದಲಾವಣೆಯನ್ನು ಉಂಟುಮಾಡುವ, ಸಮಾಜದಲ್ಲಿ ನಡೆಯುವ ಕ್ರಾಂತಿಗಳನ್ನು ಸೃಷ್ಟಿಸುವ ಶಕ್ತಿ ವಿದ್ಯೆಗಿದೆ. ಒಟ್ಟಾರೆ ಹೇಳುವುದಾದರೆ ವಿದ್ಯೆ ಎಂಬುದು ಬದಲಾವಣೆಯ ಬೀಜ ಮಂತ್ರದಂತೆ ಕೆಲಸ ಮಾಡುತ್ತದೆ.



ಒಂದು ಸಮುದಾಯವು ಏಕ ರೀತಿಯಾಗಿರದೆ ತನ್ನ ಒಡಲಲ್ಲಿ ಅನೇಕ ವೈರುಧ್ಯಗಳನ್ನು ಹೊಂದಿರುತ್ತದೆ ಮತ್ತು ಒಂದರ ಮೇಲೆ ಇನ್ನೊಂದು ನಿಯಂತ್ರಣವನ್ನು ಹೊಂದಲು ಸದಾ ಹೋರಾಟ ಮಾಡುತ್ತಿರುತ್ತದೆ. ಇಂತಹ ಮಾನಸಿಕ ಸ್ಥಿತಿಯೇ ಸಂಘರ್ಷಕ್ಕೆ ಕಾರಣವಾಗುತ್ತದೆ. ಇಂತಹ ಸಂಘರ್ಷಗಳೆ ಸಾಮಾಜಿಕ ಪರಿವರ್ತನೆಗೆ ಮುನ್ನುಡಿ ಬರೆಯುತ್ತವೆ. ಇಂತಹ ಪರಿವರ್ತನೆಯ ಕನಸುಗಳನ್ನು ಬಿತ್ತುವ ಜಾಗವೇ ಶಾಲೆ. ಶಾಲೆಯು ಸಮಾಜದ ಕೈಗನ್ನಡಿಯಾಗಿ ಕೆಲಸ ಮಾಡುತ್ತದೆ. ಶಾಲೆಯು ರಾಷ್ಟ್ರೀಯ ನಾಯಕರನ್ನು ಸೃಷ್ಟಿಸುವ ಕುಲುಮೆಯಾಗಿ ಸಹ ಕಂಡು ಬರುತ್ತದೆ. ಶಾಲೆಯು ಒಂದು ಸಮುದಾಯದ

ಅಂತ:ಶಕ್ತಿಯಾಗಿ ಸಹ ಕೆಲಸ ಮಾಡುತ್ತದೆ. ಜಾಗೃತ ಸಮಾಜವೊಂದು ಸದಾ ಶಾಲೆಯ ಚಟವಟಿಕೆಗಳ ಮೇಲೆ ನಿಗಾ ಇಟ್ಟುಕೊಂಡೇ ಇರುತ್ತದೆ. ಅಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಗಳು ಸಹ ಸಮಾಜದ ಪ್ರತಿಬಿಂಬದಂತೆ ಕಂಡು ಬರುತ್ತದೆ.

ಹಿಂದಿಗಿಂತ ಇಂದು ಎಸ್.ಡಿ.ಎಂ.ಸಿ ಪೊಷಕರು ಮತ್ತು ಹಿರಿಯ ವಿದ್ಯಾರ್ಥಿಗಳ ಸಹಕಾರ ಹೆಚ್ಚು ಬೇಕಾಗಿದೆ. ಕೋವಿಡ್ – 19 ಹಿನ್ನೆಲೆಯಲ್ಲಿ ಶಾಲೆಗಳು ಪ್ರಾರಂಭವಾಗದೆ ಐದಾರು ತಿಂಗಳುಗಳು ಕಳೆಯುತ್ತಿರುವ ಹಿನ್ನಲೆಯಲ್ಲಿ ಮಕ್ಕಳು ಶೈಕ್ಷಣಿಕ ಪ್ರಕ್ರಿಯೆಯಿಂದ ದೂರವಾಗುತ್ತಿರುವುದು ಮತ್ತು ಬಾಲ ಕಾರ್ಮಿಕರಾಗಿ ದುಡಿಮೆಯಲ್ಲಿ ತೊಡಗಿಸಿಕೊಂಡಿರುವುದು ನಮ್ಮ ಕಣ್ಮುಂದೆ ಇದೆ. ಜೀವನದಲ್ಲಿ ಎಂದೂ ಕಾಣದ ಕಂಡರಿಯದಂತಹ ವಿದ್ಯಾಮಾನವೊಂದು ನಮ್ಮ ನಿಮ್ಮೆಲ್ಲರ ಎದುರಿಗಿದೆ. ಅರ್ಥಿಕ ಸಂಕಷ್ಟ ಒಂದೆಡೆಯಾದರೆ ಮಕ್ಕಳ ಶೈಕ್ಷಣಿಕ ವ್ಯವಸ್ಥೆಯಲ್ಲಿ ಬುಡಮೇಲಾಗುವಂತಹ ಪರಿಸ್ಥಿತಿ ನಮ್ಮ ಮಕ್ಕಳದಾಗಿದೆ. ಇಂತಹ ಕ್ಲಿಷ್ಟಕರ ಸನ್ನಿವೇಶದಲ್ಲಿ ನಮ್ಮ ಮಕ್ಕಳು ಕಲಿಕಾ ವಾತಾವರಣದಲ್ಲಿರುವಂತೆ ನೋಡಿಕೊಳ್ಳಬೇಕಾದ ಗುರುತರವಾದ ಜವಾಬ್ದಾರಿ ಇಲಾಖೆ, ಶಿಕ್ಷಕರು ಮತ್ತು ಪೋಷಕರದ್ದಾಗಿದೆ. ಶಾಲೆಗಳನ್ನು ಆರಂಭಿಸಲು ಅವಕಾಶವೆ ಇಲ್ಲದಿರುವಂತಹ ಸಂದಿಗ್ಧತೆಯಲ್ಲಿ ಶಾಲೆಯ ಹೊರಗಡೆ ಕಲಿಕಾ ವಾತಾವರಣವನ್ನು ಸೃಷ್ಟಿಸುವುದು ಒಂದು ದೊಡ್ಡ ಸವಾಲೇ ಆಗಿದೆ. ನಮ್ಮ ಮಕ್ಕಳಿಗೆ ನಮ್ಮ ಸಮುದಾಯದಲ್ಲಿರುವ ದೇವಸ್ಥಾನ, ಸಮುದಾಯ ಭವನ, ಹೊಸ ಕಟ್ಟಡಗಳು ಸೇರಿದಂತೆ ವಿಶಾಲವಾದ ಬಯಲು ರಂಗಮಂದಿರಗಳನ್ನು ಬಳಸಿಕೊಳ್ಳುವುದಕ್ಕೆ ಮತ್ತು ಅವುಗಳ ಸ್ವಚ್ಚತೆಯ ನಿರ್ವಹಣೆಗೆ ಪ್ರತಿಯೊಬ್ಬರೂ ಕಂಕಣ ಬದ್ಧರಾಗಿ ನಿಲ್ಲಬೇಕು. ಮಕ್ಕಳ ಸುರಕ್ಷತೆಯ ಜೊತೆಗೆ ಶಿಕ್ಷಕ/ಶಿಕ್ಷಕಿಯರ ರಕ್ಷಣೆಯೂ ಸಹ ನಮ್ಮ ಸಮುದಾಯದ್ದಾಗಿದೆ.ಅವರಿಗೆ ಅಗತ್ಯವಿರುವ ಸೌಲಭ್ಯಗಳನ್ನು ಒದಗಿಸಿಕೊಡುವುದಲ್ಲದೆ ಅವರಿಗೆ ನಿರ್ಭಯವಾದ ಮುಕ್ತ ವಾತಾವರಣವನ್ನು ಉಂಟು ಮಾಡುವುದು ಆಯಾಯ ಸಮುದಾಯಗಳ ಮಹತ್ತರವಾದ ಜವಾಬ್ದಾರಿಯಾಗಿದೆ.



ಮಕ್ಕಳ ಶೈಕ್ಷಣಿಕ ಪ್ರಗತಿಯಲ್ಲಿ ಶಿಕ್ಷಕರು, ಇಲಾಖೆ ಮತ್ತು ಪೋಷಕರು ಸೇರಿ ತ್ರಿವೇಣಿ ಸಂಗಮದಂತೆ ಸಾಗಿದಾಗ ಮಾತ್ರ ಪೂರ್ಣಪ್ರಮಾಣದ ಪ್ರಗತಿಯನ್ನು ಕಾಣಲು ಸಾಧ್ಯ. ಕ್ರಿಯಾಶೀಲ ಶಿಕ್ಷಕರಿದ್ದು ಅವರಿಗೆ ಸೂಕ್ತ ಸಹಕಾರ ಸಿಗದೆಯಿದ್ದಲ್ಲಿ. ಹಿನ್ನಡೆಯನ್ನು ಸಾಧಿಸುವ ಸಾಧ್ಯತೆಯಿದೆ ಅಥವಾ ಕ್ರಿಯಶೀಲ ಎಸ್.ಡಿ.ಎಂ.ಸಿ ಇದ್ದು ಕ್ರಿಯಾಶೀಲ ಶಿಕ್ಷಕರಿಲ್ಲದಿದ್ದರೂ ಕೂಡ ನಿರೀಕ್ಷಿತ ಫಲಿತಾಂಶ ದೊರೆಯದೆ ಹೋಗಬಹುದು ಆದ್ದರಿಂದ ಯಾವ ಕಡೆಯಿಂದಲೂ ಕೊರತೆಯಾಗದಂತೆ ನೋಡಿಕೊಳ್ಳಲು ಸಮುದಾಯದ ಸಹಭಾಗಿತ್ವ ಬೇಕೆಬೇಕು. ಉದಾಹರಣೆ ಕೋವಿಡ್– 19 ನಂತಹ ವಿಷಮ ಪರಿಸ್ಥಿತಿಯಲ್ಲಿ ಶಾಲೆಗೆ ಮಕ್ಕಳು ಬರಲಾಗದಂತಹ ಸನ್ನಿವೇಶದಲ್ಲಿ ಮಕ್ಕಳಿಗೆ ಮೊಬೈಲ್ ಮೂಲಕ, ಅಂತರ್ಜಾಲದ ಮೂಲಕ ಶಿಕ್ಷಣ ಕೊಡಿಸಲು ಸಾಧ್ಯವೇ? ಇದಕ್ಕೆ ಬೇಕಾದ ಪೂರಕ ವಾತಾವರಣವನ್ನು

ಸಮುದಾಯವೇ ಕಟ್ಟಿಕೊಡಬೇಕಾಗುತ್ತದೆ ಇಂತಹ ಸಮಯದಲ್ಲಿ ಸ್ಥಳೀಯ ಜನಪ್ರತಿನಿಧಿಗಳು, ಶಿಕ್ಷಣ ಪ್ರೇಮಿಗಳು ಮತ್ತು ದಾನಿಗಳ ಸಹಕಾರವನ್ನು ಪಡೆದು ಎಲ್ಲಾ ಮಕ್ಕಳಿಗೂ ಏಕ ರೀತಿಯ ಶಿಕ್ಷಣವನ್ನು ನೀಡಲು ಕ್ರಮ ಕೈಗೊಳ್ಳುವ ಗುರುತರವಾದ ಹೊಣೆಗಾರಿಕೆ ಪ್ರತಿಯೊಂದು ಸಮುದಾಯದ ಜವಾಬ್ದಾರಿಯಾಗಿದೆ.

ಒಂದು ಶಾಲೆಯ ಅಭಿವೃದ್ಧಿಯು ಕೇವಲ ಆಯಾ ಸರ್ಕಾರಗಳನ್ನು ಅವಲಂಬಿಸಿರದೆ ಸ್ಥಳೀಯ ಜನ ಸಮುದಾಯದ ಪಾಲ್ಗೊಳ್ಳುವಿಕೆಯ ಮೇಲೆ ಅವಲಂಬನೆಯಾಗಿರುತ್ತದೆ. ಈ ಪಾಲ್ಗೊಳ್ಳುವಿಕೆಯ ಆ ಜನರು ಪಡೆದಿರುವ ಶಿಕ್ಷಣ ಮತ್ತು ಸಂಸ್ಕಾರಗಳನ್ನು ಅವಲಂಬಿಸಿರುತ್ತದೆ ಅಥವಾ ಅವರು ಪಡೆದಿರುವ ಶಿಕ್ಷಣದ ಮೌಲ್ಯಗಳನ್ನು ಬಿಂಬಿಸುತ್ತಿರುತ್ತದೆ. ಯಾವ ಶಾಲೆಯು ಅಭಿವೃದ್ಧಿ ಹೊಂದಿದೆ ಎಂದು ಹೇಳುತ್ತೇವೆಯೋ ಅಲ್ಲಿ ಅತ್ಯಂತ ಕ್ರಿಯಾಶೀಲವಾದ ಶಿಕ್ಷಕ ಪಡೆ ಹೊಂದಿದೆ ಎಂದರ್ಥ ಅಥವಾ ಅನುಭವಿ ಮತು ಜ್ಞಾನಿಗಳನ್ನು ಹೊಂದಿದ ಎಸ್.ಡಿ.ಎಂ.ಸಿ ಇದೆ ಎಂದರ್ಥ. ಈ ಎರಡೂ ಅಂಶಗಳನ್ನು ಹೊರತುಪಡಿಸಿ ಶಾಲೆಯಲ್ಲಿ ಪ್ರಗತಿಯನ್ನಾಗಲಿ ಅಥವಾ ಬದಲಾವಣೆಗಳನ್ನಾಗಲೀ ನಿರೀಕ್ಷಿಸುವುದು ಯಾರಿಂದಲೂ ಸಾಧ್ಯವಿಲ್ಲ. ಇಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ ಎಂದರೆ ಕೇವಲ ಅಧಿಕಾರವನ್ನು ಚಲಾಯಿಸುವುದು ಎಂಬ ಭಾವನೆ ಕೆಲವರಲ್ಲಿದೆ. ಕೇವಲ ಸಂಕುಚಿತವಾಗಿ ಯೋಚಿಸದೆ ನಮ್ಮ ಮಕ್ಕಳ ಕಲಿಕೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತರುವುದು ಒಂದೆಡೆಯಾದರೆ ಸರ್ಕಾರಿ ನೌಕರರೊಂದಿಗೆ ಹೊಂದಿಕೊಂಡು ಆಡಳಿತ ನಡೆಸುವುದು ಮತ್ತು ಶಾಲೆಯ ಪ್ರಗತಿಯನ್ನು ಸಾಧಿಸುವಂತೆ ನೋಡಿಕೊಳ್ಳುವುದು ನಿಜಕ್ಕೂ ಸವಾಲಿನ ಕೆಲಸವಾಗಿದೆ. ಕೆಲವೊಮ್ಮೆ ನೌಕರರ ತಿರಸ್ಕಾರಕ್ಕೆ ಒಳಗಾಗಬಹುದು ಇಲ್ಲವೇ ಆಡಳಿತಾತ್ಮಕ ಸಂಘರ್ಷವೂ ಉಂಟಾಗಬಹುದು. ಇವೆರಡು ಸಂದರ್ಭಗಳು ಉಂಟಾಗದಂತೆ ನೋಡಿಕೊಂಡು ಪರಸ್ಪರ ಹೊಂದಾಣಿಕೆ ಮತ್ತು ಸಮಾಲೋಚನೆಯ ಮೂಲಕ ಶಾಲೆಯ ಪ್ರಗತಿ ಮತ್ತು ಶೈಕ್ಷಣಿಕ ಆಭಿವೃದ್ದಿಯನ್ನು ಸಾಧಿಸುವುದೇ ನಮ್ಮ ಮೂಲ ಗುರಿಯಾಗಬೇಕು.



ಭಾರತ ದೇಶದಲ್ಲಿ ವಿವಿಧ ಧರ್ಮ, ಜಾತಿ, ಭಾಷೆ, ಆಹಾರ ಉಡುಪುಗಳಲ್ಲಿ ವಿಭಿನ್ನತೆಯುನ್ನು ಹೊಂದಿರುವಂತಹ ದೇಶವಾಗಿದೆ. ಯಾವುದೇ ಸಂದರ್ಭದಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಸಾಮರಸ್ಯಕ್ಕೆ ದಕ್ಕೆ ಬರುವ ಸಾಧ್ಯತೆ ಹೆಚ್ಚಿದ್ದು ಪ್ರತಿಯೊಂದು ಕ್ಷಣದಲ್ಲಿಯೂ ಕೂಡ ಬಹಳ ಸೂಕ್ಷ್ಮವಾಗಿ ಪರಿಸ್ಥಿತಿಯನ್ನು ನಿಭಾಯಿಸಬೇಕಾಗುತ್ತದೆ. ಆಯಾಯ ಸಂದರ್ಭದಲ್ಲಿ ಉಂಟಾಗುವ ಸಮಸ್ಯೆಗಳಿಗೆ ಸಕಾಲದಲ್ಲಿ ಸೂಕ್ತವಾದ ಮತ್ತು ನ್ಯಾಯೋಚಿತವಾದ ತೀರ್ಮಾನಗಳನ್ನು ಕೈಗೊಂಡು ಯಾವುದೇ ಗೊಂದಲಕ್ಕೆ ಅವಕಾಶ ಇಲ್ಲದಂತೆ ನೋಡಿಕೊಳ್ಳುವ ಮಹತ್ತರವಾದ ಹೊಣೆಗಾರಿಕೆ ಶಿಕ್ಷಕರು ಮತ್ತು ಎಸ್.ಡಿ.ಎಂ.ಸಿ.ಯವರದ್ದಾಗಿರುತ್ತದೆ. ಶಾಲೆಯು ಒಂದು ಸಮುದಾಯದ ದೇಗುಲವಿದ್ದಂತೆ ಒಂದು ಊರಿನಲ್ಲಿರುವ ಎಲ್ಲಾ ಜನರನ್ನು ಒಂದಾಗಿ ಬಾಳುವುದಕ್ಕೆ ಶಕ್ತಿ ಕೇಂದ್ರವಾಗಿ ಕೆಲಸ ಮಾಡುತ್ತದೆ. ಹಾಗೆಯೇ ಒಂದು ಶಾಲೆಯು ಸಹ ಮತ್ತಷ್ಟು ಶಕ್ತಿ ಕೇಂದ್ರವಾಗುವ ಎಲ್ಲಾ ಅರ್ಹತೆಗಳು ಹೊಂದಿವೆ. ಒಂದು ಶಾಲೆಯು ಧರ್ಮದ ಚೌಕಟ್ಟನ್ನು ಮೀರಿನಿಂತ

ಸಾಂವಿಧಾನಿಕ ಮೌಲ್ಯಗಳನ್ನು ಅನುಷ್ಠಾನಕ್ಕೆ ತರುವ ಗುರುತರವಾದ ಸಂಸ್ಥೆ. ಇಲ್ಲಿ ನಡೆಯುವ ಪ್ರತಿಯೊಂದು ಕೆಲಸ ಮತ್ತು ಕಾರ್ಯಕ್ರಮಗಳು ಸರ್ಕಾರದ ನೀತಿ ನಿಯಮಗಳಿಗೆ ಬದ್ದವಾಗಿರಬೇಕು ಎಂಬ ತಿಳುವಳಿಕೆ ನಮ್ಮ ಸಮುದಾಯದಲ್ಲಿ ಪ್ರತಿಯೊಬ್ಬರಿಗೂ ತಿಳಿದಿರಬೇಕಾಗುತ್ತದೆ.

ಒಂದು ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಎಲ್ಲಾ ಕಡೆಯೂ ಒಂದೇ ರೀತಿಯಾಗಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಆ ಊರಿನ ಆರ್ಥಿಕ ಸ್ಥಿತಿ–ಗತಿ, ರಾಜಕೀಯ ಪ್ರಭಾವ, ವಿವಿಧ ಜಾತಿ ಮತ್ತು ಧರ್ಮಗಳು ನಡುವಿನ ಹೊಂದಾಣಿಕೆ ಹೀಗೆ ಹತ್ತಾರು ಅಂಶಗಳು ಪ್ರಭಾವ ಬೀರುತ್ತವೆ. ಇನ್ನು ಕೆಲವು ಕಡೆ ಏಕ ವ್ಯಕ್ತಿ ಕೇಂದ್ರಿತವಾಗಿ ನಡೆದರೆ ಇನ್ನೂ ಕೆಲವೊಮ್ಮೆ ಸಾಮೂಹಿಕ ನಾಯಕತ್ವದ ಮೇಲೆ ನಡೆಯುತ್ತವೆ. ಒಟ್ಟಾರೆ ಹೇಳುವುದಾದರೆ ಒಂದು ಶಾಲೆಯ ಪ್ರಗತಿ ಎಂದರೆ ಅದು ಆ ಸಮುದಾಯದ ಪ್ರಗತಿಯೇ ಆಗಿರುತ್ತದೆ.

ಸಮಾಜ ಎನ್ನುವುದು ಒಂದು ನಿಶ್ಚಲ ಸ್ಥಿತಿಯಲ್ಲಿ  ನಿಂತಿರದೆ ಸದಾ ಚಲನಾ ಸ್ಥಿತಿಯಲ್ಲಿ ಇರುತ್ತದೆ. ಇದು ಸಾಮಾನ್ಯರಿಗೆ ಗೊತ್ತಿರುವುದಿಲ್ಲ ಅಥವಾ ಆ ತಕ್ಷಣಕ್ಕೆ ನಮ್ಮ ಅರಿವಿಗೆ ಬರದಿದ್ದರೂ ಕೂಡ ಭೂಮಿ ತಿರುಗುವ ಹಾಗೆ ಬದಲಾವಣೆಯೂ ಸಹ ನಮ್ಮ ಬೆನ್ನಿಗೆ ಅಂಟಿಕೊಂಡೆ ಬರುತ್ತದೆ. ಈ ಬದಲಾವಣೆಯೂ ಸಕಾರಾತ್ಮಕವಾಗಿದ್ದಾಗ ನಮ್ಮ ಸಮಾಜದ ಬದಲಾವಣೆ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿರುತ್ತದೆ. ಹೀಗೆ ಸರಿಯಾದ ದಿಕ್ಕಿನಲ್ಲಿ ಸಾಗುವಂತೆ ನೋಡಿಕೊಳ್ಳುವುದೇ ನಿಜವಾದ ಶಾಲೆಯ ಕೆಲಸ. ಇದು ಮೇಲುನೋಟಕ್ಕೆ ಬಹಳ ಸುಲಭ ಎನಿಸಿದರೂ ಆಳಕ್ಕೆ ಇಳಿದು ನೋಡಿದಾಗ ಇದೊಂದು ಗುರುತರವಾದ ಹೊಣೆಗಾರಿಕೆಯಾಗಿದ್ದು ಅದನ್ನು ನಿಬಾಯಿಸುವಲ್ಲಿ ಕೊಂಚ ಎಡವಿದರೂ ಸಹ ಬಹಳ ದೊಡ್ಡ ಅಪಾಯವನ್ನು ನಾವು ಎದುರಿಸಬೇಕಾಗುತ್ತದೆ. ಒಬ್ಬ ವೈದ್ಯ ತಪ್ಪು ಮಾಡಿದರೆ ಒಂದಿಬ್ಬರು ರೋಗಿಗಳು ಸಾಯಬಹುದು. ಇಲ್ಲವೆ ಒಬ್ಬ ಇಂಜಿನಿಯರ್ ತಪ್ಪು ಮಾಡಿದರೆ ಹತ್ತಾರು ಜನ ಸಾಯಬಹುದು. ಆದರೆ ಒಬ್ಬ ಶಿಕ್ಷಕ ತಪ್ಪು ಮಾಡಿದರೆ ಒಂದು ಸಮುದಾಯವೇ ಸತ್ತು ಹೋಗುತ್ತದೆ ಎಂಬ ಮಾತು ಅಕ್ಷರಶ: ಸತ್ಯವಾಗಿದೆ.

ಶಾಲೆಯ ಅಭಿವೃದ್ಧಿ ಎಂದರೆ ಕೇವಲ ಕಟ್ಟಡಗಳಾಲೀ, ಆಟದ ಮೈದಾನಗಳಾಲಿ ಅಲ್ಲ, ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡಬೇಕಾಗುತ್ತದೆ. ನಮ್ಮ ಶಾಲೆಯಲ್ಲಿ ಕಲಿಯುವ ವಿದ್ಯಾರ್ಥಿಗಳ ಜೀವನವನ್ನು ಕಟ್ಟಿಕೊಳುವುದಕ್ಕೆ ಪೂರಕವಾದ ವಾತಾರಣವನ್ನು ಒದಗಿಸುವುದು. ನಮ್ಮ ನಿಮ್ಮೆಲ್ಲರ ಅದ್ಯ ಕರ್ತವ್ಯವಾಗಿದೆ. ಮಕ್ಕಳನ್ನು ಮಾನಸಿಕವಾಗಿ ಸದೃಢಗೊಳಿಸುತ್ತಲೇ ಅವರನ್ನು ತಮ್ಮ ಭವಿಷ್ಯದ ಜೀವನಕ್ಕೆ ಅಣಿಗೊಳಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಿದೆ. ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವುದೆಂದರೆ ಅಷ್ಟು ಸುಲಭವಾದ ಕೆಲಸ ಎಂದು ನಾವು ಹಗುರವಾಗಿ ಭಾವಿಸಬಾರದು. ಭಾವಿಸಮಾಜವನ್ನು ಹೀಗೆ ಇರಬೇಕೆಂದು ನಾವು ದೂರದೃಷ್ಟಿಯನ್ನು ಹೊಂದಿರಬೇಕು. ಶಿಕ್ಷಣವೆಂದರೆ ಕೇವಲ ಅಕ್ಷರಗಳನ್ನು ಕಲಿಸುವುದು ಎಂಬ ಮನೋಭಾವ ನಮ್ಮಲ್ಲಿ ಬದಲಾಗಬೇಕು. ಓದು ಬರಹದ ಜೊತೆಗೆ ಮಗುವಿನ ಚಿಂತನಾ ಕ್ರಮವನ್ನು ಸಹ ಸಕಾರಾತ್ಮಕವಾಗಿ ಬೆಳೆಯುವಂತೆ ನೋಡಿಕೊಳ್ಳಬೇಕು. ಆಟ ಪಾಠದಂತೆ ಮಕ್ಕಳಿಗೆ ಮನೋರಂಜನೆಯೂ ಸಹ ಒಂದು ಅವಿಭಾಜ್ಯ ಅಂಗವಾಗಬೇಕು.  ಅದಕ್ಕಿಂತ ಹೆಚ್ಚಾಗಿ ಮಕ್ಕಳು ತಾವು ಕಲಿತ ವಿದ್ಯೆಯನ್ನು ಎಲ್ಲರ ಮುಂದೆ ಪ್ರದರ್ಶನ ನೀಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಮಕ್ಕಳು ತಮ್ಮ ಪೋಷಕರ ಮುಂದೆ ಪ್ರದರ್ಶನ ನೀಡಿದಾಗ ಅತಿ ಹೆಚ್ಚು ಸಂತೋಷವನ್ನು ಮತ್ತು ಆತ್ಮವಿಶ್ವಾಸವನ್ನು ಪಡೆದುಕೊಳ್ಳುತ್ತದೆ. ಇಂತಹ ವೇದಿಕೆಗಳನ್ನು ಸೃಷ್ಟಿಸುವುದು ನಮ್ಮ ನಿಮ್ಮೆಲ್ಲರ ಕರ್ತವ್ಯವಾಗಬೇಕು. ಕೋಳಿಯ ಗೂಡಿನಲ್ಲಿ ಕಾವಿಗೆ ಇಟ್ಟ ಮೊಟ್ಟೆಗಳನ್ನು ಜತನದಿಂದ ಕಾಪಾಡಿಕೊಳ್ಳುವ

ಒಂದು ಕೋಳಿಯ ಎಚ್ಚರಿಕೆ ನಮಗೂ ಸಹ ಬೇಕಾಗುತ್ತದೆ. ಕೊಂಚ ನಿರ್ಲಕ್ಷ್ಯವಹಿಸಿದರೂ ಮೊಟ್ಟೆಗಳು ಮರಿಯಾಗಲಾರದೆ ಹೋಗಬಹುದು ಹಾಗೆಯೇ ನಮ್ಮ ಮಕ್ಕಳು ಸಹ ತಮ್ಮಲ್ಲಿದ್ದ ಪ್ರತಿಭೆಯನ್ನು ವ್ಯಕ್ತಪಡಿಸಲಾಗದೆ ಅಲ್ಲಿಯೇ ಕಮರಿ ಹೋಗಬಹುದು. ಹೀಗಾಗದೇ ಮಕ್ಕಳಲ್ಲಿರುವ ವಿಶೇಷ ಪ್ರತಿಭೆಗಳನ್ನು ಹೆಕ್ಕಿ ತೆಗೆಯುವ ಕೆಲಸ ನಮ್ಮಿಂದಾಗಬೇಕು ಇದನ್ನು ಸಮುದಾಯ ಬಹಳ ಆಸ್ತಕಿಯಿಂದ ನಿರ್ವಹಿಸಬೇಕಾಗುತ್ತದೆ.

ಶಾಲೆಯು ಸಮುದಾಯದೊಳಗಿನ ಒಂದು ಅಂಗವೇ ಹೊರತೂ ಶಾಲೆಯೇ ಒಂದು ಪ್ರತ್ಯೇಕವಾದ ವ್ಯವಸ್ಥೆಯಲ್ಲ. ಶಾಲೆಯಲ್ಲಿ ಕೆಲಸ ಮಾಡುವ ನಾವು ಸಹ ಆ ಸಮುದಾಯದ ಒಳಗಿನವರಾಗಬೇಕೆ ಹೊರತು ನೀರಿನಲ್ಲಿ ಬೆರೆತ ಎಣ್ಣೆಯ ಹಾಗೆ ಇದ್ದರೆ ಆಗದು. ಒಂದು ಸಮುದಾಯದೊಳಗಿನ ವಿಶೇಷಗಳನ್ನು ಗುರುತಿಸುತ್ತಾ ಅದನ್ನು ದಾಖಲಿಸುತ್ತಾ ಹೋಗಬೇಕಾಗುತ್ತದೆ. ಯಾವುದೇ ಸಮುದಾಯ ಕೃತಕವಾದ ವಾತಾವರಣದಲ್ಲಿ ನಿಂತಿರುವುದಿಲ್ಲ. ಅದು ತನ್ನ ಒಡಲೊಳಗೆ ಏನೆಲ್ಲ ಘಟನೆಗಳು ಸಂಭವಿಸುತ್ತಲೇ ಇರುತ್ತವೆ. ಅವುಗಳನ್ನು ಮಕ್ಕಳು ಸದಾ ಎಚ್ಚರಿಕೆಯಿಂದ ಅವಲೋಕನ ಮಾಡುವ ಕ್ರಮವನ್ನು ನಾವು ತಿಳಿಸಿಕೊಡಬೇಕಾಗುತ್ತದೆ. ಉದಾಹರಣೆಗೆ ಒಂದು ಗ್ರಾಮದಲ್ಲಿ ನಡೆಯುವ ಹಬ್ಬ ಹರಿದಿನಗಳು, ಜಾತ್ರೆ ಉತ್ಸವಗಳು, ಕ್ರೀಡಾಚಟುವಟಿಕೆಗಳು ಮತು ರಾಜಕೀಯ ಚಟುವಟಿಕೆಗಳು ದಿನ ನಿತ್ಯ ಘಟಿಸುತ್ತಲೇ ಇರುತ್ತವೆ. ಗ್ರಾಮೀಣ ಸಮುದಾಯಲ್ಲಂತೂ ರಾಜಕೀಯವೆಂಬುದು ಒಂದು ಜೀವನ ಕ್ರಮವಾಗಿದೆ. ದಿನದ ಇಪ್ಪತ್ನಾಲ್ಕು ಗಂಟೆಯೂ ಇದೇ ವಿಷಯವನ್ನು ಪ್ರಧಾನವಾಗಿಟ್ಟುಕೊಂಡು ಚಿಂತಿಸುತ್ತಿರುತ್ತಾರೆ. ಇದರಿಂದ ಎಷ್ಟು ಅನುಕೂಲಗಳಿವೆಯೋ ಅಷ್ಟೇ ಅನಾನುಕೂಲಗಳಿವೆ ಎಂಬುದನ್ನು ನಾವು ಒಪ್ಪಿಕೊಳ್ಳಬೇಕು.

ಭಾರತದಂತಹ ಬೃಹತ್ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ನಮ್ಮ ದೇಶದಲ್ಲಿ ಇದು ಅನಿವಾರ್ಯ ಕೂಡ ಹೌದು ಎನಿಸಿದರೂ ಅತಿಯಾದಾಗ ಅಮೃತವೂ ಕೂಡ ವಿಷವಾಗುತ್ತದೆ ಎಂಬುವುದನ್ನು ಸಹ ನಾವು ಗಮನಿಸಬೇಕು. ಇಂದು ಪ್ರತಿಯೊಂದು ಸಮುದಾಯದಲ್ಲೂ ಕೂಡ ನಾಯಕತ್ವವನ್ನು ಪಡೆದುಕೊಳ್ಳುವುದಕ್ಕಾಗಿ ಸದಾ ಒಂದಲ್ಲ ಒಂದು ಚಟುವಟಿಕೆಗಳು ಗರಿಗೆದರಿಕೊಳ್ಳುತ್ತಿರುತ್ತವೆ. ಇಲ್ಲವೇ ಇದ್ದಕ್ಕಿದಂತೆ ವಿಚಿತ್ರ ತಿರುವು ಪಡೆದುಕೊಳ್ಳುತ್ತದೆ. ಇಂತಹ ಆಕಸ್ಮಿಕ ಘಟನೆಗಳು ಇಡೀ ಸಮುದಾಯವನ್ನು ಒರೆಗೆ ಹಚ್ಚಿ ನಿಲ್ಲಿಸುತ್ತವೆ. ಕೆಲವೊಮ್ಮೆ ಯಾವುದೇ ಅಮಿಷಗಳಿಗೆ, ಇಲ್ಲವೇ ಮತೀಯ ಕಾರಣಗಳಿಗೆ ಇಡೀ ವ್ಯವಸ್ಥೆಯೇ ಬಲಿಯಾಗುವ ಅಪಾಯವನ್ನು ಸಹ ನಾವು ತಿಳಿದಿರಬೇಕಾಗುತ್ತದೆ. ಬಹಳಷ್ಟೂ ಜನರ ಮಾತುಗಳೆಂದರೆ ನಮ್ಮ ಜನರು ಶಾಲೆಯ ಕೆಲಸ ಕಾರ್ಯಗಳ ಬಗ್ಗೆ ಹೆಚ್ಚು ಗಮನ ನೀಡುವುದಿಲ್ಲ. ಎಂಬ ಸಾಮಾನ್ಯ ಅಭಿಪ್ರಾಯ ಎಲ್ಲೆಡೆ ಕೇಳಿ ಬರುತ್ತದೆ. ಇದು ಮೇಲ್ನೋಟಕ್ಕೆ ನಿಜವೆನಿಸಿದರೂ ಕೂಡ ನಮ್ಮ ಜನರಿಗೆ ಇತ್ತ ಬರುವಂತಾಗಲೀ ಅಥವಾ ಈ ಬಗ್ಗೆ ಚಿಂತನೆ ನಡೆಸುವುದಕ್ಕಾಗಲೀ ನಾವು ಅವರಿಗೆ ಅವಕಾಶ ನೀಡಿದ್ದೇವೆಯೇ ಎಂದು ನಮ್ಮನ್ನೆ ನಾವು ಪ್ರಶ್ನಿಸಿಕೊಳ್ಳಬೇಕಾಗಿದೆ. ಇಂದು ಅನೇಕ ಹಳ್ಳಿಗಳಲ್ಲಿ ವರ್ಷಕ್ಕೆ ಹತ್ತಾರು ಹಬ್ಬಗಳನ್ನು ಆಚರಿಸುತ್ತೇವೆ. ಗ್ರಾಮದಲ್ಲಿ ನಡೆಯುವ ಸಾಮೂಹಿಕ ಕಾರ್ಯಕ್ರಮಗಳನ್ನು ಅದೆಷ್ಟು ಸಂಭ್ರಮದಿಂದ ಆಚರಿಸುತ್ತಾರೆ. ಹೋರಿ ಬಿಡುವ ಹಬ್ಬ, ಕ್ರೀಡಾ ಚಟುವಟಿಕೆಗಳು, ನಾಟಕಗಳು ಇತ್ಯಾದಿ ಕಾರ್ಯಕ್ರಮಗಳನ್ನು ಬಹಳ ಅದ್ದೂರಿಯಾಗಿ ಆಚರಿಸುವ ಮೂಲಕ ತಮ್ಮೊಳಗಿನ ಸಂಭ್ರಮವನ್ನು ವ್ಯಕ್ತಪಡಿಸುತ್ತಾರೆ . ಹಾಗಾದರೆ ಶಾಲೆ ಮತ್ತು ಅಲ್ಲಿ ನಡೆಯುವ ಚಟುವಟಿಕೆಗಳು ಎಂದೊಡನೆ ಜನರು ಭಾಗವಹಿಸುವುದಿಲ್ಲ ಎಂಬ ಮನೋಭಾವ ನಮ್ಮಲ್ಲೇಕೆ ಉಂಟಾಗುತ್ತದೆ ಎಂಬ ಬಗ್ಗೆ ನಾವು ಅವಲೋಕನ ಮಾಡಿಕೊಳ್ಳಬೇಕಾಗುತ್ತದೆ. ಶಾಲೆ ಮತ್ತು ಸಮುದಾಯದ ಮದ್ಯೆ ಒಂದು ಸಣ್ಣ ಕಂದಕ ಉಂಟಾಗುತ್ತದೆಯೇ ಅಥವಾ ಅಕ್ಷರಸ್ಥರು ಮತ್ತು ಅನಕ್ಷರಸ್ಥರು ಎಂಬ

ಬೇಧಭಾವ ಇದೆಯೇ ಇದ್ದರೆ ಅದರ ನಿವಾರಣೆಗೆ ನಾವು ಚಿಂತನೆ ನಡೆಸುತ್ತಿದ್ದೇವೆಯೆ?. ಇನ್ನೂ ಪೊಷಕರಲ್ಲಿ ತಮ್ಮ ಮಕ್ಕಳು ಕಲಿಕೆಯ ಬಗ್ಗೆ ಕಾಳಜಿ ಬಂದಿಲ್ಲವೆ ? ತಮ್ಮ ಮಕ್ಕಳ ಕಲಿಕೆಯ ಬಗ್ಗೆ ಆಲೋಚಿಸುವುದಕ್ಕೆ ಬಿಡುವಿಲ್ಲವೇ? ಹೀಗೆ ನೂರಾರೂ ಅನುಮಾನಗಳು ನಮ್ಮ ಬಳಿ ಸುಳಿದರೂ ಕೂಡ ಅನಕ್ಷರತೆ ಎಂಬುದು ನಮ್ಮ ಮದ್ಯೆ ನಿಧಾನವಾಗಿ ಮರೆಯಾಗುತ್ತಿದೆ. ಪೋಷಕರು ತಮ್ಮ ಮಕ್ಕಳ ಕಲಿಕೆಯ ಬಗ್ಗೆ ನಾವು ನಿರೀಕ್ಷಿಸದಷ್ಟು ಇಲ್ಲದಿದ್ದರೂ ಆ ಕುರಿತು ಮಾತನಾಡುವ ಮನಸ್ಸುಗಳು ನಮ್ಮ ಮಧ್ಯೆ ಇವೆ. ತಮ್ಮ ಕೈಲಾದಷ್ಟು ಸಹಾಯ ಮಾಡುವ ಜನರೂ ಇದ್ದಾರೆ. ಅವರನ್ನೂ ಶಾಲೆಗೆ ಹತ್ತಿರ ತರುವ ಕೆಲಸ ನಮ್ಮಿಂದಾಗಬೇಕು.

ಸಮುದಾಯವನ್ನು ಒಮ್ಮಿಂದೊಮ್ಮಿಗೆ ನಮ್ಮ ಕಡೆ ಸೆಳೆದುಕೊಳ್ಳುವುದು ನಾವು ಅಂದುಕೊಂಡಷ್ಟು ಸುಲಭವಲ್ಲ. ಅವರಿಗೆ ಅರಿವಿಲ್ಲದಂತೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರ ಮೂಲಕ ಮತ್ತು ಶಾಲೆಯಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಗಳ ಬಗ್ಗೆ ಪೋಷಕರಿಗೆ ವಿಶ್ವಾಸ ಮೂಡಿ ಬರಬೇಕು. ನಾವು ನೀಡುತ್ತಿರುವ ಶಿಕ್ಷಣದ ಮೇಲೆ ನಂಬಿಕೆ ಬರಬೇಕು. ಅಂದಾಗ ಮಾತ್ರ ಪರಸ್ಪರ ವಿಶ್ವಾಸ ತುಂಬಿದ ವಾತಾವರಣ ಉಂಟಾಗಲು ಸಾಧ್ಯ. ಒಂದಿಷ್ಟು ತಾಳ್ಮೆ ಮತ್ತು ವಿಶ್ವಾಸದ ಮಾತುಗಳು ನಮ್ಮಲ್ಲಿ ಇದ್ದರೆ ಏನನ್ನಾದರೂ ಸಾಧಿಸಿ ತೋರಿಸಬಹುದು. ಶಾಲೆಯು ಸಮುದಾಯಕ್ಕೆ ದಾರಿ ತೋರಿಸುವ ದೀಪದಂತಾಗಬೇಕೆ ಹೊರತು ಸಮುದ್ರದ ಮದ್ಯೆ ತಲೆ ಎತ್ತಿ ನಿಂತ ದ್ವೀಪವಾಗಬಾರದು. ಜಾಗೃತ ಸಮುದಾಯವೊಂದು ಸದಾ ಎಚ್ಚರಿಕೆಯ ಹೆಜ್ಜೆಗಳನ್ನಿಟ್ಟು ಮುನ್ನಡೆಯುತ್ತಿರುತ್ತದೆ. ಶಾಲೆಯಲ್ಲಿ ನಡೆಯುವ ಪೊಷಕರ ಸಭೆಗಳು ಎಸ್.ಡಿ.ಎಂ.ಸಿ.ಯ ಸಭೆಗಳು, ರಾಷ್ಟ್ರೀಯ ಹಬ್ಬಗಳು, ಶಾಲಾ ವಾರ್ಷಿಕೋತ್ಸವಗಳು, ದಶಮಾನೋತ್ಸವ, ಬೆಳ್ಳಿ ಹಬ್ಬಗಳು, ಸುವರ್ಣ ಮಹೋತ್ಸವ ವಜ್ರ ಮಹೋತ್ಸವ, ಅಮೃತ ಮಹೋತ್ಸವ ಮತ್ತು ಶಾಲಾ ಶತಮಾನೋತ್ಸವ ಹೀಗೆ ಹತ್ತು ಹಲವು ಅವಕಾಶಗಳನ್ನು ಬಳಸಿಕೊಂಡು ಆ ಮೂಲಕ ಶಾಲೆ ಮತ್ತು ಸಮುದಾಯಗಳನ್ನು ಹತ್ತಿರ ತರುವುದಕ್ಕೆ ಪ್ರಯತ್ನಿಸಬೇಕೆ ಹೊರತು ಕೇವಲ ಯಾಂತ್ರಿಕ ಆಚರಣೆಗಳನ್ನು ಮಾತ್ರ ಮಾಡುತ್ತ ಹೋದರೆ ಅದು ಕಟಕಟೆ ದೇವರಿಗೆ ಮರದ ಜಾಗಟೆ ಬಾರಿಸಿದಂತಾಗುತ್ತದೆಯೇ ಹೊರತು ನಿಜವಾದ ಫಲಿತಾಂಶ ಕಂಡು ಬರುವುದಿಲ್ಲ.

ಸಮುದಾಯವೊಂದು ಶಾಲೆಯ ಮೇಲೆ ಅಪಾರವಾದ ನಿರೀಕ್ಷೆಗಳನ್ನು ಇಟ್ಟುಕೊಂಡಿರುತ್ತದೆ. ಇಂತಹ ನಿರೀಕ್ಷೆಗಳನ್ನು ಹುಸಿಗೊಳಿಸದಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮ ಮೇಲಿದೆ. ಒಂದೇ ಕೈಯಿಂದ ಚಪ್ಪಾಳೆಯಾಗುವುದಿಲ್ಲ. ಒಬ್ಬ ವ್ಯಕ್ತಿ ಆಥವಾ ಏಕಮುಖದ ಚಿಂತನೆಗಳಿಂದ ಯಾವುದೇ ನಿರೀಕ್ಷಿತ ಫಲಿತಾಂಶ ಪಡೆಯಲು ಹಾಗೇಯೇ ಸಾಧ್ಯವಿಲ್ಲ. ಶಾಲೆಯ ಪ್ರಗತಿ ಮತ್ತು ಅದರ ಶೈಕ್ಷಣಿಕ ಸಾಧನೆಗೆ ಎಲ್ಲರೂ ಕೈ ಜೋಡಿಸಿದಾಗ ಮಾತ್ರ ನಮ್ಮ ಗುರಿಯನ್ನು ತಲುಪುವುದಕ್ಕೆ ಸಾಧ್ಯ. ಬನ್ನಿ ಹೊಸ ಮನ್ವಂತರಕ್ಕೆ ಅಣಿಯಾಗುವ. ನಮ್ಮ ಮಕ್ಕಳ ಭವಿಷ್ಯದ ಹಾದಿಯಲ್ಲಿ ಜ್ಞಾನದ ಬೆಳಕು ಎಲ್ಲೆಡೆಯೂ ಚೆಲ್ಲಲಿ. ಹೊಸ ಕಾಲಕ್ಕೆ ಹೊಸ ಹೊಸ ಚಿಂತನೆಗಳು ಹರಿದು ಬರಲಿ.

**ಡಿ. ಮಂಜಪ್ಪ**
ಬಿ.ಆರ್.ಪಿ.,
ಬಿ.ಆರ್.ಸಿ. ಸೊರಬ ತಾ॥

# ಜೀವನ ಕೌಶಲ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಆನ್‌ಲೈನ್ ತರಬೇತಿ

**ಕ್ಷೇತ್ರ ಸಂಪನ್ಮೂಲ ಕೇಂದ್ರ, ಸಮಗ್ರ ಶಿಕ್ಷಣ ಕರ್ನಾಟಕ, ಶಿಕಾರಿಪುರ.**

ಶಿಕಾರಿಪುರ ತಾಲ್ಲೂಕಿನಲ್ಲಿ ಒಟ್ಟು 21 ಕ್ಲಸ್ಟರ್‌ಗಳು ಇದ್ದು ಎಲ್ಲಾ ಸಿ.ಆರ್.ಪಿ.ಗಳಿಗೆ ಪೂರ್ವಭಾವಿ ಸಭೆಯನ್ನು ಆಯೋಜಿಸಿ ಡಯಟ್ ಮಾರ್ಗದರ್ಶನದಂತೆ ಆನ್‌ಲೈನ್ ನಲ್ಲಿ ತರಬೇತಿ ಹೇಗೆ ಮಾಡುವುದು ಎಂಬುದರ ಬಗ್ಗೆ ಹಾಗೂ ವಿವಿಧ ಆಪ್‌ಗಳು ಉದಾಹರಣೆಗೆ ಜೂಮ್, ವೆಬೆಕ್ಸ್, ಗೂಗಲ್ ಮೀಟ್ ಮೊದಲಾದವುಗಳನ್ನು ಬಳಸಿಕೊಳ್ಳುವುದರೊಂದಿಗೆ ಆನ್‌ಲೈನ್ ತರಬೇತಿ ನೀಡಬಹುದು. ಸಿ.ಆರ್.ಪಿ.ಗಳಿಗೆ ವೆಬೆಕ್ಸ್ ಮೂಲಕ ಆಪ್ ಡೌನ್‌ಲೋಡ್ ಮಾಡಿಸಿ ನಂತರದಲ್ಲಿ ಅದರಲ್ಲಿ ಪ್ರಮುಖವಾಗಿ ಐಕಾನ್ಸ್‌ಗಳು ಹಾಗೂ ಹೋಸ್ಟ್ ಆಗಿ ಕಾರ್ಯನಿರ್ವಹಿಸುವುದರ ಬಗ್ಗೆ ಎಲ್ಲಾ ಸಿ.ಆರ್.ಪಿ.ಗಳ ಆಂಡ್ರಾಯ್ಡ್ ಮೊಬೈಲ್ ಮೂಲಕ ಹ್ಯಾಡ್ಸ್ ಆನ್ ತರಬೇತಿ ಮಾಡಿಸುವುದರೊಂದಿಗೆ ಯಶಸ್ವಿಗೊಳಿಸಲಾಯಿತು. ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಜೀವನ ಕೌಶಲ ಆನ್‌ಲೈನ್ ತರಬೇತಿಯು ದಿನಾಂಕ 20/07/2020 ರಿಂದ 31/07/2020ರವರೆಗೆ ಆಯಾ ಕ್ಲಸ್ಟರ್ ಹಂತದಲ್ಲಿ ಸಿ.ಆರ್.ಪಿ.ಗಳು ಹೋಸ್ಟ್ ಆಗಿ ಸಂಪನ್ಮೂಲ ವ್ಯಕ್ತಿಗಳಾಗಿ ಸಹಶಿಕ್ಷಕರನ್ನು ಆಯೋಜಿಸಿಕೊಂಡು ನಿಗದಿತ ವೇಳಾಪಟ್ಟಿಯಂತೆ ಪ್ರತಿ ದಿನ ಬೆಳಗ್ಗೆ 11:00 ರಿಂದ 11:50 ಹಾಗೂ ಮಧ್ಯಾಹ್ನ 03:00 ರಿಂದ 03:50ರವರೆಗೆ ಜರುಗಿಸಲಾಯಿತು. ಅಂತೆಯೇ ಪ್ರತಿ ದಿನ ಶಿಕ್ಷಕರ ಹಾಜರಾತಿಯನ್ನು ಸಿ.ಆರ್.ಪಿ.ಗಳಿಂದ ಪಡೆಯಲಾಯಿತು. ಹಾಗೂ ಎಲ್ಲಾ ಇಸಿಓ, ಬಿ.ಆರ್.ಪಿ.ಗಳೊಂದಿಗೆ ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸಲಾಯಿತು.

ಜೀವನ ಕೌಶಲ ಹದಿಹರೆಯದ ಪರಿಚಯ, ಸವಾಲುಗಳು ಮತ್ತು ನಿರ್ವಹಣೆ, ಪ್ರಾಮುಖ್ಯತೆ, ಜೀವನ ಕೌಶಲ ಮಹತ್ವ ಮತ್ತು ಪ್ರಾಮುಖ್ಯತೆ, ರಸ್ತೆ ಸುರಕ್ಷತೆ ಮಹತ್ವ, ಸಂಕೇತಗಳು, ಸೂಚನೆಗಳು, ಪ್ರಥಮ ಚಿಕಿತ್ಸೆ, ಕಲಿವಿನ ಫಲಗಳು ಸಿಎಸ್‌ಎಎಸ್ ಬಗ್ಗೆ ಮಾಹಿತಿ, ಸಿಸಿಇ ಅದರ ಸಾಧನ ತಂತ್ರಗಳು, ಮೌಲ್ಯಮಾಪನ, ದಾಖಲೆಗಳು ಇವುಗಳ ಬಗ್ಗೆ ವಿಸ್ತೃತವಾಗಿ ಮಾಹಿತಿಯನ್ನು ನೀಡಲಾಯಿತು.

ಆನ್‌ಲೈನ್ ತರಬೇತಿಯಲ್ಲಿ ಜೀವನ ಕೌಶಲ ಮತ್ತು ನಿರ್ವಹಣೆ, ಇತರ ವಿವರಗಳು ಅತ್ಯಂತ ಯಶಸ್ವಿಯಾಗಿ ಮೂಡಿಬಂದಿರುತ್ತದೆ. ಕೋವಿಡ್ 19ರ ಸನ್ನಿವೇಶದಲ್ಲಿ ಹೆಚ್ಚು ಸಮರ್ಪಕವಾಗಿ ತರಬೇತಿಯಲ್ಲಿ ವಿಷಯಗಳನ್ನು ತಿಳಿದುಕೊಳ್ಳಲು ಸಾಧ್ಯವಾಯಿತು ಎಂಬುದರೊಂದಿಗೆ ಬಹುತೇಕ ಶಿಕ್ಷಕರ ಅಭಿಪ್ರಾಯ ಸಂಗ್ರಹದಲ್ಲಿ

ಸಮನ್ವಯಾಧಿಕಾರಿಯಾಗಿ ದಿನಕ್ಕೆ ಎರಡರಿಂದ ಮೂರು ಕ್ಲಸ್ಟರ್‌ಗಳಲ್ಲಿ ವೆಬಿನಾರ್‌ನಲ್ಲಿ ಜಾಯಿನ್ ಆಗುವುದರೊಂದಿಗೆ ಜೀವನ ಕೌಶಲ ತರಬೇತಿಯ ಸಿ.ಆರ್.ಪಿ. ಮತ್ತು ಸಂಪನ್ಮೂಲ ವ್ಯಕ್ತಿಗಳು ಉತ್ತಮವಾಗಿ ನಿರ್ವಹಿಸುತ್ತಿದ್ದುದನ್ನು ಗಮನಿಸಲಾಯಿತು. ಆನ್‌ಲೈನ್ ತರಬೇತಿ ಆಯೋಜಿಸುವುದರಲ್ಲಿ ಮತ್ತು ವಿಷಯ ಹಂಚಿಕೆ ಮಾಡುವುದರಲ್ಲಿ ಸಿ.ಆರ್.ಪಿ.ಗಳು ಹೆಚ್ಚು ಸಮರ್ಥರಾಗಿರುವುದು ಹಾಗೂ ಇದರೊಂದಿಗೆ ಪ್ರತಿ ದಿನದಲ್ಲಿ ಸಹಶಿಕ್ಷಕರು ಸಾಕಷ್ಟು ಸಂಪನ್ಮೂಲ ವ್ಯಕ್ತಿಗಳಾಗಿ ಹೊರಹೊಮ್ಮಿದ್ದು, ವಿನೂತನವಾಗಿ ಪಿಪಿಟಿ. ವಿಡಿಯೋ ಕ್ಲಿಪಿಂಗ್‌ಗಳೊಂದಿಗೆ ಪೂರ್ವ ತಯಾರಿ ನಡೆಸಿ ತರಬೇತಿಯಲ್ಲಿ ಶಿಕ್ಷಕರು ನಿರಂತರವಾಗಿ ಇರುವಂತೆ ಹಾಗೂ ನಿಗಧಿತ ಸಮಯವೂ ಮೀರಿ ಆಸಕ್ತಿದಾಯಕವಾಗಿ ಪಾಲ್ಗೊಂಡಿರುವುದು ಅತ್ಯಂತ ಸಂತಸದಾಯಕವಾಗಿರುತ್ತದೆ. ಒಟ್ಟಾರೆ ಈ ತರಬೇತಿಯಲ್ಲಿ 918 ಸಹ ಶಿಕ್ಷಕರು ಪಾಲ್ಗೊಂಡಿರುತ್ತಾರೆ.

**ಶ್ರೀ ಮುರುಳೀಧರ್**
ಸಮನ್ವಯಾಧಿಕಾರಿ
ಕ್ಷೇತ್ರ ಸಂಪನ್ಮೂಲ ಕೇಂದ್ರ, ಶಿಕಾರಿಪುರ.

# ಜಿಲ್ಲೆಯಲ್ಲಿ ವಿದ್ಯಾಗಮ ಸಾಗುತ್ತಿರುವ ಹಾದಿ

2020–21 ನೇ ವರ್ಷ ಅತ್ಯಂತ ಸಂಕೀರ್ಣ ವರ್ಷವಾಗಿದೆ ಹೊಸ ವರುಷದ ಸವಿಯನ್ನು ಅನುಭವಿಸುತ್ತಿರುವಾಗಲೇ ದುತ್ ಎಂದು ಪ್ರಕೃತಿ ವಿಕೋಪ ಚೀನಾ ದೇಶದಲ್ಲಿ ಕಾಣಿಸಿಕೊಂಡು ಮನುಕುಲವನ್ನು ಆಪೋಷಣೆ ಮಾಡಲಾರಂಭಿಸಿತು. ನಮ್ಮ ನೆರೆಯ ದೇಶದಲ್ಲಿ ಮನುಕುಲದ ಪತನವನ್ನು ಟಿ.ವಿ. ಪೇಪರ್ ಇತ್ಯಾದಿ ಸಮೂಹ ಮಾಧ್ಯಮಗಳಲ್ಲಿ ಕೇಳುತ್ತಿರುವಾಗ, ಭಾರತ, ಭರತಖಂಡ ಭೌಗೋಳಿಕವಾಗಿ, ನೈಸರ್ಗಿಕವಾಗಿ ಬಲಿಷ್ಠ ಎಂದು ಭ್ರಮೆಯಲ್ಲಿರುವಾಗಲೇ ಭಾರತಕ್ಕೂ ಕೊರೋನಾದಂತಹ, ಕಣ್ಣಿಗೆ ಕಾಣದಂತಹ ವೈರಸ್ ಲಗ್ಗೆ ಇಟ್ಟಿತ್ತು. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರ ವೈರಸ್ ನಿಯಂತ್ರಣಕ್ಕಾಗಿ ಮಾರ್ಚ್ 23, 2020ರಂದು ಭಾರತ ದೇಶಕ್ಕೆ ಲಾಕ್‌ಡೌನ್ ಎಂದು ಘೋಷಿಸಿತು. ಹಂತ ಹಂತವಾಗಿ ಲಾಕ್‌ಡೌನ್ ಮುಂದುವರೆದು, ಎಲ್ಲರೂ, ಎಲ್ಲವನ್ನು ಬಿಟ್ಟು ಮನೆಯಲ್ಲೇ ಇರುವಂತಾಯ್ತು ಶಾಲಾ ಕಾಲೇಜುಗಳು, ಅಂಗಡಿ ಮುಂಗಟ್ಟುಗಳು, ವ್ಯಾಪಾರ ವಹಿವಾಟುಗಳು ಬಂದ್ ಆದವು, ಹಳ್ಳಿ ಹಳ್ಳಿಗೂ, ನಗರದಿಂದ ನಗರಕ್ಕೂ ಸಂಚಾರವಿಲ್ಲದಂತಾಯ್ತು, ಬಂಧು ಬಳಗದವರ ಭೇಟಿ ಕೂಡ ಇಲ್ಲದಂತಾಯ್ತು ಬಹುಶ: ಇಂತಹ ಪರಿಸ್ಥಿತಿ ಹಿಂದೆ ಎಂದಿಗೂ ಮಾನವ ಕುಲ ನೋಡಿರಲು, ಅನುಭವಿಸಲು ಸಾಧ್ಯವಿಲ್ಲ.

ಲಾಕ್‌ಡೌನ್‌ನಂತಹ ಪರಿಸ್ಥಿತಿಯಲ್ಲಿ ಶಿಕ್ಷಣ ಇಲಾಖೆಯ ಕ್ರಮಬದ್ಧ ಚಟುವಟಿಕೆಗಳು ಸ್ಥಗಿತಗೊಂಡವು ಶಾಲಾ ಕಾಲೇಜುಗಳು ಮುಚ್ಚಿರುವುದರಿಂದ ಪರೀಕ್ಷೆಗಳು ಮುಂದೂಡಲ್ಪಟ್ಟವು. ಪರೀಕ್ಷಾ ಸಿದ್ಧತೆ ಮಾಡಿಕೊಂಡಿದ್ದ ವಿದ್ಯಾರ್ಥಿಗಳು ವಿದ್ಯಾರ್ಜನೆಯನ್ನು ಬಿಟ್ಟು ಬೇರೆ ಚಟುವಟಿಕೆಗಳಲ್ಲಿ ನಿರತರಾದರು. ಕೆಲವು ವಿದ್ಯಾರ್ಥಿಗಳು ಹೊಲಗದ್ದೆಗಳಲ್ಲಿ ಕಾರ್ಮಿಕರಾದರೆ, ಕೆಲವರು ಸೋಮಾರಿಗಳಾದರು. ಇನ್ನೂ ಕೆಲವು ವಿದ್ಯಾರ್ಥಿಗಳು ಬಾಲ್ಯವಿವಾಹಗಳು, ದುಶ್ಚಟಗಳಿಗೆ ಬಲಿಯಾಗಿ ಭವಿಷ್ಯವಿಲ್ಲದಂತಾದರು. ಭಾರತದ ಭಾವಿ ಪ್ರಜೆಗಳಾಗಬೇಕಾದ ಮಕ್ಕಳು ಸಮಾಜ ದ್ರೋಹಿಗಳಾಗಿ ಬೆಳೆಯುವ ಮುನ್ಸೂಚನೆ ಕಾಣಲಾರಂಭಿಸಿತು. ಅವರಲ್ಲಿ ನವಚೈತನ್ಯ ತುಂಬಲು ಸರ್ಕಾರ, ತಜ್ಞರು ಯೋಚಿಸಲಾರಂಭಿಸಿದರು.



ಇಂತಹ ಸಂದರ್ಭದಲ್ಲಿ ಕರ್ನಾಟಕ ಸರ್ಕಾರ "ಪ್ರತೀ ಮಗುವಿನ ಭವಿಷ್ಯದ ಕನಸಿಗೆ ಯಾವುದೇ ನೈಸರ್ಗಿಕ ವಿಕೋಪ, ಮಹಾಮಾರಿ ಇನ್ನಾವುದೇ ಅಡಚಣೆಗಳು ಅಡ್ಡಿಯಾಗದಂತೆ ನನಸಾಗಿಸುವ" ದೂರದೃಷ್ಟಿಯಿಂದ "ವಿದ್ಯಾಗಮ" ನಿರಂತರ ಕಲಿಕಾ ಕಾರ್ಯಕ್ರಮವನ್ನು ಜಾರಿಗೆ ತಂದಿತು.

ವಿದ್ಯಾಗಮ ನಿರಂತರ ಕಲಿಕಾ ಕಾರ್ಯಕ್ರಮಕ್ಕೆ ತನ್ನದೇ ಆದ ಉದ್ದೇಶಗಳಿವೆ. ಅವುಗಳೆಂದರೆ

ಮೊದಲನೆಯದಾಗಿ ಶಾಲೆ ಮುಚ್ಚಿರುವ ಸಮಯದಲ್ಲಿಯೂ ಮಕ್ಕಳ ನಿರಂತರ ಕಲಿಕಾ ಪ್ರಕ್ರಿಯೆಯನ್ನು ಮುಂದುವರೆಸುವುದು. ಎರಡನೆಯದಾಗಿ ಪ್ರತಿ ಮಗುವು ಕಲಿಕಾ ವ್ಯಾಪ್ತಿಯಲ್ಲಿ ಬರುವಂತೆ ಯೋಜನೆ ರೂಪಿಸುವುದು. ಮೂರನೇಯದಾಗಿ ಕೋವಿಡ್ ಹಿನ್ನಲೆಯಲ್ಲಿ ಭೌತಿಕವಾಗಿ ಶಾಲೆಗಳನ್ನು ಪ್ರಾರಂಭಿಸುವವರೆಗೂ ಶಿಕ್ಷಕರು ಮಕ್ಕಳೊಂದಿಗೆ ನಿರಂತರ ಸಂಪರ್ಕದಲ್ಲಿರುವುದು. ನಾಲ್ಕನೆಯದಾಗಿ ಶಿಕ್ಷಕರು ಶಾಲಾ ಮೇಲುಸ್ತುವಾರಿ ಸಮಿತಿಯ ಸದಸ್ಯರು, ಆಡಳಿತ ಮಂಡಳಿಯವರು ಸ್ವಯಂ ಸೇವಕರು, ಪೋಷಕರು, ಹಾಗೂ ಸಮುದಾಯದ ಎಲ್ಲ ಭಾಗೀದಾರರನ್ನು ಸಕ್ರೀಯವಾಗಿ ತೊಡಗಿಸಿಕೊಳ್ಳುವುದು.

ಕರ್ನಾಟಕ ಸರ್ಕಾರದ ಘನ ಉದ್ಧೇಶವನ್ನು ಅರಿತ ಶಿಕ್ಷಣ ಇಲಾಖೆ ಮೂರು ಕಾಲ್ಪನಿಕ ಕೋಣೆಗಳನ್ನು ರಚಿಸಿತ್ತು. ಪ್ರತಿ ಶಾಲೆಯು 20 ರಿಂದ 25 ಮಕ್ಕಳಿಗೆ ಒಬ್ಬ ಮಾರ್ಗದರ್ಶಕ ಶಿಕ್ಷಕರನ್ನು ನೇಮಿಸಿ ಕಾಲ್ಪನಿಕ ಕಲಿಕಾ ಕೋಣೆಯನ್ನು ರೂಪಿಸಲು ಮಾರ್ಗದರ್ಶನ ಮಾಡಿತು. ಸರ್ಕಾರದ ಆಶಯದಂತೆ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಅನೇಕ ವೆಬಿನಾರ್ ಕಾರ್ಯಕ್ರಮದ ಮೂಲಕ ಜಿಲ್ಲೆಯ ಕ್ರಿಯಾಯೋಜನೆಯನ್ನು ರೂಪಿಸಿಕೊಂಡು, ಏಳು ಬ್ಲಾಕ್‌ಗಳಲ್ಲಿ ಅನುಷ್ಠಾನಗೊಳಿಸಲಾಯ್ತು. ಇಡಿ ಡಯಟ್‌ನ್ನು 'ಶಾಲೆ' ಎಂಬಂತೆ ಪರಿಭಾವಿಸಿ, ಮಾರ್ಗದರ್ಶಿ ಶಿಕ್ಷಕರಿಗೆ ವಿಷಯವಾರು ಸಾಮಾಗ್ರಿಗಳನ್ನು ಕಳುಹಿಸಲು, ಸಂಪನ್ಮೂಲ ತಂಡವನ್ನು ರಚಿಸಿ, ಪ್ರತಿ ತರಗತಿಗೆ ಮುಖ್ಯಸ್ಥರನ್ನು ನೇಮಿಸಿ, ಅವರುಗಳ ಮೂಲಕ ವಿಷಯವಾರು ಕಲಿಕಾ ಸಾಮಾಗ್ರಿಗಳನ್ನು ಮಕ್ಕಳ ಕಲಿಕೆಯನ್ನು ನಿರಂತರವಾಗಿಸಲು ಮತ್ತು ಕಲಿಕಾ ಅಂತರವನ್ನು ಸದ್ಯದ ಪರಿಸ್ಥಿತಿಯಲ್ಲಿ ಸರಿದೂಗಿಸಲು ಹಾಗೂ ವಿಪತ್ತಿನಿಂದ ಉಂಟಾದ ಕಲಿಕಾ ಅವಕಾಶದ ಸಮಯದ ಕಂದರವನ್ನು ವಿವಿಧ ಚಟುವಟಿಕೆಗಳ ಮೂಲಕ ಸಕ್ರೀಯಗೊಳಿಸಲು ಹಾಗೂ ಬಲವರ್ಧನೆಗೊಳಿಸಲು ಈ ಕಾರ್ಯಕ್ರಮ ಸಹಕಾರಿಯಾಗಿದೆ. ನಮ್ಮ ಜಿಲ್ಲೆಯಲ್ಲಿ ಹಂತ ಹಂತವಾಗಿ ಇಲಾಖೆ ನೀಡಿದ ಮಾರ್ಗದರ್ಶನವನ್ನು ಅನುಸರಿಸಿ ಸಮರ್ಪಕವಾಗಿ ಅನುಷ್ಠಾನ ಮಾಡಿ ಶಿಕ್ಷಕರು ಅನೇಕ ಡಿಜಿಟಲ್ ವೇದಿಕೆಗಳ ಮೂಲಕ ಹಾಗೂ ಹೊಸ ಕಲಿಕೆಯ ಪ್ರಯತ್ನಗಳ ಮೂಲಕ ವಿಷಯಗಳನ್ನು ಅಂತರ್ಗತಗೊಳಿಸಿಕೊಂಡು ಮಕ್ಕಳಲ್ಲಿ ನಿರಂತರ ಕಲಿಕೆಗೆ ಸಹಕರಿಸುತ್ತಿದ್ದಾರೆ. ಮಕ್ಕಳು ಸ್ವಕಲಿಕೆ, ಸ್ವತಂತ್ರಕಲಿಕೆ, ಸಂತಸದಾಯಕವಾಗಿ ಕಲಿಕೆಯಲ್ಲಿ ಸ್ವ ಅನುಭವದೊಂದಿಗೆ, ಪರಿಸರದಲ್ಲಿ ಕಲಿಯುತ್ತಿದ್ದು, ಮಕ್ಕಳಲ್ಲಿ ಕಲಿಕೆ ಸದೃಢವಾಗುವುದಕ್ಕೆ ಈ ಕಾರ್ಯಕ್ರಮ ಉತ್ತಮ ವೇದಿಕೆಯಾಗಿದೆ.



**ಶ್ರೀಮತಿ ಫಾತಿಮಾ ಬೀ ಟಿ.ಐ.**
ಹಿರಿಯ ಉಪನ್ಯಾಸಕರು
ಡಯಟ್, ಶಿವಮೊಗ್ಗ

# ಸರ್ಕಾರಿ ಶಾಲೆಯ ಸಬಲೀಕರಣದಲ್ಲಿ ವಿದ್ಯಾಗಮ ಯೋಜನೆ

'ಶಿಕ್ಷಣವು ಮಾನವರನ್ನು ನಾಗರೀಕರನ್ನಾಗಿಸುತ್ತದೆ' ಎಂದು ಡಾ॥ ಸರ್ವಪಲ್ಲಿ ರಾಧಕೃಷ್ಣನ್ ರವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಖಂಡಿತವಾಗಿಯೂ ಸಾರ್ವಕಾಲಿಕ ಸತ್ಯವಾಗಿದೆ. ಶಿಕ್ಷಣ ಮಕ್ಕಳ ಔಪಚಾರಿಕವಾಗಿ ಅಥವಾ ಅನೌಪಚಾರಿಕವಾಗಿ ಪಡೆಯುತ್ತಾರೆ. ಔಪಚಾರಿಕ ಶಿಕ್ಷಣ ಒದಗಿಸುವಲ್ಲಿ ಮುಖ್ಯವಾದ ಹಾಗೂ ಮಹತ್ತರವಾದ ಪಾತ್ರ 'ಶಾಲೆ' ವಹಿಸುತ್ತದೆ. ಮಗುವು ನಿರಂತರವಾಗಿ ಶಾಲೆಗೆ ಬರುವುದರಿಂದ ಪಠ್ಯ ಹಾಗೂ ಪಠ್ಯೇತರ ವಿಷಯಗಳನ್ನು ಕಲಿಯುತ್ತದೆ. ಆದರೆ 2020–21 ನೇ ಶೈಕ್ಷಣಿಕ ಸಾಲಿನಲ್ಲಿ ಔಪಚಾರಿಕ ಕೇಂದ್ರವಾದ ಶಾಲೆ ತೆರೆಯದಂತೆ ಮಾಡಿದ್ದು ಕೊರೋನ ವೈರಸ್ ಎಂಬ ಮಹಾಮಾರಿ ಇಂತಹ ವಿಷಮ ಪರಿಸ್ಥಿತಿಯಲ್ಲಿ ವಿದ್ಯಾಗಮ ಯೋಜನೆ ಸರಿಸುಮಾರು 5 ತಿಂಗಳ, ಬಾರಿ ಅಂತರದ ನಂತರ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಪಾಠ ಬೋಧನೆಯ ಅನುಭವ ನೀಡುವ ಸದುದ್ದೇಶದಿಂದ ಘನ ಸರ್ಕಾರ ರೂಪಿಸಿದ ಒಂದು ವಿನೂತನ ಹಾಗೂ ವಿಶಿಷ್ಟ ಯೋಜನೆಯಾಗಿದೆ. ಇದು ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಅನುಷ್ಠಾನಗೊಂಡಿದೆ. ಈ ಪರಿಕಲ್ಪನೆಯು ರಾಜ್ಯದಲ್ಲಿ ಶಾಲೆಗಳನ್ನು ತೆರೆಯದೆಯೇ ವಿದ್ಯಾರ್ಥಿಗಳು ವಾಸಿಸುವ ಪ್ರದೇಶಗಳಿಗೆ ಶಿಕ್ಷಕರು ತೆರಳಿ ಸೂಕ್ತ ಮುನ್ನೆಚ್ಚರಿಕಾ ಕ್ರಮಗಳೊಂದಿಗೆ ವಿದ್ಯಾರ್ಥಿಗಳನ್ನು ಸ್ವಕಲಿಕೆಗೆ ಪ್ರೇರಪಿಸಿ ಮಾರ್ಗದರ್ಶನ ಮಾಡುವ ಕಾರ್ಯಕ್ರಮ ಇದಾಗಿದ್ದು. ಇದು "ವಠಾರ ಶಾಲೆ " ಎಂಬ ಹೆಸರಿನಿಂದಲೂ ಗುರುತಿಸಲ್ಪಟ್ಟಿದೆ. ಯೋಜನೆಯ ನಿರಂತರ ಕಲಿಕೆಗೆ ವಿದ್ಯಾರ್ಥಿಗಳನ್ನು ಸೆಳೆಯಲು ಶಿಕ್ಷಕರು ಸಕಲ ಸಿದ್ಧತೆ ಕೈಗೊಂಡಿದ್ದಾರೆ. ಇದರ ಅನ್ವಯ ಶಿಕ್ಷಕರು ತಮ್ಮ ಶಾಲೆಯ ವಿದ್ಯಾರ್ಥಿಗಳಲ್ಲಿ ಲಭ್ಯವಿರುವ ತಂತ್ರಜ್ಞಾನ ಅಧರಿಸಿ ವಿದ್ಯಾರ್ಥಿಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಿ ವಾಟ್ಸ್‌ಆಪ್ ಮೂಲಕ, ಮೆಸೇಜ್ ಮೂಲಕ ಹಾಗು ಮುಖಾಮುಖಿ ಭೇಟಿಯ ಮೂಲಕ ವಿದ್ಯಾರ್ಥಿಗಳು ವಾಸಿಸುವ ಭೌಗೋಳಿಕ ಪ್ರದೇಶಗಳಿಗೆ ಭೇಟಿ ನೀಡಿ  ಕಾಲ್ಪನಿಕ ಕೋಣೆಗಳಲ್ಲಿ ವಿದ್ಯಾರ್ಥಿಗಳನ್ನು ಒಂದರಿಂದ ಎರಡು ಗಂಟೆಗಳ ಅವಧಿಯಲ್ಲಿ ಕಲಿಕಾಂಶಗಳ ಬೋಧನೆಯನ್ನು ಹಲವಾರು ಚಟುವಟಿಕೆಗಳು, ಅಭ್ಯಾಸ ಹಾಳೆಗಳು ಹಾಗೂ ಯೋಜನೆಗಳನ್ನು ಸೂಕ್ತ ಕಲಿಕೋಪಕರಣಗಳನ್ನು ಬಳಸಿ ಬೋಧಿಸುತ್ತಿದ್ದು ಎಲ್ಲಾ ಶಿಕ್ಷಕರು ಉತ್ಸಾಹದಿಂದ ಕಾರ್ಯಕ್ರಮದ ಸದುಪಯೋಗ ಮಾಡಿಕೊಂಡು ವಿದ್ಯಾರ್ಥಿಗಳ ಕಲಿಕೆಗೆ ಕಾರಣೀಕರ್ತರಾಗಿದ್ದಾರೆ. ಇದರ ಫಲಶ್ರುತಿ ಎಂಬಂತೆ ಶಿವಮೊಗ್ಗ ತಾಲೂಕಿನಲ್ಲಿ ಸುಮಾರು 50 ಶಾಲೆಗಳಲ್ಲಿ ಸರಾಸರಿ ಶೇಕಡ 9 ರಷ್ಟು ದಾಖಲಾತಿ ಹೆಚ್ಚಳವಾಗಿದೆ. ಇದಕ್ಕೆ ಪೂರಕವಾಗಿ ಚಂದನ ಟಿ.ವಿಯಲ್ಲಿ ಪ್ರೌಢ ಶಾಲಾ ವಿದ್ಯಾರ್ಥಿಗಳಿಗಾಗಿ ಪ್ರಸಾರವಾಗುತ್ತಿರುವ 'ಸಂವೇದ' ಕಾರ್ಯಕ್ರಮವು ವಿದ್ಯಾಗಮದ ಬಲವನ್ನು ಮತ್ತಷ್ಟು ಹೆಚ್ಚಿಸಿದ್ದು, ತಮ್ಮ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಕಂಗೆಟ್ಟ ಪೋಷಕರಲ್ಲಿ ಆಶಾಭಾವವನ್ನು ಹುಟ್ಟಿಸಿದೆ ಹಾಗೂ ಶೈಕ್ಷಣಿಕ ವರ್ಷಾರಂಭದ ವಿಳಂಬವನ್ನು ಸರಿದೂಗಿಸಲು ಸಹಕಾರಿಯಾಗಿದೆ.

**ಶಿಕ್ಷಕರ ಅಭಿಪ್ರಾಯ :**

ಶಿಕ್ಷಕರು ಶೈಕ್ಷಣಿಕ ವರ್ಷ ಆರಂಭದಿಂದ ವಿದ್ಯಾರ್ಥಿಗಳಿಲ್ಲದೆ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುವ ಬಗೆಗೆ ಸಾಕಷ್ಟು ಅತಂಕ ಸಾರ್ವಜನಿಕ ವಲಯದ ಟೀಕೆಗಳಿಂದ ಮುಕ್ತಿಹೊಂದಿ ತಮ್ಮ ವೃತ್ತಿ ನಿಷ್ಠೆಯನ್ನು ವ್ಯಕ್ತಪಡಿಸಲು ವಿದ್ಯಾಗಮ ಯೋಜನೆ ಒಂದು ಉತ್ತಮ ವೇದಿಕೆ ಎಂಬುದು ಸಂತಸದ ವಿಚಾರವಾಗಿದೆ. ಯೋಜನೆಯು ದೈನಂದಿನ ಬೋಧನಾ ಕಲಿಕಾ ಪ್ರಕ್ರಿಯೆಗಿಂತ ವಿಭಿನ್ನವಾಗಿದ್ದು ಇಲಾಖೆ ನೀಡಿದ ಮಾರ್ಗಸೂಚಿಯನ್ವಯ ಸಿದ್ಧತೆ ಮಾಡಿಕೊಂಡು ಶಾಲಾ ಹಂತದ ಕ್ರಿಯಾಯೋಜನೆ ಹಾಗೂ ಪ್ರತಿ ಶಿಕ್ಷಕರು ವೈಯುಕ್ತಿಕ ಕ್ರಿಯಾಯೋಜನೆ ತಯಾರಿಸಿಕೊಂಡು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದು ವಿದ್ಯಾರ್ಥಿಗಳ ಕಲಿಕಾ ಅಂತರ ತುಂಬಲು ಬಹಳಷ್ಟು ಅನುಕೂಲವಾಗಿದೆ ಎಂದು ಹರ್ಷಿಸುತ್ತಿದ್ದಾರೆ.

ವಿದ್ಯಾಗಮ ಯೋಜನೆಯಿಂದ ಶಿಕ್ಷಕರು ಹಲವು ಸವಾಲುಗಳನ್ನು ಎದುರಿಸುವಂತಾಗಿದೆ ಬಹಳ ಮುಖ್ಯವಾಗಿ ಮಹಿಳಾ ಶಿಕ್ಷಕಿಯರೇ ಹೆಚ್ಚಿರುವ ಇಲಾಖೆಯಲ್ಲಿ ಭೌಗೋಳಿಕ ಪ್ರದೇಶಗಳಿಗೆ ಭೇಟಿ ನೀಡುವ ಸಂದರ್ಭದಲ್ಲಿ ರಕ್ಷಣೆಯ ಸಮಸ್ಯೆ, ಕಳ್ಳರ ಕಾಟ, ಪುಂಡರ ಟೀಕೆ, ಶೌಚಾಲಯ ಸಮಸ್ಯೆ, ಸೂಕ್ತ ಸ್ಥಳಾವಕಾಶ ಲಭ್ಯತೆ, ಸ್ವಚ್ಛತೆಯ ಸಮಸ್ಯೆ ಎಲ್ಲವುಗಳನ್ನು ಮೀರಿ ಧನಾತ್ಮಕ ಚಿಂತನೆಯೊಂದಿಗೆ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯವಾಗಿದೆ. ಇಲಾಖೆಯ ವಿವಿಧ ಹಂತದ ಅಧಿಕಾರಿಗಳು ನೀಡುತ್ತಿರುವ ಸಲಹೆ, ಸೂಚನೆ, ಮಾರ್ಗದರ್ಶನ ಹಾಗೂ ನೈತಿಕ ಬಲದಿಂದ ಶಿಕ್ಷಕರು ತಮ್ಮ ವ್ಯಾಪ್ತಿಯಲ್ಲಿ ದಕ್ಷವಾಗಿ ಕಾರ್ಯನಿರ್ವಹಿಸಲು ಸಹಕಾರಿಯಾಗಿದೆ.

**ಪೋಷಕರ ಅಭಿಪ್ರಾಯ:**

ಕೇವಲ ಬೇಸಿಗೆಯ ಎರಡು ತಿಂಗಳುಗಳ ರಜೆಯಲ್ಲಿ ತಮ್ಮ ಮಕ್ಕಳನ್ನು ಸುಧಾರಿಸಲು ಹೆಣಗುತ್ತಿದ್ದ ಪೋಷಕರು ಕೋವಿಡ್–19ರ ಕಾರಣದಿಂದಾಗಿ ಸುಮಾರು ಐದು ತಿಂಗಳು ಮಕ್ಕಳನ್ನು ಸುಧಾರಿಸಿರುವುದು ಒಂದೆಡೆಯಾದರೆ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗಿ ಹಿಂದಿನ ಕಲಿಕೆಯನ್ನು ಮರೆಯುತ್ತಿರುವರು ಎಂಬುದಕ್ಕೆ ಔಷಧಿಯಂತೆ ವಿದ್ಯಾಗಮ ಅನುಷ್ಠಾನಗೊಂಡಿದೆ. ಇದರ ಬಗ್ಗೆ ಬಹಳ ಉತ್ಸುಕರಾಗಿರುವ ಪೋಷಕರು ಭೌಗೋಳಿಕ ಪ್ರದೇಶಕ್ಕೆ ಭೇಟಿ ನೀಡಿದ ಶಿಕ್ಷಕರಿಗೆ ತಮ್ಮ ನೈತಿಕವಾದ ಬೆಂಬಲ ಹಾಗೂ ಸ್ಥಳಗಳನ್ನು ಗುರುತಿಸಿಕೊಳ್ಳುವಲ್ಲಿ ಸಹಕಾರ ನೀಡುತ್ತಿದ್ದಾರೆ. ಇದುವರೆಗೆ ಸರ್ಕಾರಿ ಶಾಲೆಗಳೆಡೆಗೆ ತಾತ್ಸಾರ ಮನೋಭಾವ ಹೊಂದಿದ್ದ ಕೆಲ ಪೋಷಕರು ಈ ವಿನೂತನ ಯೋಜನೆಯಿಂದ ಆಕರ್ಷಿತರಾಗಿ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಸರ್ಕಾರಿ ಶಾಲೆಗಳಲ್ಲಿ ಸಾಧ್ಯ ಎಂದು ಅರಿತು ಖಾಸಗಿ ಶಾಲೆಗಳಿಂದ ಸರ್ಕಾರಿ ಶಾಲೆಗೆ ದಾಖಲಾತಿ ಮಾಡಿಸುತ್ತಿರುವುದು ಸರ್ಕಾರಿ ಶಾಲೆಯ ಅಭಿವೃದ್ಧಿಗೆ ಪೂರಕವಾಗಿದೆ.

**ವಿದ್ಯಾರ್ಥಿಗಳ ಅಭಿಪ್ರಾಯ :**

ಈ ಹಿಂದೆ ರಜೆಗಾಗಿ ಹಾತೊರೆಯುತ್ತಿದ್ದ ಮಕ್ಕಳಿಗೆ ಈ ಕರೋನಾ ಧೀರ್ಘಾವಧಿಯ ರಜೆಯೂ ಜಿಗುಪ್ಸೆ ಬರಿಸಿದೆ ಸ್ನೇಹಿತರನ್ನು ಕಾಣದೆ, ಅವರೊಂದಿಗೆ ಆಡದೇ, ತಮ್ಮ ಪ್ರೀತಿಯ ಶಿಕ್ಷಕರ ಪಾಠ ಕೇಳದೆ

ತಮ್ಮವರೇ ಇರುವ ಮನೆಯು ಜೈಲಿನಂತೆ ಭಾಸವಾಗಿದೆ. ಶಾಲೆ ಅದಷ್ಟು ಬೇಗ ಶುರುವಾಗಲಿ ಎಂದು ತವಕದಿಂದ ಕಾಯುತ್ತಿದ್ದ ಮಕ್ಕಳಿಗೆ ವಿದ್ಯಾಗಮ ಯೋಜನೆಯ ಕಾರಣದಿಂದ ತಮ್ಮ ಪ್ರೀತಿಯ ಸ್ನೇಹಿತರನ್ನು ಹಾಗೂ ಶಿಕ್ಷಕರನ್ನು ಸೇರುವಂತಾಗಿದೆ ಅದಲ್ಲದೆ ಕಾರ್ಯಕ್ರಮ ಬಯಸುವಂತೆ ಪ್ರತಿ ವಿದ್ಯಾರ್ಥಿಯ ಸ್ವ ಕಲಿಕೆಗೆ ಹೆಚ್ಚಿನ ಅವಕಾಶವಿದ್ದು ಸೃಜನಶೀಲತೆಯ ಪ್ರದರ್ಶನಕ್ಕೆ ಪೂರಕವಾದ ವೇದಿಕೆ ಇದಾಗಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ತಾವು ಇನ್ನೂ ಹೆಚ್ಚು ಶ್ರದ್ಧೆಯಿಂದ ಕಲಿಕೆಯಲ್ಲಿ ತೊಡಗಿರುವುದು "ಶಿಕ್ಷಣ ಎಂದರೆ ಕೇವಲ ನಾಲ್ಕು ಗೋಡೆಗಳ ನಡುವಿನ ಕಲಿಕೆಯಲ್ಲ " ಎಂಬುದಕ್ಕೆ ಪೂರಕವಾಗಿದೆ.

ಅಂತಿಮವಾಗಿ ಹೇಳುವುದಾರೆ ಜಗತ್ತಿನಾದ್ಯಂತ ಕರೋನಾ ಎಂಬ ಮಹಾಮಾರಿ ಆವರಿಸಿದೆ ಇಂತಹ ವಿಷಮ ಪರಿಸ್ಥಿತಿಯಲ್ಲಿ ನಮ್ಮ ಶಿಕ್ಷಕರು ಇಲಾಖೆಯ ಅದೇಶದನ್ವಯ ಮಕ್ಕಳ ಕಲಿಕೆಯಲ್ಲಿ ಕಾರ್ಯಕ್ರಮ ಅನುಷ್ಠಾನ ಗೊಳಿಸುತ್ತಿದ್ದಾರೆ ಅದಷ್ಟು ಬೇಗ ಶಾಲೆಗಳು ತೆರೆಯುವಂತಾಗಲಿ, ಈ ಮಹಾಮಾರಿಗೆ ಅತಿ ಶೀಘ್ರದಲ್ಲೇ ಔಷಧೋಪಚಾರ ಸಿಗುವಂತಾಗಲಿ, ಆತಂಕದಿಂದ ಬದುಕುತ್ತಿರುವ ನಾವು ನೀವುಗಳು ನಿರ್ಭಯವಾಗಿ ಜೀವಿಸುವಂತಾಗಲಿ ಎಂಬ ಆಶಾಭಾವನೆಯೊಂದಿಗೆ ವಿದ್ಯಾಗಮ ಕ್ರಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ದೇಶದ ಇತರ ರಾಜ್ಯಗಳಿಗೂ ಮಾದರಿಯಾಗಲಿ ಎಂದು ಹಾರೈಸುತ್ತಿದ್ದೇನೆ.

**ಸುನೀತಾ. ಎಲ್.ಎಸ್.**
ಸಿ.ಆರ್.ಪಿ. ಕಾಚಿನಕಟ್ಟೆ
ಶಿವಮೊಗ್ಗ, ತಾ.

# ವಿದ್ಯಾಗಮದ ಯಶಸ್ವಿ ಶಾಲೆಗಳತ್ತ ನನ್ನ ಚಿತ್ತ

**"ಸಮಸ್ಯೆಗಳಿಂದ ಓಡಿ ಹೋದರೆ ಪರಿಹಾರದಿಂದಲೂ ದೂರ ಹೋದಂತೆ ",** ಎಂಬ ಹಿರಿಯರ ಮಾತುಗಳನ್ನು ಸ್ಮರಿಸುತ್ತಾ ಕೊರೋನಾ ಎನ್ನುವ ಕಾರ್ಮೋಡದ ಸಮಸ್ಯೆಗೆ ಇಲಾಖೆ ರೂಪಿಸಿದ ವಿದ್ಯಾಗಮ ಎನ್ನುವ ಪರಿಹಾರವನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಪರಿಚಯಿಸಲಾಗಿದೆ. ಈ ಕಾರ್ಯಕ್ರಮದಿಂದಾಗಿ ಶಿಕ್ಷಕ ಮತ್ತು ಕಲಿಕಾರ್ಥಿಗಳ ಸಹಯೋಗಕ್ಕೆ ವೇದಿಕೆ ರೂಪುಗೊಂಡಿದೆ. ಇದರಿಂದಾಗಿ ಮಕ್ಕಳ ಕಲಿಕೆಗೆ ತಕ್ಕಷ್ಟು ಅವಕಾಶ ಲಭ್ಯವಾಗಿದೆ. ಮಕ್ಕಳನ್ನು ತಲುಪುವ ಶಿಕ್ಷಕರ ದಾರಿ ದುರ್ಗಮವಾದುದಾದರೂ ಅದರಲ್ಲಿ ಪಯಣಿಸಿ ಕಾಯಾ ವಾಚಾ ಮನಸಾ ತಲ್ಲೀನವಾಗಿ ತನಗಾದ ಆಯಾಸದ ನೋವನ್ನು ಮಕ್ಕಳ ಶೈಕ್ಷಣಿಕ ಕಲಿಕೆಯಲ್ಲಿ ನೋಡಿರುವುದರಿಂದ ಆ ನೋವು ಮಾಯವಾಗಿದೆ.


"ಒಂದು ಸಾಮಾನ್ಯ ಕೆಲಸವನ್ನು ಅತ್ಯುತ್ತಮವಾಗಿ ಮಾಡುವುದರಿಂದ ಶ್ರೇಷ್ಠ ಪ್ರತಿಫಲ ದೊರಕುತ್ತದೆ." ಎನ್ನುವ ಸ್ವಾಮಿ ವಿವೇಕಾನಂದರ ಮಾತಿನಂತೆ ವಿದ್ಯಾಗಮದ ಕೆಲಸವನ್ನು ಬಹಳ ಅಚ್ಚು ಕಟ್ಟಾಗಿ ನಿಷ್ಠೆಯಿಂದ ಮಾಡಿ ಪೋಷಕರ, ವಿದ್ಯಾರ್ಥಿಗಳ ಹಾಗೂ ಇಲಾಖೆಯ ಗಮನ ಸೆಳೆದ ನನ್ನ ಕ್ಲಸ್ಟರ್‌ನ 3 ಶಾಲೆಗಳ ಸೂಕ್ಷ್ಮ ಪರಿಚಯವನ್ನು ಮಾಡಲು ಬಯಸಿದ್ದೇನೆ.

ಹುಂಚ ಕ್ಲಸ್ಟರ್‌ನ ವಿದ್ಯಾಗಮದ ಯಶಸ್ವಿ ಶಾಲೆಗಳೆಂದರೆ.


1. ಸ.ಹಿ.ಪ್ರಾ.ಶಾಲೆ, ಸಮಟಗಾರು
2. ಸ.ಹಿ.ಪ್ರಾ.ಶಾಲೆ, ಕಡಸೂರು
3. ಸ.ಕಿ.ಪ್ರಾ.ಶಾಲೆ, ಕೀಳೇರಿಮೂಡ್ಲಿ

**1. ಸ.ಹಿ.ಪ್ರಾಶಾಲೆ, ಸಮಟಗಾರು :**

ಸಾರಿಗೆ ಸೌಕರ್ಯಕ್ಕೆ ಕಷ್ಟಕರವಾಗಿರುವ ಅತೀ ಗ್ರಾಮೀಣ ಭಾಗದಲ್ಲಿನ ಸಮಟಗಾರು ಶಾಲೆಯು ಹುಂಚ ಕ್ಷೇತ್ರದಿಂದ 3 ಕಿ.ಮೀ ದೂರದಲ್ಲಿದ್ದು, ಇಲ್ಲಿನ ಸದಾ ಕ್ರಿಯಾಶೀಲ 3 ಜನ ಶಿಕ್ಷಕ ವೃಂದದ ನಿರಂತರ ಪ್ರಯತ್ನದ ಫಲವಾಗಿ ವಿದ್ಯಾಗಮವು ಯಶಸ್ವಿಗೊಂಡಿದೆ. ಅವರ ಕಲಿಕಾ ಹಾಳೆ, ಮಗುವಿನ ಕೃತಿ ಸಂಪುಟ ಜೋಡಣೆ, ಪರಿಸರ ಕಲಿಕೆಗೆ ಒತ್ತು ನೀಡಿ ಹೋಂ ಗಾರ್ಡನ್ ಮಾಡಿಸಿ, ಕ್ರಾಫ್ಟ್ ವರ್ಕ್‌ಗಳನ್ನು ಮನೆಗಲಸಕ್ಕೆ ನೀಡಿ, ವಿಶೇಷ ಕಲಿಕಾ ಸಾಧನ, ಹಾಡು, ನೃತ್ಯದೊಂದಿಗೆ ವಿದ್ಯಾಗಮದ ಚಟುವಟಿಕೆಗೆ ಪುಷ್ಠಿ ನೀಡಿದ್ದಾರೆ. ಸದಾ ವಿದ್ಯಾರ್ಥಿಗಳ ಸರ್ವತೋಮುಖ ಪ್ರಗತಿಗೆ ತನು ಮನ ಧನ ಅರ್ಪಿಸುತ್ತಿರುವ ಪ್ರಯತ್ನ, ಶ್ರದ್ಧೆ ನಿಜಕ್ಕೂ ಶ್ಲಾಘನೀಯವಾಗಿದೆ.



**2. ಸ.ಹಿ.ಪ್ರಾ.ಶಾಲೆ, ಕಡಸೂರು :**



ಸ.ಹಿ.ಪ್ರಾ ಶಾಲೆ ಕಡಸೂರು (ನಾಗರಹಳ್ಳಿ)

ಮೂಲಾಕ್ಷರಗಳು ಮತ್ತು ಅದರ ಸರಳ ಪದಗಳು

| | | | | | | | | | |
|---|---|---|---|---|---|---|---|---|---|
| ರ | ಗ | ಸ | ದ | ಅ | | ಓ | ಔ | ಹ | ಶ |
| ಆ | ವ | ಮ | ಬ | ನ | | ಐ | ಋ | ಒ | ಛ. ಣ |
| ಪ | ಯ | ಉ | ಡ | ಟ. ಚ | | ಧ | ಥ | ಢ | ಭ |
| ಲ | ಷ | ಈ | ಊ | ಕ | | ಠ | ಫ | ಘ | ಝ. ಖ |
| ಎ | ಏ | ಇ | ಆ | ತ. ಳ | | ಅಂ | ಅಃ | ಜ | ಞ |

1.ರಸ . ಗರ. ಸರ. ದರ . ಅರ. ಸರಸ. ದರಗ. ದಸರ. ಅರಸ. ಅಗಸ. ಗರಗಸ. ಗರಗರ. ಸರಸರ. ದರದರ

2 ಜಗ. ನಗ. ಜನ. ವರ. ವನ. ಮಗ. ಮರ. ನಗ. ನಗರ. ದವಸ. ನಮನ. ಬಸವ. ಗಗನ. ಮದಗಜ .ಜನಮನ. ಅವಸರ

3 ಜಯ.ಪಟ. ದಡ. ಉಮ. ಪದ. ಪವನ. ನಯನ. ಉದರ. ಚಮಚ. ವಚನ. ಉದಯ. ಡವಡವ. ಅಪಜಯ. ವಟವಟ . ಟಪಟಪ. ಅವನ. ಸಮಯ

4 ಲಯ. ಕಸ. ಉಷ. ಲವ. ಊನ. ಕರ. ಕಮಲ. ಕರಗ. ಕದನ. ಈಚಲ. ಸಲಗ. ಕಡಜ. ಚರಕ.. ಲಬಲಬ. ಊರಜನ. ಊರಗಲ. ಕಲರವ

5 ಎಡ. ತಳ. ಆತ. ದಳ. ತಡ. ಆಳ. ಏಕ. ಈತ. ಆಟ. ಇನ. ಆಗಸ. ಆಲಯ. ಜಳಕ. ಬಳಪ. ಎರಕ. ಇವನ. .ಆಕರ. ಎಡಬಲ. ತರತರ

6 ಹಯ. ಓಟ. ಶರ. ವಶ. ಈಶ. ಆಶ. ಶಯನ. ಶತಕ. ಔರಸ. ಹವಳ. ಓಲಗ. ದಶಕ. ದಶದಳ. ಶತಶರ. ಪರವಶ. ಹರಹರ

7 ಹಣ. ಋಣ. ಛಲ. ಗಣ. ರಣ. .ಕಣ. ಒಳ. ಒಣ. ಮಣ. ಗಣಪ. ಐದಳ. ಚರಣ. ಮರಣ. ಔತಣ. ಶರಣ. ಪಯಣ. ಕರಣ. ಗಣಗಣ. ಕಣಕಣ. ಬಣಬಣ.ಒಣಮರ

ಹುಂಚ ಕ್ಷೇತ್ರದಿಂದ ಸುಮಾರು 4 ಕಿ.ಮೀ ಅಂತರದಲ್ಲಿರುವ ಈ ಶಾಲೆಯೂ ಕೂಡ ಅತೀ ಗ್ರಾಮೀಣ ಪ್ರದೇಶದಲ್ಲಿಯೇ ಇದೆ. ಕೇವಲ ಇಬ್ಬರೂ ಶಿಕ್ಷಕರಿದ್ದರೂ 10 ರಿಂದ 12 ವಿದ್ಯಾಗಮದ ಗುಂಪುಗಳನ್ನು ಯಶಸ್ವಿಯಾಗಿ ನಡೆಸುತ್ತಿದ್ದಾರೆ. ಆದಷ್ಟು ಆಧುನಿಕ ತಂತ್ರಾಂಶ. ಡಿಜಿಟಲ್ ತಂತ್ರಾಂಶಗಳನ್ನು ಬಳಸಿ Deeksha APP, KSEEB Notes link, Youtube link ಮೂಲಕ ವಾಟ್ಸ್‌ಆಪ್ ಮೂಲಕ ಆಡಿಯೋ ಹಾಗೂ ವೀಡಿಯೋಗಳ ಮೂಲಕವೂ ಸಾಕಷ್ಟು ಕಲಿಕೆ ನಡೆಯುತ್ತಿದೆ. ಅತೀ ಸಂತಸ ಹಾಗೂ ಚಟುವಟಿಕೆಯುಕ್ತ ಕಲಿಕೆಯನ್ನು ವಿದ್ಯಾರ್ಥಿಗಳು ಇಲ್ಲಿ ಮಾಡುತ್ತಿದ್ದಾರೆ. ಅಭ್ಯಾಸ ಹಾಳೆಗಾಗಿ ಹಾಗೂ ಜೆರಾಕ್ಸ್‌ಗಾಗಿ ನೂತನ Epson ಪ್ರಿಂಟರ್ ಖರೀದಿ ಮಾಡಿ ಸಮುದಾಯದ ನೆರವಿನೊಂದಿಗೆ ಶೈಕ್ಷಣಿಕ ಚಟುವಟಿಕೆಗಳನ್ನು ಅತ್ಯುತ್ತಮವಾಗಿ ನಿರ್ವಹಿಸುತ್ತಿದ್ದಾರೆ.

ಈ ಮೇಲ್ಕಂಡ ರೀತಿಯ ಹಲವಾರು ವಿಷಯವಾರು ಅಭ್ಯಾಸ ಹಾಳೆಗಳನ್ನು ನೀಡಿ ಮಕ್ಕಳ ಕಲಿಕೆಯನ್ನು ದೃಢೀಕರಿಸುವುದರೊಂದಿಗೆ ಪ್ರತೀ ನಿತ್ಯ ದಾಖಲೀಕರಣವನ್ನು ಮಾಡುತ್ತಿದ್ದಾರೆ. ಸಾಕಷ್ಟು ಅಪ್‌ಗಳನ್ನು ಸಮಯೋಚಿತವಾಗಿ ಬಳಸಿಕೊಳ್ಳುವುದನ್ನು ಈ ಶಾಲೆಯ ಶಿಕ್ಷಕರಿಂದ ಕಲಿಯುವಂತಿದೆ.

**3. ಸ.ಕಿ.ಪ್ರಾಶಾಲೆ, ಕೀಳೇರಿ ಮೂಡ್ಲಿ:**

ಹುಂಚ ಕ್ಷೇತ್ರದಲ್ಲಿಯೇ ಸಾಕಷ್ಟು ದುರ್ಗಮ ಪ್ರದೇಶದಲ್ಲಿರುವ ಸಾರಿಗೆ ವ್ಯವಸ್ಥೆಯನ್ನೇ ಕಾಣದ ಪುಟ್ಟ ಶಾಲೆ ಸ.ಕಿ.ಪ್ರಾ.ಶಾಲೆ ಕೀಳೇರಿ ಮೂಡ್ಲಿ. ಇಬ್ಬರ ಶಿಕ್ಷಕರ ಹಾಗೂ 23 ವಿದ್ಯಾರ್ಥಿಗಳು ಈ ಶಾಲೆಯಲ್ಲಿದ್ದು ವಿದ್ಯಾಗಮಕ್ಕಾಗಿ 6 ರಿಂದ 7 ತಂಡ ಮಾಡಿಕೊಂಡಿರುತ್ತಾರೆ. ಕಷ್ಟಕರವಾಗಿ ಮನೆ ಮನೆ ಭೇಟಿ ಮಾಡಿ ವಿದ್ಯಾಗಮದ ಯಶಸ್ವಿಗೆ ಕಾರಣರಾಗಿದ್ದಾರೆ. ಮಕ್ಕಳ ಕೃತಿ ಸಂಪುಟದ ನಿರ್ವಹಣೆ ಮಾದರಿಯಾಗಿದೆ. ಕ್ರಾಫ್ಟ್ ವರ್ಕ್‌ಗಳಿಗೆ ಆದ್ಯತೆ ನೀಡಿ, ಅವುಗಳ ಪರಿಶೀಲನೆ ಮಾಡಿ ಪ್ರತೀ ತಿಂಗಳು ಮಾಸ ಪತ್ರಿಕೆಯ ರೂಪದಲ್ಲಿ ಹೊರ ತರುತ್ತಿರುವುದು ಈ ಶಾಲೆಯ ವಿಶೇಷ.

ಒಟ್ಟಾರೆಯಾಗಿ ಹೇಳುವುದಾದರೆ ಶಾಲೆಗಳು ಆರಂಭವಾಗದೇ ಆತಂಕದಲ್ಲಿದ್ದ ಪೋಷಕರಿಗೆ ವಿದ್ಯಾಗಮವು ಸ್ಫೂರ್ತಿಯ ಸೆಲೆಯಾಗಿದೆ. ಅದನ್ನು ಬಹಳ ನಿಷ್ಠೆ ಮತ್ತು ಪ್ರೀತಿಯಿಂದ ಸಾಕಾರಗೊಳಿಸುತ್ತಿರುವ ಸಮಟಗಾರು, ಕಡಸೂರು ಮತ್ತು ಕೀಳೇರಿಮೂಡ್ಲಿಯಂತಹ ಶಾಲೆಗಳ ಕೆಲಸ ಕಾರ್ಯಗಳು ಎಲ್ಲಾ ಶಾಲೆಗಳಲ್ಲೂ ಸಾಧ್ಯವಾಗಬೇಕು. ಮಕ್ಕಳ ಚಟುವಟಿಕೆ, ಉತ್ಸಾಹ ಶಿಕ್ಷಣಾಸಕ್ತಿ ಗರಿಗೆದರಬೇಕು. ಇಲಾಖೆಯ ಧ್ಯೇಯೋದ್ದೇಶಗಳನ್ನು ಗೌರವದಿಂದ ಪೂರ್ಣಗೊಳಿಸುತ್ತಿರುವ ಇಂತಹ ಶಾಲೆಗಳ ನಿರ್ವಹಣೆ ಮಾಡುವ ಸಮೂಹ ಸಂಪನ್ಮೂಲ ವ್ಯಕ್ತಿ ಆಗಿರುವುದು ನನ್ನ ಸೌಭಾಗ್ಯ ಹಾಗೂ ಹೆಮ್ಮೆಯೇ ಆತದೆ.




ಎಲ್ಲಿ ಅಕ್ಷರದ ಬೆಳಕಿದೆಯೋ ಅಲ್ಲಿ ಅಜ್ಞಾನದ ಕತ್ತಲಿರಲು ಸಾಧ್ಯವಿಲ್ಲ. ಅಕ್ಷರದ ಬೆಳಕನ್ನು ನೀಡಲು ಶಕ್ತಿ ಮೀರಿ ಸದಾ ವಿನೂತನ ಚಟುವಟಿಕೆಗೆ ಹವಣಿಸುತ್ತಿರುವ ನನ್ನ ಕ್ಲಸ್ಟರ್ 3 ಶಾಲೆಗಳಿಗೂ, ಸಾರ್ವಜನಿಕ ಶಿಕ್ಷಣ ಇಲಾಖೆ, ಹೊಸನಗರ, ಸಮನ್ವಯಾಧಿಕಾರಿಗಳ ಕಛೇರಿ, ಹೊಸನಗರ ಹಾಗೂ ಸಮಸ್ಥ ವಿದ್ಯಾರ್ಥಿ ಪೋಷಕ ವೃಂದಕ್ಕೂ ಹೃದಯಪೂರ್ವಕ ಅಭಿನಂದನೆಗಳು.

**ದೀಪಾ ಎಂ.**
ಸಮೂಹ ಸಂಪನ್ಮೂಲ ವ್ಯಕ್ತಿ,
ಸಮೂಹ ಸಂಪನ್ಮೂಲ ಕೇಂದ್ರ, ಹುಂಚ

# ವಿದ್ಯಾಗಮ

**(ಜಾನಪದ ಶೈಲಿಯ ಕವನ)**

**ವಿದ್ಯಾಗಮ ಕಾರ್ಯಕ್ರಮಕೆ ಬನ್ನಿ ಮಕ್ಕಳೆ ವಠಾರಕೆ**

ಕೊರೋನ ಕಾಟದಿಂದಾ – ಸರ್ಕಾರಕೆ ಆಲೋಚನೆಹೊಂದಾ ।
ಶಾಲಾ – ಕಾಲೇಜು ಮುಚ್ಚಿದವಲ್ಲ – ಮಕ್ಕಳ ಕಥೆಯೇನು ಇನ್ನು ಮುಂದಾ ।

ಶಿಕ್ಷಣ ಸಚಿವ ಸುರೇಶ್‌ಕುಮಾರರಿಂದಾ – ಹೊರಬಿತ್ತು ಆದೇಶವೊಂದಾ
ವಿದ್ಯಾಗಮ ಕಾರ್ಯಕ್ರಮಕ್ಕೆ ಬನ್ನಿ ಮಕ್ಕಳೆ ಇನ್ನು ಮುಂದಾ ।

ಒಂದು ಕಡೆ ಸೇರೋಂಗ ಇಲ್ಲ – ಶಾಲೆ ಬಾಗಿಲ ತೆರೆಯಾಂಗ ಇಲ್ಲ ।
ದೇವಸ್ಥಾನ ಅರಳಿಕಟ್ಟೆ – ಸಮುದಾಯ ಭವನಕೆ ಬನ್ನಿರೆಲ್ಲಾ ॥

ಪೋಷಕರು ಆತಂಕದಾಗೆ – ಕಳಿಸಲಿಲ್ಲ ವಿದ್ಯಾಗಮಕೇ ।
ಅವರ ಮನವೊಲಿಸಿ ಕರೆತಂದಾರು – ಶಿಕ್ಷಕರು ಮಕ್ಕಳ ವಠಾರಕೆ ॥

ವಿದ್ಯಾಗಮ ಕಲಿಕೆಯು – ಅದಕೆ ಮೂರು ಕೋಣೆಯೂ
ತರಗತಿ ಕೋಣೆ–1, ತರಗತಿ ಕೋಣೆ–2, ತರಗತಿ ಕೋಣೆ–3 ಇವೆ ವಿಧವು ॥

ಶಿಕ್ಷಣ ಇಲಾಖೆಯಾಗೆ ಸಲಹೆ ಮಾಡಿದರು ಹೀಗೆ ।
ಕಡ್ಡಾಯದಿ ಎಲ್ಲರು ಮಾಸ್ಕನ್ನು ಧರಿಸಿ – ಕಲಿಸಿರಿ ಸಾಮಾಜಿಕ ಅಂತರದಾಗೆ ॥

ಜೀವವ ಲೆಕ್ಕಿಸಲಿಲ್ಲಾ – ಕಲಿಸಿದರು ಶಿಕ್ಷಕರೆಲ್ಲಾ ।
ಅದೆಸ್ಟೋ ಜನ ಶಿಕ್ಷಕರು – ಕೊರೋನಾಗೆ ಬಲಿಯಾದರಲ್ಲ ॥

ಸರ್ಕಾರ ಕಡಿತಮಾಡಲಿಲ್ಲಾ – ಕೊಟ್ಟೈತಿ ಸೌಕರ್ಯವೆಲ್ಲಾ ।
ಜನಪದ ಕಲಾತಂಡ ಕೈ ಮುಗಿದು ಕೇಳುತೈತಿ ನಿಷ್ಠೆಯಿಂದ ಕಲಿಸಿರಿ ಎಲ್ಲ ॥

**ಶ್ರೀ ನಿಸಾರ್ ಖಾನ್ ಕೆಂಚಾಯಿದ್**
ಶಿಕ್ಷಕರು, ಸ.ಕಿ.ಪ್ರಾ.ಶಾ., ಗೌಳಿಗರ ಕ್ಯಾಂಪ್ ಭದ್ರಾವತಿ ತಾಲ್ಲೂಕು.

# ವಿದ್ಯಾಗಮ

## (ಭೋಗ ಷಟ್ಪದಿಯಲ್ಲೊಂದು ರಚನೆ)

ಬರುವೆ ಮಗುವೆ ನಾನು ನಿನ್ನ
ಕರಗಳನ್ನು ಹಿಡಿದುಕೊಂಡು
ಬರೆಸಿ ಮೆರೆಸಿ ಹಾಡಿ ಕುಣಿದು ನಕ್ಕು ನಲಿಯಲು ।
ಉರವ ಗಟ್ಟಿ ಮಾಡಿಕೊಂಡು
ಶಿರವನೆತ್ತಿ ಬದುಕು ನೀನು
ಬರುವ ನೋವ ನೀಗಿಕೊಂಡು ಬಾಳು ಬೆಳಗಲಿ ॥

ಕ್ಲೇಶವೆಂಬುದೊಂದು ಬೆಂಕಿ
ದೋಷವೊಂದು ತಾಗದಿರಲಿ
ವೇಷದೊಡನೆಯಿರುವ ಬದುಕು ಬಾರದಾಗಲಿ ।
ರೋಷವನ್ನು ದೂರಮಾಡಿ
ದೋಷರಹಿತನಾಗಿ ನೀನು
ತೋಷದಿಂದ ಬಾಳಿ ಬದುಕು ನಾಶವಾಗದೆ ॥

ನಿನ್ನ ಕಲಿಕೆ ಕಂಡು ನಾನು
ನನ್ನ ಮಗುವು ಕಲಿಯಲೆಂದು
ಮುನ್ನ ದಿನವೆ ಸಿದ್ಧವಾಗಿ ಬರುವೆನೆಂದಿಗೂ ।
ರನ್ನ ನೀನು ಚೊಕ್ಕ ಚಿನ್ನ
ಎನ್ನ ಮಕುಟ ಮಣಿಯು ನೀನು
ನಿನ್ನ ನಲಿವು ನನಗೆ ಗೆಲುವ ತಾರಲೆಂದಿಗೂ ॥

**ಮೇದಿನಿ ಕೆಸವಿನಮನೆ.**
ಸ.ಕಿ.ಪ್ರಾ ಶಾಲೆ ಕಲ್ಲುಕೊರ್ಚಿ, ಶಿವಮೊಗ್ಗ ತಾಲ್ಲೂಕು.

# ಕೊರೊನಾ ಕಲಿಸುತ್ತಿರುವ ವಿದ್ಯಾಗಮ ಪಾಠ

ಮಹಾಮಾರಿ ಕೊರೊನಾ ವೈರಸ್ ಇಂದು ಪ್ರಪಂಚದಾದ್ಯಂತ ಹರಡಿ ಮಾನವನ ಎಲ್ಲಾ ರೀತಿಯ ಚಟುವಟಿಕೆಗಳ ಮೇಲೆ ಪ್ರಭಾವ ಬೀರುತ್ತಿದೆ. ಮಾನವನ ಜೀವನದ ಮೇಲೆ ಋಣಾತ್ಮಕ ಪರಿಣಾಮ ಬೀರಿದಷ್ಟೇ ಧನಾತ್ಮಕ ಬದಲಾವಣೆಗಳು ಆಗುತ್ತಿವೆ. ಇದಕ್ಕೆ ಶಿಕ್ಷಕ ಸಮೂಹ ಮತ್ತು ವಿದ್ಯಾರ್ಥಿ ಸಮೂಹ ಸಹ ಹೊರತಲ್ಲ. ಕೊರೊನಾವು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಅನೇಕ ಪಾಠಗಳನ್ನು ಕಲಿಸುತ್ತಿದೆ. ಸರ್ಕಾರಿ ಶಾಲಾ ವಿದ್ಯಾರ್ಥಿಗಳು ಸಹ ವಾಟ್ಸಾಪ್, ಯೂಟ್ಯೂಬ್ ಆನ್ಲೈನ್ ತರಗತಿಗಳನ್ನು ವೀಕ್ಷಿಸುವಂತೆ ಮಾಡಿದೆ. ವಿದ್ಯಾಗಮದ ಮೂಲಕ ಶಿಕ್ಷಕರು, ಪೋಷಕರು ಮತ್ತು ವಿದ್ಯಾರ್ಥಿಗಳ ನಡುವೆ ಬಾಂಧವ್ಯವನ್ನು ಗಟ್ಟಿಗೊಳಿಸುತ್ತಿದೆ. ಕೊರೊನಾ ಸಂದರ್ಭದಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ಶಿಕ್ಷಕರು "ಮನೆಯಿಂದ ಕೆಲಸ" (ವರ್ಕ್ ಫ್ರಮ್ ಹೋಮ್) ಬದಲಾಗಿ ವಿದ್ಯಾರ್ಥಿಗಳ "ಮನೆಯಲ್ಲಿ ಕೆಲಸ" (ವರ್ಕ್ ಅಟ್ ಹೋಮ್) ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇಂತಹ ಸಂಧರ್ಭದಲ್ಲಿ ಬಹುವರ್ಗ ಬೋಧನೆ ಮತ್ತು ಬಹು ವಿಷಯಗಳ ಸವಾಲುಗಳನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ. ವಿದ್ಯಾರ್ಥಿಗಳ ಮತ್ತು ಪೋಷಕರ ವಾಟ್ಸಪ್ ಗ್ರೂಪ್ಗಳನ್ನು ರಚಿಸಿ ಇ–ಲರ್ನಿಂಗ್‌ಗೆ ಪ್ರೋತ್ಸಾಹ ನೀಡುವಂತೆ ಮಾಡಿದೆ.

ಸಾಂಕ್ರಾಮಿಕ ವೈರಸ್ ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ ಎಂಬ ಜಾಗೃತಿಯನ್ನು ಎಲ್ಲರಲ್ಲೂ ಮೂಡಿಸುತ್ತಿದೆ. ವೈಯಕ್ತಿಕ ಶುಚಿತ್ವದ ಬಗ್ಗೆ ಹೆಚ್ಚು ಗಮನ ಹರಿಸುವಂತೆ ಮಾಡಿದೆ. ಇಂದಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ತಂತ್ರಜ್ಞಾನಕ್ಕೆ ತಮ್ಮನ್ನು ತೆರೆದುಕೊಳ್ಳುವಂತೆ ಮಾಡುತ್ತಿದೆ. ಎಲ್ಲಾ ಶಿಕ್ಷಕರು ವೆಬೆಕ್ಸ್, ಗೂಗಲ್ ಮೀಟ್ ಮತ್ತಿತರ ಆ್ಯಪ್ ಬಳಸಿ ಸಭೆಗಳನ್ನು ನಡೆಸುತ್ತಿದ್ದಾರೆ. ಹಾಗೂ ತರಬೇತಿಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಇಲಾಖೆ ಮತ್ತು ಶಿಕ್ಷಕರು ಈ ಕಂಟೆಂಟ್ ಅನ್ನು ಸಿದ್ಧಪಡಿಸಲು ಮತ್ತು ಬಳಸಲು ಯೋಜನೆ ರೂಪಿಸುವಂತೆ ಮಾಡಿದೆ.

ಕೊರೊನಾ ಸಂದರ್ಭದ ಶಾಲಾ ರಜೆಯಿಂದ ಪೋಷಕರಿಗೆ ತಮ್ಮ ಮಕ್ಕಳ ಶಿಕ್ಷಣದ ಮಹತ್ವ ಮತ್ತು ಶಾಲೆಗಳ ಮಹತ್ವದ ಬಗ್ಗೆ ಪೋಷಕರಿಗೆ ಅರಿವು ಉಂಟಾಗುವಂತೆ ಮಾಡಿದೆ. ವಿದ್ಯಾಗಮದ ಮೂಲಕ ಸರ್ಕಾರಿ ಶಾಲೆಗಳ ಬಗ್ಗೆ ಅಭಿಮಾನ ಭರವಸೆ ಮೂಡುವಂತೆ ಮಾಡಿದೆ.

ಒಟ್ಟಾರೆಯಾಗಿ ಕೊರೊನ ವೈರಸ್ ಮನುಕುಲಕ್ಕೆ ದೊಡ್ಡ ಪಾಠವನ್ನು ಕಲಿಸುತ್ತಿದೆ.

**ಲೋಲಕುಮಾರ**
ಸಿ.ಆರ್.ಪಿ.ಕೆಳದಿ, ಸಾಗರ ತಾ॥

# ವಿದ್ಯಾಗಮ ಶಿಕ್ಷಕ ಮಕ್ಕಳ ಸಮಾಗಮ........

ವಿದ್ಯಾಗಮ ಕಾರ್ಯಕ್ರಮವು ಕೋವಿಡ್ ಸಾಂಕ್ರಾಮಿಕ ಹಿನ್ನೆಲೆಯಲ್ಲಿ ತೆಗೆದುಕೊಂಡ ಶಾಲಾ ಶಿಕ್ಷಣದ ಕಲಿಕಾ ಪ್ರಕ್ರಿಯೆಗೆ  ಕಲಿಕಾ ಕೇಂದ್ರಗಳ ವ್ಯವಸ್ಥೆಯಾಗಿದೆ. ನಮ್ಮ ಇಲಾಖೆ ಜಾರಿಗೆ ತಂದಿರುವ ಒಂದು ವಿನೂತನ ನಿರಂತರ ಕಲಿಕಾ ಕಾರ್ಯಕ್ರಮವಾಗಿದೆ. ಮಾರ್ಚ್ 23, 2020ರಿಂದಲೂ ಶಾಲೆಗಳ ಮುಚ್ಚಲ್ಪಟ್ಟು ಶಿಕ್ಷಕರ ಮಕ್ಕಳ ಸಂಪರ್ಕ ಕಡಿತಗೊಂಡಿದ್ದು ವಿದ್ಯಾಗಮ ಮಕ್ಕಳು ಮತ್ತು ಶಿಕ್ಷಕರಿಗೆ ಸೇತುವೆಯಾಗಿದೆ.

ಸಮೂಹ ಸಂಪನ್ಮೂಲ ಕೇಂದ್ರ ಬಿ.ಆರ್.ಪಿ.ವ್ಯಾಪ್ತಿಯಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳು, ಹಿರಿಯ ಪ್ರಾಥಮಿಕ ಶಾಲೆಗಳು ಒಂದು ಸರ್ಕಾರಿ ಪ್ರೌಢಶಾಲೆ ಹಾಗೂ ಎರಡು ಅನುದಾನಿತ ಪ್ರೌಢಶಾಲೆಗಳಿಂದ ಮಕ್ಕಳು ಈ ಕಾರ್ಯಕ್ರಮಕ್ಕೆ ಒಳಪಟ್ಟಿದ್ದಾರೆ. ಶಿಕ್ಷಕರು ಮಾರ್ಗದರ್ಶನ ನೀಡುತ್ತಿದ್ದಾರೆ . ಕೇಂದ್ರ ವ್ಯಾಪ್ತಿಯ ಸಾಕಷ್ಟು ಶಾಲೆಗಳು ವಾಟ್ಸಪ್ ಗ್ರೂಪ್ ಗಳನ್ನು ರಚಿಸಿಕೊಂಡು ಮಕ್ಕಳಿಗೆ ಅಥವಾ ಕಲಿಕೆಗೆ ಅವಕಾಶ ನೀಡಿ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದಾರೆ. ಮಕ್ಕಳು ಆಸಕ್ತಿಯಿಂದ ಲವಲವಿಕೆಯಿಂದ ಭಾಗವಹಿಸುತ್ತಿರುವುದು ಸಂತಸದ ವಿಚಾರವಾಗಿದೆ.

ವಿದ್ಯಾರ್ಥಿಗಳು ತನ್ನ ಸ್ವ ಕಲಿಕೆಯನ್ನು ಪುಟ್ಟ ವಿಡಿಯೋಗಳ ಮೂಲಕ ಶಿಕ್ಷಕರಿಗೆ ಕಳಿಸುತ್ತಿರುವುದು ಸಂತಸ ಸಂಗತಿ. ಈ ಅತ್ಯುತ್ತಮ ಕಾರ್ಯಕ್ರಮ ಮಕ್ಕಳ ಕಲಿಕೆಗೆ ಪ್ರೇರಣೆಯಾಗಿದೆ. ಪೋಷಕರು ಮಕ್ಕಳ ಕಲಿಕೆ ಬಗ್ಗೆ ಆಸಕ್ತಿ ವಹಿಸುತ್ತಿದ್ದಾರೆ. ತಮ್ಮ ಮಕ್ಕಳ ಕ್ರಿಯಾಶೀಲ ವಿಡಿಯೋಗಳನ್ನು ನೋಡಿ ನಿಜ ಸಂತೋಷ ಅನುಭವಿಸುತ್ತಿದ್ದಾರೆ. ಸರ್ಕಾರಿ ಶಾಲಾ ಪೋಷಕರ ಆತಂಕವನ್ನು ದೂರ ಮಾಡಿದ 'ಮುನ್ನುಡಿ ಕಾರ್ಯಕ್ರಮ' ಎಂದರೆ ಅತಿಶಯೋಕ್ತಿಯಾಗಲಾರದು. ಮಕ್ಕಳ ಸ್ವ ಕಲಿಕೆಗೆ ಪ್ರೋತ್ಸಾಹ ನೀಡುವುದರ ಜೊತೆಗೆ ಮಕ್ಕಳಲ್ಲಿ ಶಾಶ್ವತವಾಗಿ ಉಳಿಯುವಂತಹ ಕಲಿಕಾ ಕಾರ್ಯಕ್ರಮವಾಗಿದೆ. ಮಕ್ಕಳು ಮತ್ತು ಶಿಕ್ಷಕರ ನಡುವಿನ ಕಲಿಕಾ ಸೇತುವೆ ವಿದ್ಯಾಗಮ. ಮಕ್ಕಳ ಕ್ರಿಯಾಶೀಲ ರಚನಾತ್ಮಕ ವಿಡಿಯೋಗಳು ಪ್ರತಿಕ್ರಿಯೆಗಳು ಶಿಕ್ಷಕರಿಗೂ ಕಲಿಸುವ ಹಸಿವನ್ನು ಹೆಚ್ಚಿಸಿದೆ.



**ನಾಗರತ್ನ**
ಸಿ.ಆರ್.ಪಿ.,
ಬಿಆರ್‌ಪಿ ಕ್ಲಸ್ಟರ್, ಭದ್ರಾವತಿ

# ಪದಬಂಧ

| | | | | | | | | |
|---|---|---|---|---|---|---|---|---|
| 1 | | | 2 | ■ | 3 | | 4 | |
| | ■ | ■ | 5 | | | ■ | | ■ |
| 6 | | 7 | ■ | ■ | 8 | | | ■ |
| ■ | ■ | | ■ | 9 | | ■ | 10 | 11 |
| 12 | | | | | ■ | 13 | ■ | |
| | ■ | | ■ | ■ | 14 | | 15 | |
| 16 | | | ■ | 17 | | ■ | | ■ |

**ಎಡದಿಂದ ಬಲ**

1) ಜಗುಲಿಯ ಪಾಠ.. ಕೊರೋನ ಪ್ರಯುಕ್ತ ಈ ಯೋಜನೆ.. (4)
3) ಮಾಲ್ಗುಡಿಯ ಉಗಿಬಂಡಿ ನೆನಪಿಸುವ ಶಿವಮೊಗ್ಗ ಜಿಲ್ಲೆಯ ಗ್ರಾಮ.. (4)
5) ಈ ವೃಕ್ಷಮಾತೆ ಕನ್ನಡತಿ.. (3)
6) ವ್ಯಾಪಾರಿ.. (3)
8) ತಲ್ಲೀನ..(3)
9) "ಧರ್ಮ" ಬೌದ್ದರ ಭಾಷೆಯಲ್ಲಿ (2)
10) ದ್ರವ್ಯ.. (2)
12) ವನಸುಮ ಪದ್ಯದ ಮರ, ಪ್ರಾಣಿ.. ಪಕ್ಷಿ.. ನರರಿಗೆ.. ಈ ರೀತಿ ಆಶ್ರಯ ನೀಡುತ್ತದೆ..(5)
14) ಗಮನಿಸಲು ಯೋಗ್ಯವಾದುದು (4)
16) ನವನೀತ ಚೋರನ ಬರ್ತ್‌ಟೌನ್ (3)
17) ಶತ್ರು ಮತ್ತು ತಿಳಿ ಎಂದು ನಾನಾರ್ಥ ಕೊಡುವ ಪದ.. (2)

**ಮೇಲಿನಿಂದ ಕೆಳಕ್ಕೆ..**

1) ಕ್ರಾಂತಿ.. (3)
2) ಬುದ್ದಿ.. (2)
3) ಸಹೋದರಿ ನಂತರ ಸಹೋದರ ಬಂದಿದ್ದಾರೆ.. (4)
4) ಆರ್ಗ್ಯಾನಿಕ್ ಕನ್ನಡದಲ್ಲಿ.. (4)
7) ತಾವರೆ ಕೈಯಲ್ಲಿ ಹಿಡಿದವ... (5)
9) ಕರುಣೆ.. (2)
11) ಹೊಗಳಲು ಯೋಗ್ಯ... (3)
12) ಅಲ್ಪನಿಗೂ...ಪೂರ್ಣನಿಗೂ ಬೇಕು ಒಂದು ಬ್ರೇಕ್.... (3)
13) ಬೆಸವಲ್ಲ... (2)
14) ಫೆದರ್ಸ್ ಇನ್ ಕನ್ನಡ... (2)
15) ಸ್ವರ್ಗ... (2)

**ಗಣೇಶ್ ಪ್ರಸಾದ್ ಬಿ.ವಿ.**
ಸ.ಹಿ.ಪ್ರಾ.ಶಾಲೆ
ಕಮರೂರು, ಸೊರಬ (ತಾ)

# ಮಡಿಲು

"ಮಡಿಲು" ಪ್ರತಿಯೊಬ್ಬರ ನೆಮ್ಮದಿಯ ತಾಣ ಹೆಸರಿಗೆ ಅನ್ವರ್ಥವಾಗಿ ಸಮಾಜಮುಖಿ ಯೋಚನೆ ಯೋಜನೆಗಳಿಗಾಗಿ ರೂಪುಗೊಂಡ ಈ ಕಿರು ಸಂಸ್ಥೆ ಮಾನ್ಯ ಉಪನಿರ್ದೇಶಕರು (ಅಭಿವೃದ್ಧಿ) ಆಗಿರುವ ಶ್ರೀಮತಿ ಸುಮಂಗಳಾ ಪಿ. ಕುಚಿನಾಡ ಅವರ ಕಲ್ಪನೆಯ ಕನಸಿನ ಕೂಸು. ಮಾರ್ಚ್ 8 ರಂದು ಡಯಟ್‌ನಲ್ಲಿ ಆಯೋಜಿಸಿ ಅತ್ಯಂತ ಯಶಸ್ವಿಯಾಗಿ ನ ಭೂತೋ ನ ಭವಿಷ್ಯತಿ ಎಂಬಂತಹ ಸಾರ್ಥಕ ಕ್ಷಣಗಳನ್ನು ಕಂಡ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಕಂಡುಕೊಂಡಂತಹ ಒಳನೋಟಗಳು ಈ ಮಹಿಳಾ ಕ್ಲಬ್‌ಗೆ ಪ್ರೇರಣೆ.

ಮಾನ್ಯ ಉಪನಿರ್ದೇಶಕರ ಆಲೋಚನೆ ಆಶಯಗಳಂತೆ ಡಯಟ್‌ನಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ , ಈ ಹಿಂದೆ ಕಾರ್ಯ ನಿರ್ವಹಿಸಿರುವ ಮಹಿಳಾ ನೌಕರರನ್ನು ಒಳಗೊಂಡಂತೆ ಒಂದು ಮಹಿಳಾ ಕ್ಲಬ್ ರಚಿಸಲು ಕಾರ್ಯತಂತ್ರ ರೂಪಿಸಿ "All for one One for all" ತತ್ವದ ಅಡಿಯಲ್ಲಿ ಸಂಘ ಕಾರ್ಯನಿರ್ವಹಿಸಲು ಸರ್ವರ ಅಭಿಪ್ರಾಯ ಪಡೆಯಲಾಯಿತು. ಮುಖ್ಯವಾದ ಆಶಯ ಕ್ಲಬ್‌ನ ಸದಸ್ಯರಿಗೆ ಮಾನಸಿಕ ಸುರಕ್ಷತಾ ಭಾವನೆ ಮೂಡಿಸುವುದು. ವೈಯಕ್ತಿಕವಾಗಿ ಎಲ್ಲರಿಗೂ ತಮ್ಮೊಂದಿಗೆ ಒಡನಾಡಿಯಾದ ಮಾತೃಭಾವ ಹೊಂದಿರುವ, ಆತ್ಮಸ್ಥೈರ್ಯ ನೀಡುವ ಸಾಂಸ್ಥಿಕ ಬೆಂಬಲ ನೀಡುವುದು, ತನ್ಮೂಲಕ ಸಮಾಜದಲ್ಲಿ ನೊಂದವರಿಗೆ ಸಾಂತ್ವನದ ಮಡಿಲಾಗುವ ಉದ್ದೇಶ ಹೊಂದಿರುತ್ತದೆ.



ಪ್ರಾರಂಭಿಕವಾಗಿ ಸದಸ್ಯತ್ವದ ಅರ್ಜಿ ನಮೂನೆಯನ್ನು ಪ್ರತಿ ಸದಸ್ಯರು ಭರ್ತಿ ಮಾಡುವ ಮೂಲಕ ಔಪಚಾರಿಕವಾಗಿ ಸೇರ್ಪಡೆಗೊಳ್ಳುವ ಪ್ರಕ್ರಿಯೆಗೆ ಚಾಲನೆ ನೀಡಲಾಯಿತು. ಅರ್ಜಿ ಭರ್ತಿ ಮಾಡುವಾಗ, ಪ್ರಪ್ರಥಮ ಸಂಘಟನೆಯಲ್ಲಿ ಪಾಲ್ಗೊಳ್ಳುವ ಪುಳಕ ಉಂಟು ಮಾಡಿದ್ದು ಸ್ಮರಣೀಯ ನಂತರ ಮಡಿಲಿನ ಮಾನಿನಿಯರನ್ನು ನಿರಂತರ ನೇರ ಸಂಪರ್ಕದಲ್ಲಿರಿಸಲು "WhatsApp group" ರಚನೆ ಮಾಡಿ ಪರಸ್ಪರ ಸಂವಹನ ಸಾಧ್ಯವಾಗಿಸಲಾಯಿತು.

"Well begun is half done" ಎಂಬಂತೆ "ಮಡಿಲು" ಕ್ಲಬ್ ಕಾರ್ಯಾರಂಭಕ್ಕೆ ವಿದ್ಯುಕ್ತ ಆರಂಭಬೇಕಿದೆ ಎಂಬ ಕನಸನ್ನು ನನಸಾಗಿಸಿದ್ದು ಮಾನ್ಯ ಉಪನಿನಿರ್ದೇರ್ಶಕರ (ಅಭಿವೃದ್ಧಿ) ರವರ ವಿಶೇಷ, ವಿನೂತನ ಯೋಚನೆಯ ಮೂಲಕ. ಶ್ರಾವಣ ಮಾಸದ ಗರಿಮೆ ಬಾಂಧವ್ಯದ ಪ್ರತೀಕ, ಮಾನವೀಯ ಸಂಬಂಧದ ದ್ಯೋತಕ ರಕ್ಷಾಬಂಧನದ ಅರ್ಥಪೂರ್ಣ ಆಚರಣೆಯಿಂದ ಆರಂಭಿಸಲು ಸರ್ವ ಸದಸ್ಯರ ಉತ್ಸಾಹದ ಒಪ್ಪಿಗೆಯೊಂದಿಗೆ ಮುಂದಡಿ ಇಡಲಾಯಿತು.

ದಿನಾಂಕ 03–08–2020 ರಂದು ಎಲ್ಲರಲ್ಲೂ ಗರಿಗೆದರಿದ ಸಂಭ್ರಮ. ತಮ್ಮ ತಮ್ಮ ಜವಾಬ್ದಾರಿಗಳನ್ನು ಎಲ್ಲರೂ ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದ ರೀತಿಯೇ ಮುಂದಿನ ಸತ್ಪರಿಣಾಮಕ್ಕೆ ನಾಂದಿಯಾಗಿತ್ತು. ರಕ್ಷಾ ಬಂಧನ ಕಾರ್ಯಕ್ರಮಕ್ಕೆ ದೈವೀ ಶ್ರೀ ರಕ್ಷೆ ಇರಲಿ ಎಂದು ಶ್ರೀಮತಿ ಅಕ್ಕಮಹಾದೇವಿ ಇವರು ಪ್ರಾರ್ಥನೆಯನ್ನು ಅತ್ಯಂತ ಸುಶ್ರಾವ್ಯವಾಗಿ ನೆರವೇರಿಸಿಕೊಟ್ಟರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಎಲ್ಲಾ ಬಂಧು ಭಗನಿಯರನ್ನು ಆದರದಿಂದ ಸ್ವಾಗತಿಸಿದ್ದು ಶ್ರೀಮತಿ ಜ್ಯೋತಿ ಕೆ.ವಿ. "ಮಡಿಲು" ಮಹಿಳಾ ಕ್ಲಬ್ ರೂಪುಗೊಳ್ಳುವ ಪ್ರೇರಿತ ಅಂಶಗಳು, ನಡೆದುಕೊಂಡು ಬಂದ ಬಾಲ ಹೆಜ್ಜೆಗುರುತುಗಳು, ಸಾಧಿತಗೊಳ್ಳಬೇಕಾಗಿರುವ ಕನಸುಗಳು, ಸಂಘದ ಅಧ್ಯಕ್ಷರ ಆಶಯಗಳು, ಯಾಂತ್ರಿಕ ಜೀವನ ಶೈಲಿಯಿಂದ ನಮ್ಮನ್ನು ವಿಮುಖಗೊಳಿಸಿ ಲವಲವಿಕೆ ಜೀವನ ಪ್ರೇಮವನ್ನು ಮೂಡಿಸಲು ಹಮ್ಮಿಕೊಳ್ಳಲಿರುವ ಕಾರ್ಯಚಟುವಟಿಕೆಗಳ ಬಗ್ಗೆ ಶ್ರೀಮತಿ ಜಯಮ್ಮ ಎಲ್. ಇವರು ಪ್ರಾಸ್ತಾವಿಕವಾಗಿ ವಿಷಯಗಳನ್ನು ಪ್ರಸ್ತುತ ಪಡಿಸಿದರು. ನಂತರ ಸಾಂಕೇತಿಕವಾಗಿ ಮಾನ್ಯ ಉಪನಿರ್ದೇಶಕರು (ಅಭಿವೃದ್ಧಿ) ಆದ ಶ್ರೀಮತಿ ಸುಮಂಗಳಾ ಪಿ. ಕುಚಿನಾಡರವರು ದೀಪ ಬೆಳಗುವುದರ ಮೂಲಕ, ಹಾಗೂ ಹಿರಿಯ ಉಪನ್ಯಾಸಕರಾದ ಶ್ರೀ ಫಣೀಶ್‌ರವರಿಗೆ ರಾಖಿ ಕಟ್ಟುವುದರ ಮೂಲಕ ಉದ್ಘಾಟಿಸಿದರು. ಎಲ್ಲಾ ಸದಸ್ಯರು ತಮಗೆ ಯಾದೃಚ್ಛಿಕ ಆಯ್ಕೆ ಮೂಲಕ ಸಹೋದರರಿಗೆ ರಾಖಿಯನ್ನು ಕಟ್ಟಿದರು. ಇದೊಂದು ವಿಶೇಷ ಅನುಭೂತಿಯಾಗಿ ಮೌಲಿಕ ಕ್ಷಣವಾಗಿತ್ತು.

ಉದ್ಘಾಟಕರೂ, ಕಾರ್ಯಕ್ರಮದ ರೂವಾರಿಗಳೂ ಆದ ಮಾನ್ಯ ಉಪನಿರ್ದೇಶಕರಾದ ಶ್ರೀಮತಿ ಸುಮಂಗಳಾ ಪಿ. ಕುಚಿನಾಡ ರವರು "ಮಡಿಲು" ಮಹಿಳಾ ಕ್ಲಬ್‌ನ ಧ್ಯೇಯೋದ್ದೇಶಗಳು, ಸಮಾಜಮುಖಿಯಾಗಿ ಸಾಗಲು ಕಾರಣೀಭೂತವಾದ ಅಂಶಗಳು, ರಕ್ಷಾಬಂಧನದ ದಿನವೇ ಕಾರ್ಯಾರಂಭ ಮಾಡಲು ಪ್ರೇರೇಪಣೆ ನೀಡಿದ ಮಾನವೀಯ ಬಂಧದ ಸೆಲೆಗಳ ಬಗ್ಗೆ ಸಾಕಷ್ಟು ಚೈತನ್ಯಯುಕ್ತ ಚಿಂತನೆಗಳನ್ನು ಎಲ್ಲರೊಂದಿಗೆ ಹಂಚಿಕೊಂಡರು. ಈ ಚಟುವಟಿಕೆಗಳು ಎಲ್ಲಿಯೂ ಸ್ಥಗಿತಗೊಳ್ಳದೇ ನಿರಂತರವಾಗಿ ಸಾಗಲು ಸದಸ್ಯರ ಜವಾಬ್ದಾರಿಗಳನ್ನು ನೆನಪಿಸಿದರು. ಕಾರ್ಯಕ್ರಮಕ್ಕೆ ಸಹಕರಿಸಿದ ಸರ್ವರನ್ನು ಸ್ಮರಿಸಿದರು.

"ಮಡಿಲು" ಮಹಿಳಾ ಕ್ಲಬ್‌ನ ಸದಸ್ಯರಾದ ಶ್ರೀಮತಿ ಗಾಯಿತ್ರಿ ಎಸ್.ಇ. ರವರು ತಾವು ಸೇರ್ಪಡೆಗೊಂಡ ಬಗ್ಗೆ, ಮುಂದಿನ ಕಾರ್ಯ ಚಟುವಟಿಕೆಗಳ ಬಗ್ಗೆ ಯಾವುದೇ ಸನ್ನಿವೇಶದಲ್ಲಿ ತಾವು ಸಹಕಾರ ನೀಡಲು ಸಿದ್ದರಿರುವುದಾಗಿ ತಮ್ಮ ಅನುಭವಗಳನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಉಪಪ್ರಾಂಶುಪಾಲರಾದ ಶ್ರೀ ವೀರಭದ್ರಪ್ಪ ಇವರು ಇಂತಹ ವಿಶಿಷ್ಟ ಕಾರ್ಯಕ್ರಮಗಳಿಂದ ಸಂಸ್ಥೆಯಲ್ಲಿ ಮಾನವೀಯ ಸಂಬಂಧಗಳು ವೃದ್ಧಿಸಲು ಅನುವು ಆಗುತ್ತದೆ ಎಂದು ತಿಳಿಸಿದರು. ಹಿರಿಯ ಉಪನ್ಯಾಸಕರಾದ ಶ್ರೀ ಫಣೀಶ್, ಶ್ರೀ ಹರಿಪ್ರಸಾದ್ ಹಾಗೂ ಶ್ರೀ ಶೇರ್ ಆಲಿ ಇವರು ಕಾರ್ಯಕ್ರಮದ ಸದಾಶಯಗಳು ಸಂಪನ್ನಗೊಂಡ ರೀತಿಯನ್ನು ಮನಸಾರೆ ಶ್ಲಾಘಿಸಿದರು. ಮಡಿಲಿನ ಎಲ್ಲಾ ಸದಸ್ಯರಿಗೂ ನೆನಪಿನ ಕಾಣಿಕೆಯನ್ನು ನೀಡಿ ಹರಸಿದರು. ಉಪಸ್ಥಿತಿರಿದ್ದ ಸರ್ವರನ್ನು ಉಪನ್ಯಾಸಕರಾದ ಶ್ರೀಮತಿ ರೇಣುಕಾ ಎಸ್ ಇವರು ವಂದಿಸಿದರು. ಕಾರ್ಯಕ್ರಮ ವಿರೂಪಣೆಯನ್ನು ಶ್ರೀಮತಿ ವಿನೋದಕುಮಾರಿ ಹೆಚ್.ವಿ. ಇವರು ಅಚ್ಚುಕಟ್ಟಾಗಿ ನಿರ್ವಹಿಸಿದರು.


**ಶ್ರೀಮತಿ ಜ್ಯೋತಿಕುಮಾರಿ ಕೆ.ವಿ.**

ಉಪನ್ಯಾಸಕರು, ಡಯಟ್, ಶಿವಮೊಗ್ಗ

# ಜೀವನ ಕೌಶಲಗಳು ಆನ್‌ಲೈನ್ ತರಬೇತಿ ಪ್ರೌಢಶಾಲಾ ಶಿಕ್ಷಕರಿಗೆ.

ವಿಶ್ವದಾದ್ಯಂತ ಕೋವಿಡ್-19 ಕೊರೊನಾ ವೈರಸ್‌ನ ರುದ್ರ ನರ್ತನದ ನಿಮಿತ್ತ ಶಾಲೆಗಳನ್ನು ತೆರೆಯದಂತಾಗಿದೆ. ಈ ಸೋಂಕಿನ ಹಿನ್ನಲೆಯಲ್ಲಿ 2020-21 ನೇ ಸಾಲಿನ ಶಿಕ್ಷಕರ ತರಬೇತಿಗಳನ್ನು ಮುಖಾಮುಖಿ ನಡೆಸುವುದು ಕಷ್ಟಕರವಾಗಿರುವುದರಿಂದ ಅದಕ್ಕೆ ಪರ್ಯಾಯವಾಗಿ ಕಂಡುಕೊಂಡ ದಾರಿಯೇ ಆನ್‌ಲೈನ್ (Online) ತರಬೇತಿಗಳು.

ಶಿಕ್ಷಣ ಇಲಾಖೆಯ ಸೂಚನೆ / ಆದೇಶದಂತೆ ಭದ್ರಾವತಿ ತಾಲ್ಲೂಕಿನ ಎಲ್ಲ ಸರ್ಕಾರಿ ಮತ್ತು ಅನುದಾನಿತ ಪೌಢಶಾಲಾ ಶಿಕ್ಷಕರಿಗೆ ಭದ್ರಾವತಿ BEO/BRC ಹೋಸ್ಟ್‌ನಲ್ಲಿ 'ಜೀವನ ಕೌಶಲಗಳು' ವಿಷಯ ಕುರಿತ ಆನ್‌ಲೈನ್ (Online) ತರಬೇತಿಯನ್ನು ಪೌಢಶಾಲಾ ಸಂಪನ್ಮೂಲ ಶಿಕ್ಷಕರನ್ನೊಳಗೊಂಡ ವೇಳಾಪಟ್ಟಿಯೊಂದಿಗೆ ದಿನಾಂಕ 31.07.2020 ರಿಂದ 13.08.2020 ರವರೆಗೆ ಆಯೋಜಿಸಲಾಯಿತು ವೇಳಾಪಟ್ಟಿಯಂತೆ Google meet app ಮೂಲಕ ಲಿಂಕ್ ಕಳುಹಿಸಿ ಪ್ರೌಢಶಾಲಾ ಶಿಕ್ಷಕರು ತಮ್ಮ ಮೊಬೈಲ್‌ನಲ್ಲಿ ಜಾಯಿನ್ ಆಗಿ ತರಬೇತಿ ಪಡೆಯಲು ಸೂಚಿಸಲಾಯಿತ್ತು. ಈ ದಿನಾಂಕಗಳಂದು ಪೂರ್ವಾಹ್ನ 11-00 ರಿಂದ 12-30 ರವರೆಗೆ ಸರ್ಕಾರಿ ಪೌಢಶಾಲಾ ಶಿಕ್ಷಕರಿಗೆ ಹಾಗೂ ಅದೇ ದಿನ ಅಪರಾಹ್ನ 3.00 ರಿಂದ 4.30 ರವರೆಗೆ ಅನುದಾನಿತ ಪ್ರೌಢ ಶಾಲಾ ಶಿಕ್ಷಕರಿಗೆ ವಿಷಯಾಂಶಗಳು ಚರ್ಚೆಯಾಗುವಂತೆ ಯೋಜಿಸಲಾಯಿತು.




ದಿನಾಂಕ:31-07-2020 ಶುಕ್ರವಾರದಂದು ಭದ್ರಾವತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಟಿ.ಎನ್. ಸೋಮಶೇಖರಯ್ಯರವರು. ಭದ್ರಾವತಿ ಬಿ.ಆರ್.ಸಿ. ಕಚೇರಿಗೆ ಪೂರ್ವಾಹ್ನ 11-00 ಗಂಟೆಗೆ ಆಗಮಿಸಿ ಆನ್‌ಲೈನ್ (Online) ನಲ್ಲಿ 'ಜೀವನ ಕೌಶಲ್ಯಗಳು' ವಿಷಯ ಕುರಿತು ವಿದ್ಯಾರ್ಥಿಗಳಿಗೆ ನಮ್ಮ ಶಿಕ್ಷಣವು ಬದುಕುವ ರೀತಿಯನ್ನು ಕಲಿಸಬೇಕು. ಕೇವಲ ಜ್ಞಾನಾರ್ಜನೆಗಷ್ಟೇ ಸೀಮಿತವಾಗಿರದೆ ಮುಂದಿನ ಬದುಕಿನ ಅವಶ್ಯಕತೆಗಳ ಬಗ್ಗೆ ಜ್ಞಾನವನ್ನು ಕೊಡುವಂತಾಗಬೇಕು. ಶಾಲಾ ಹಂತದಲ್ಲಿಯೇ ಮಕ್ಕಳಲ್ಲಿ ಮೌಲ್ಯಗಳನ್ನು ಬೆಳೆಸುವುದು ಅತ್ಯಗತ್ಯವಾಗಿದೆ. ಎಂಬ ಮಾಹಿತಿಗಳನ್ನು ನೀಡಿ ಈ ತರಬೇತಿಯು ಯಶಸ್ವಿಯಾಗಿ ನಡೆಯಲೆಂದು ಶುಭ ಹಾರೈಸಿ ' ಜೀವನ ಕೌಶಲಗಳು' ವಿಷಯ ಕುರಿತು ಆನ್‌ಲೈನ್ (Online) ತರಬೇತಿಗೆ ಚಾಲನೆ ನೀಡಿದರು.

ಈ ದಿನದ ಪ್ರಾರಂಭದ ಅವಧಿಯನ್ನು ಶ್ರೀ ಗಣೇಶ್ ವೈ. ಸಮನ್ವಯಾಧಿಕಾರಿಗಳು, ಬಿ.ಆರ್.ಸಿ. ಭದ್ರಾವತಿ




ಇವರು ವಿದ್ಯಾಗಮ – ನಿರಂತರ ಕಲಿಕಾ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿದರು. ಕೋವಿಡ್–19 ಕೊರೊನಾ ಸೋಂಕಿನಿಂದಾಗಿ ಶಾಲೆಗಳನ್ನು ತೆರೆಯದಂತಾಗಿದ್ದು ಮಕ್ಕಳಿಗೆ – ಕಲಿಕೆಗೆ ತೊಂದರೆಯಾಗುವುದನ್ನು ತಪ್ಪಿಸಲು ಶೈಕ್ಷಣಿಕ ಭವಿಷ್ಯದ ದೃಷ್ಟಿಯಿಂದ ಅವರನ್ನು ಕಲಿಕೆಗೆ ಹಚ್ಚುವುದು ಅತೀ ಮುಖ್ಯವಾಗಿದ್ದು, ಅವರಿಗೆ ಸ್ವಯಂ ಕಲಿಕೆಗೆ ಪ್ರೇರಣೆಯ ಕಲಿಕಾ ಮಾರ್ಗದರ್ಶನ ಹೇಗೆ ನೀಡಬೇಕೆಂದು ವಿಷಯವಾರು ಉದಾಹರಣೆ ನೀಡುತ್ತಾ ಅರ್ಥೈಸಿದರು. ಕಾಲ್ಪನಿಕ ಕಲಿಕಾ ಕೋಣೆಗಳ ಬಗ್ಗೆ ವಿವರಿಸಿದರು.

ತರಗತಿ ವಿಧ 1, ತರಗತಿ ವಿಧ 2, ತರಗತಿ ವಿಧ 3 ಇವುಗಳನ್ನು ಗುರುತಿಸಿಕೊಳ್ಳುವಿಕೆ ಹೇಗೆ ತಂಡಗಳ ಕಾರ್ಯ ಹಂಚಿಕೆ, ಕಲಿಕಾ ಮಾರ್ಗದರ್ಶನ ಹೇಗೆಂಬ ಬಗ್ಗೆ ವಿವರಿಸಿದರು. ಭೌಗೋಳಿಕ / ನೆರೆಹೊರೆ ತಂಡಗಳಿಗೆ ಭೇಟಿ ನೀಡುವಾಗ ಸ್ಥಳೀಯ ಪೋಷಕರ ಜವಾಬ್ದಾರಿಯೊಂದಿಗೆ, SDMC ರವರ ಸಹಕಾರದೊಂದಿಗೆ ಸ್ವಯಂ ಸೇವಕರು ಲಭ್ಯವಿದ್ದಲ್ಲಿ ಅವರ ಮೇಲ್ವಿಚಾರಣೆಯೊಂದಿಗೆ ಸರದಿಯ ಪ್ರಕಾರ ಕಲಿಕಾ ಮಾರ್ಗದರ್ಶನ ಮಾಡುವ ಬಗ್ಗೆ ಶಿಕ್ಷಕರೊಂದಿಗೆ ಸಾಧಕ–ಬಾಧಕಗಳ ಕುರಿತು ಚರ್ಚಿಸಿ ಅಂತಿಮವಾಗಿ ಸಾಧ್ಯತೆಗಳನ್ನು ಕಂಡುಕೊಂಡು ಯಶಸ್ವಿ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲು ತಿಳಿಸಿದರು.

2ನೇ ದಿನದ ಆನ್‌ಲೈನ್ (Online) ತರಬೇತಿಯು ದಿನಾಂಕ 03–08–2020ರಂದು ಶ್ರೀ ಇಮ್ತಿಯಾಜ್ ಸಹ ಶಿಕ್ಷಕರು, (K P S) ಅಂತರಗಂಗೆ, ಭದ್ರಾವತಿ ತಾ. ಇವರು ಸೇತುಬಂಧ, ಶಾಲಾ ಶೈಕ್ಷಣಿಕ ಯೋಜನೆ (SAP) ಪರಿಚಯ, ಅದರ ಮಹತ್ವ ಹಾಗೂ ಉಪಯೋಗಗಳನ್ನು ಕುರಿತು ಮಾಹಿತಿ ನೀಡಿದರು. ಸೇತುಬಂಧದ ಹಂತಗಳು, ಸೇತುಬಂಧ ಆಧಾರಿತವಾಗಿ ದಾಖಲೀಕರಣದ ಮಾಹಿತಿಗಳ ಕ್ರೋಢಿಕರಣವು ಶಾಲಾ ಶೈಕ್ಷಣಿಕ ಯೋಜನೆಯಲ್ಲಿರುವುದನ್ನು ವಿವರಿಸಿದರು. ಈ ಶಾಲಾ ಶೈಕ್ಷಣಿಕ ಯೋಜನೆಯಲ್ಲಿ ಒಟ್ಟು 6 ನಮೂನೆಗಳಿರುತ್ತವೆ. ನಮೂನೆ –1 ಶಾಲಾ ಮಾಹಿತಿ, ನಮೂನೆ –2 ಶಿಕ್ಷಕರ ಮಾಹಿತಿಯಾಗಿರುತ್ತದೆ. ನಮೂನೆ – 3 ತರಗತಿವಾರು / ವಿಷಯವಾರು ಬುನಾದಿ ಸಾಮರ್ಥ್ಯಗಳನ್ನು ಹೊಂದಿರುವ ಮಾಹಿತಿಯಾಗಿರುತ್ತದೆ. ನಮೂನೆ –4 ನೈದಾನಿಕ / ಸಾಫಲ್ಯ ಪರೀಕ್ಷಾ ಗ್ರೇಡ್ ನಮೂದಿಸುವ ಮಾಹಿತಿಯಾಗಿರುತ್ತದೆ. ನಮೂನೆ –5 ಸಾಫಲ್ಯ ಪರೀಕ್ಷೆಯ ನಂತರವೂ ಬಿ. ಗ್ರೇಡ್‌ನಲ್ಲಿ ಉಳಿದಿರುವ ಮಕ್ಕಳ ಮಾಹಿತಿಯಾಗಿರುತ್ತದೆ. ನಮೂನೆ – 6 ಶಾಲಾ ವಿವಿಧ ಸಂಘಗಳ ನಿರ್ವಹಣೆಯು



ಮಾಹಿತಿಯಾಗಿರುತ್ತದೆ. ಹೀಗೆ ಈ ಅವಧಿಯಲ್ಲಿ ಪ್ರತೀ ಅಂಶವನ್ನು ಚರ್ಚಿಸಿ ಅರ್ಥೈಸಿದರು. ಇದರ ನಿರ್ವಹಣೆ ಹಾಗೂ ಉಪಯೋಗವನ್ನು ಶಿಕ್ಷಕರು ಅರ್ಥೈಸಿದರು.

3ನೇ ದಿನದ ಆನ್‌ಲೈನ್ (Online) ತರಬೇತಿಯು ದಿನಾಂಕ :– 04–08–2020ರಂದು ಶ್ರೀಮತಿ ಡಾ. ವೀಣಾಭಟ್, ಸ್ತ್ರೀರೋಗ ತಜ್ಞರು, ಸಾಹಿತಿಗಳು, ನಯನಾ ಆಸ್ಪತ್ರೆ, ಭದ್ರಾವತಿ ಇವರು ಮನುಷ್ಯನ ಮುಖ್ಯ ಹಂತವಾದ ಹದಿಹರೆಯದ / ತಾರುಣ್ಯದ ಹಂತವು 10 ರಿಂದ 19 ವಯೋಮಾನದವರಾಗಿದ್ದು. ಅವರು ಸೂಕ್ಷ್ಮ ಸ್ವಭಾವದವರಾಗಿದ್ದು ಅಂತಹ ಮಕ್ಕಳ ಸವಾಲುಗಳೇನು ? ಆ ಸವಾಲುಗಳಿಗೆ ಪರಿಹಾರಗಳೇನೆಂಬುದನ್ನು ಸೂಕ್ತ ನಿದರ್ಶನಗಳೊಂದಿಗೆ ಅರ್ಥೈಸಿದರು. ಅವರಲ್ಲಿ ನಕಾರಾತ್ಮಕ ಮನೋಧೋರಣೆಗಳನ್ನು ತೊಲಗಿಸಿ, ಸಕಾರಾತ್ಮಕ ಮನೋಭಾವನೆಗಳನ್ನು ಹೇಗೆ ಬೆಳೆಸಬಹುದೆಂಬುದನ್ನು ವಿವರಿಸಿದರು. ಈ ಅವಧಿಯಲ್ಲಿ ಹೆಣ್ಣುಮಕ್ಕಳ ಸಮಸ್ಯೆಗಳನ್ನು ಕುರಿತ ಪ್ರಶ್ನೆಗಳಿಗೆ ಸಮಂಜಸವಾದ ಪರಿಹಾರ ನೀಡಿರುತ್ತಾರೆ.

ಈ ಅವಧಿಯಲ್ಲಿ ಹದಿಹರೆಯದ ಸಾಧಕರನ್ನು ಅವರ ಜೀವನ ಚರಿತ್ರೆಯೊಂದಿಗೆ ವಿವರಿಸಿ ಅದೇ ವಯಸ್ಸಿನ ನಮ್ಮ ಮಕ್ಕಳಿಗೆ ಸಾಧನೆಯುತ್ತ ಚಿಂತಿಸುವಂತೆ ಪ್ರೇರೇಪಿಸಬೇಕು ಎಂಬುವುದನ್ನು ಉದಾಹರಣೆ ಸಹಿತ ವಿವರಿಸಿದರು.

4ನೇ ದಿನ ದಿನಾಂಕ 05–08–2020ರಂದು ಶ್ರೀ ಅಣ್ಣಪ್ಪ ಕನ್ನಡ ಭಾಷಾ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ ಅರಹತೊಳಲು, ಭದ್ರಾವತಿ ತಾಲ್ಲೂಕು ಇವರು, ಜೀವನ ಕೌಶಲಗಳು – ಇದರ ಮಹತ್ವವನ್ನು ಕುರಿತು ನಿದರ್ಶನಗಳೊಂದಿಗೆ ಚರ್ಚಿಸಿದರು. ಮಾನವ – ಸಮಾಜಜೀವಿ. ಈ ಸಮಾಜದಲ್ಲಿ ಒಂದು ನಾಗರೀಕತೆ ಇದೆ. ಹಾಗಾಗಿ ಪ್ರಾಣಿಗಳಿಗಿಂತ ಭಿನ್ನವಾಗಿರುವ ಮನುಷ್ಯನು ಕೆಲವೊಂದು ನಿಯಮಗಳಿಗೆ ಒಳಪಟ್ಟಿರಬೇಕು. ಇಲ್ಲವಾದಲ್ಲಿ ಮನುಷ್ಯ



ಸಮಾಜವು ಪ್ರಾಣಿಗಳಿಗಿಂತ ಕಡೆಯಾಗುವುದು. ಶಿಕ್ಷಣದಿಂದ ಮಕ್ಕಳಿಗೆ ಮಾಹಿತಿ ತುಂಬುವುದಲ್ಲ. ಬದಲಿಗೆ ಅವರಲ್ಲಿ ಮಾನವೀಯತೆಯನ್ನು ಬೆಳೆಸಬೇಕಾಗಿದೆ. ಅವರು ವಿದ್ಯಾವಂತರಾಗಿ – ಟೀಚರ್, ಡಾಕ್ಟರ್, ಇಂಜಿನಿಯರ್, ಜಿಲ್ಲಾಧಿಕಾರಿ, ಪೋಲಿಸ್, ಸೈನಿಕರು, ಮಾದರಿ ರೈತ ಏನಾದರೂ ಆಗಲಿ ಮೊದಲು ಮಾನವರಾಗಲಿ ಹಾಗಾಗಿ ಅವರನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವುದು ನಮ್ಮೆಲ್ಲರ ಕರ್ತವ್ಯ ಹಾಗೂ ಜವಾಬ್ದಾರಿಯಾಗಿದೆ. " ಹದಿಹರೆಯದ ವಯಸ್ಸಿನ ಮಕ್ಕಳು ತಮ್ಮ ಬದುಕಿನಲ್ಲಿನ ' ದೈನಂದಿನ ಸವಾಲುಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಬೇಕಿರುವ ಹೊಂದಾಣಿಕೆಯ ಹಾಗೂ ಸಕಾರಾತ್ಮಕ ನಡವಳಿಕೆಯೇ ಜೀವನ ಕೌಶಲಗಳು". "ಈ ಹದಿಹರೆಯದ ಹಂತದಲ್ಲಿ ಉತ್ತಮ ನಿರ್ಣಯಗಳನ್ನು ತೆಗೆದುಕೊಳ್ಳುವುದರ ಜೊತೆಗೆ ಹೊಂದಾಣಿಕೆ ಮತ್ತು ಒಳ್ಳೆಯ ನಡವಳಿಕೆಗಳನ್ನು ರೂಢಿಸಿಕೊಳ್ಳುವುದು. ಅದರ ಮೂಲಕ ಬದುಕಿನ ಉದ್ದೇಶಗಳನ್ನು ಈಡೇರಿಸಿಕೊಂಡು ಇತರರಿಗೆ ತೊಂದರೆಯಾಗದಂತೆ ಜೀವನ ನಡೆಸುವ ಸಾಮರ್ಥ್ಯವೇ ಜೀವನ ಕೌಶಲಗಳ" ಇವು ಉತ್ತಮ ನಿರ್ವಹಣೆಗಾಗಿ ಇರುವ ಕೌಶಲಗಳು. ಈ ಕೌಶಲಗಳನ್ನು ಮಕ್ಕಳಲ್ಲಿ ಎಳೆತನದಿಂದಲೇ ಮೈಗೂಡಿಸಬೇಕಾದದ್ದು ಪಾಲಕರ ಹಾಗೂ

ಶಿಕ್ಷಕರ ಹೊಣೆಗಾರಿಕೆಯಾಗಿದೆ. ಮೌಲ್ಯಗಳ ಜೊತೆಜೊತೆಗೆ ವಿದ್ಯಾರ್ಥಿಗಳಿಗೆ ಜೀವನ ಕೌಶಲಗಳನ್ನು ತಿಳಿಸಿ ಕೊಡಬೇಕಾದದ್ದು ಪ್ರತಿಯೊಬ್ಬ ಶಿಕ್ಷಕರ ಕರ್ತವ್ಯವಾಗಿದೆ ಎಂಬುದನ್ನು ಮನದಟ್ಟು ಮಾಡಿದರು. ಒಳ್ಳೆಯ ಮೌಲ್ಯಗಳನ್ನು ಹದಿಹರೆಯದ ವಯಸ್ಸಿನ ಮಕ್ಕಳಲ್ಲಿ ರೂಡಿಸುವುದು ಅತ್ಯಗತ್ಯವಾಗಿರುವುದನ್ನು ಮನಗಂಡ ವಿಶ್ವ ಆರೋಗ್ಯ ಸಂಸ್ಥೆ (WHO) ಯು 10 ಪ್ರಮುಖ ಜೀವನ ಕೌಶಲಗಳನ್ನು ಶಿಫಾರಸ್ಸು ಮಾಡಿದೆ / ಅನುಮೋದಿಸಿದೆ.

ಶ್ರೀ ಹೆಚ್.ಎಸ್. ಲಕ್ಷ್ಮೀಕಾಂತ್ ಬಿ.ಆರ್.ಪಿ. ಬಿ.ಆರ್.ಸಿ. ಭದ್ರಾವತಿ ಇವರು 10 ಪ್ರಮುಖ ಜೀವನ ಕೌಶಲಗಳ ಕುರಿತು ನಿದರ್ಶನಗಳ ಮೂಲಕ ಅನುಭವಗಳ ಮೂಲಕ ಇವುಗಳ ಅಗತ್ಯತೆಗಳನ್ನು ಕಟ್ಟಿ ಕೊಟ್ಟರು.

ಆ 10 ಪ್ರಮುಖ ಜೀವನ ಕೌಶಲಗಳು ಯಾವುವೆಂದರೆ:–

(1) ಸ್ವಯಂ ಅರಿವು / ತನ್ನನ್ನು ತಾನು ಅರಿಯುವುದು.

(2) ಅನುಭೂತಿ/ ಸಹಾನುಭೂತಿ.

(3) ವಿಮರ್ಶಾತ್ಮಕ ಆಲೋಚನೆ.

(4) ಸೃಜನಶೀಲ ಆಲೋಚನೆ.

(5) ನಿರ್ಧಾರ ಕೈಗೊಳ್ಳುವುದು.

(6) ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು.

(7) ಪರಸ್ಪರ ಹೊಂದಾಣಿಕೆ/ ಅಂತರಾತ್ಮಕ ಸಂಬಂಧಗಳು

(8) ಪರಿಣಾಮಕಾರಿ ಸಂವಹನ

(9) ಒತ್ತಡಗಳ ನಿರ್ವಹಣೆ

(10) ಸಂವೇದನೆ / ಭಾವನೆಗಳ ನಿರ್ವಹಣೆ.

ಈ ಎಲ್ಲಾ ಜೀವನ ಕೌಶಲಗಳನ್ನು ಒಂದೊಂದಾಗಿ ನಿದರ್ಶನಗಳೊಂದಿಗೆ ಅರ್ಥೈಸುತ್ತಾ ನಮ್ಮ ಶಾಲಾ ಮಕ್ಕಳಲ್ಲಿ ಹೇಗೆ ಇವುಗಳನ್ನು ರೂಢಿಸಬೇಕೆಂಬುದನ್ನು ಚರ್ಚೆಯ ಮೂಲಕ ಮನದಟ್ಟು ಮಾಡಿದರು. ಈ ಅವಧಿಯಲ್ಲಿ ಜೀವನ ಕೌಶಲಗಳು – ಅವುಗಳ ಮಹತ್ವವೇನು? ಅವುಗಳ ಉಪಯೊಗವೇನು? ಎಂಬುದು ತಿಳಿದುಬರುತ್ತದೆ. ಜೀವನ ಕೌಶಲಗಳನ್ನು ಕೇವಲ ತರಗತಿಗಳ ನಿಗದಿತ ಅವಧಿಗಳಲ್ಲಿ ಬೋಧಿಸುವುದಲ್ಲ. ರೂಢಿಸುವುದು ಎಂಬುದನ್ನು ತಿಳಿಯಲಾಯಿತು.

5ನೇ ದಿನ ದಿನಾಂಕ 06–08–2020ರಂದು ಶ್ರೀ ಪ್ರಶಾಂತ್ ಸಣ್ಣಕ್ಕಿ ಸಹ ಶಿಕ್ಷಕರು ಶ್ರೀ ಕನಕ ವಿದ್ಯಾಸಂಸ್ಥೆ, ಹಳೇನಗರ, ಭದ್ರಾವತಿ ಇವರು ರಚನಾವಾದದ ತತ್ವಗಳು ತರಗತಿ ಪ್ರಕ್ರಿಯೆಗಳು ಹಾಗೂ ಶಾಲಾ ಅಭ್ಯಾಸಗಳಲ್ಲಿ ಮೌಲ್ಯಮಾಪನ ಹೇಗೆ ಎಂಬ ಬಗ್ಗೆ ಉದಾಹರಣೆ ಮೂಲಕ ವಿವರಿಸಿದರು. ಕಲಿಕಾ ಸಿದ್ಧಾಂತಗಳು ಅವುಗಳಲ್ಲಿ ರಚನಾವಾದ ತತ್ವವು ಇಂದಿನ ಮಕ್ಕಳಿಗೆ ಜ್ಞಾನ ಕಟ್ಟಿಕೊಡುವಲ್ಲಿ ಎಷ್ಟು ಪೂರಕವಾಗಿದೆ ಹಾಗೂ ಗುಣಮಟ್ಟದ ಶಿಕ್ಷಣಕ್ಕೆ ಎಷ್ಟು ಒತ್ತು ನೀಡಬೇಕು ಎಂಬುವುದನ್ನು ತಿಳಿಸುತ್ತದೆ. ತರಗತಿಗಾಗಿ ನಾವು ಸೃಜಿಸುವ ಭೌತಿಕ ಪರಿಸರ, ಮಾನವೀಯ ಸಂಬಂಧಗಳ ಪರಿಸರ, ಶೈಕ್ಷಣಿಕ ಪರಿಸರ ಹಾಗೂ 5E ಮಾದರಿಯಲ್ಲಿ ತರಗತಿಗಳ ನಿರ್ವಹಣೆಯನ್ನು ರಚನಾವಾದ ಹಿನ್ನೆಲೆಯಲ್ಲಿ ಶಿಕ್ಷಕರು ಹೇಗೆ ಸಿದ್ಧಗೊಳ್ಳಬೇಕೆಂಬುದನ್ನು ತಿಳಿಸಲಾಯಿತು. ಸದರಿ ಸಂಪನ್ಮೂಲ ವ್ಯಕ್ತಿಗಳು 5E ಮಾದರಿಯಲ್ಲಿ ಹೇಗೆ ಕಲಿಕೆಯನ್ನು ಅನುಕೂಲಿಸಬೇಕೆಂಬುದನ್ನು ಒಂದೊಂದಾಗಿ ವಿವರಿಸಿದರು.

1. ತೊಡಗಿಸಿಕೊಳ್ಳುವಿಕೆ.,

2. ಅವಿಷ್ಕರಿಸಿ / ಪತ್ತೆಹಚ್ಚುವಿಕೆ,

3. ವಿವರಣೆ / ಅರ್ಥೈಸುವಿಕೆ.

4. ವಿಸ್ತರಣೆ / ಅನ್ವಯಿಸುವಿಕೆ

5. ಮೌಲ್ಯಮಾಪನ

ಹೀಗೆ ಒಂದು ಕಲಿಕಾಂಶವನ್ನು ಮಕ್ಕಳಿಗೆ ಸುಗಮಗಾರಿಕೆಯ ಮೂಲಕ ರೂಪಿಸಿದಾಗ ಆ ವಿಷಯವು ಅವರಲ್ಲಿ ದೃಢವಾಗಿರುವುದು ಎಂಬುವುದನ್ನು ಪ್ರತಿ ವಿಷಯಕ್ಕೂ ಉದಾಹರಣೆ ನೀಡುವ ಮೂಲಕ ಹಾಗೂ ಚರ್ಚಿಸುವ ಮೂಲಕ ಶಿಬಿರಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು.

6ನೇ ದಿನ ದಿನಾಂಕ 07–08–2020ರಂದು ಶ್ರೀ ರಾಜಶೇಖರ ಎ.ಜಿ. ಮುಖ್ಯೋಪಾಧ್ಯಾಯರು, ಸರ್ಕಾರಿ ಪ್ರೌಢಶಾಲೆ, ಜಿಗಣೆಹಳ್ಳಿ ಕಡೂರು ತಾಲ್ಲೂಕು (ನಿರ್ಗಮಿತ ಸಮನ್ವಯಾಧಿಕಾರಿಗಳು ಬಿ.ಆರ್.ಸಿ. ಭದ್ರಾವತಿ). ಇವರು KSQAAC /CSAS / NAS – ಇವುಗಳ ಉದ್ದೇಶಗಳು ಮಹತ್ವಗಳನ್ನು ಸರಳೀಕರಿಸಿ ಮಾಹಿತಿ ನೀಡಿದರು, ಅಜರ್ ಸರ್ವೇ ಪ್ರಕಾರ ಸಾಮರ್ಥ್ಯ ಆಧಾರಿತ ಕಲಿಕೆಯು ನಮ್ಮ ಮಕ್ಕಳಲ್ಲಿ ಉಂಟಾಗಿದೆಯೇ ಎಂಬುವುದನ್ನು ಸ್ವ ಅವಲೋಕನ ಮಾಡಿಕೊಳ್ಳವ ಮೂಲಕ ಅಂಕಿಅಂಶಗಳನ್ನು ನೀಡಿದರು. ಹಾಗಾದರೆ ಸಮೀಕ್ಷೆಯ ಪ್ರಕಾರ ಕಲಿಕೆಯ ಮಟ್ಟವು ಕಡಿಮೆಯಾಗಿರುವುದು ಏಕೆ? ಎಂಬ ಪ್ರಶ್ನೆ ಹುಟ್ಟು ಹಾಕಿ ಅದಕ್ಕೆ ಇರುವ ಕಾರಣಗಳನ್ನು ಹಾಗೂ ಪರಿಹಾರಗಳನ್ನು ಚರ್ಚೆಯ ಮೂಲಕ  ಹೊರ ಹೊಮ್ಮಿಸಿದರು ನಮ್ಮ ಮೌಲ್ಯಮಾಪನ ಮಾದರಿಯು ಸಾಮರ್ಥ್ಯ ಆಧಾರಿತವಾಗಿ ಇರಬೇಕೆಂಬುದನ್ನು ಸಾಮರ್ಥ್ಯ ಆಧಾರಿತ ಪ್ರಶ್ನೆಗಳನ್ನು ತೆಗೆಯುವ ಮೂಲಕ ಮಕ್ಕಳ ಕಲಿಕೆಯನ್ನು ಒರೆಹಚ್ಚಿ ನೋಡಬೇಕಾಗಿದೆ ಎಂಬುದು ಇದರಿಂದ ತಿಳಿದುಬರುತ್ತದೆ. ಕಲಿಕಾ ಫಲಗಳು ಇವು ಏನು? ಏಕೆ? ಅವು ಯಾವುವು? ಎಂಬುದನ್ನು ತಿಳಿಸುತ್ತಾ

1. ವಿದ್ಯಾರ್ಥಿಗಳ ಕಲಿಕಾ ಫಲಗಳು

2. ಪೋಷಕರ ಕಲಿಕಾ ಫಲಗಳು, ಹಾಗೂ

3. ಶಿಕ್ಷಕರ ಕಲಿಕಾ ಫಲಗಳು ಎಂಬುದಾಗಿ ವರ್ಗೀಕರಿಸಿರುವುದನ್ನು ಹೋಲಿಸಿ ಅರ್ಥೈಸಿದರು.

ಅವುಗಳು ಸ್ಲೈಡ್‌ಗಳನ್ನು ಆನ್‌ಲೈನ್‌ನಲ್ಲಿಯೇ ಪ್ರದರ್ಶಿಸಿ ವ್ಯತ್ಯಾಸಗಳನ್ನು ತಿಳಿಸಿದರು. ಈ ಅವಧಿಯಲ್ಲಿ ಗುಣಮಟ್ಟದ ಕಲಿಕೆ ಹೇಗೆ, ಸುಗಮಗಾರಿಕೆ ಹೇಗೆ ಮೌಲ್ಯಮಾಪನ ಹೇಗೆ ಎಂಬುದನ್ನು ತಿಳಿಯಲಾಯಿತು.




7 ನೇ ದಿನ ದಿನಾಂಕ 10–08–2020ರಂದು ಶ್ರೀಮತಿ ಶಬನಾ ಅಂಜುಮ್ ಮುಖ್ಯೋಪಾಧ್ಯಾಯರು. ಸರ್ಕಾರಿ ಉರ್ದು ಪ್ರೌಢಶಾಲೆ, ಹೊಳೆಹೊನ್ನೂರು, ಭದ್ರಾವತಿ ಇವರು NCF – 2005 (ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ) & CCE (ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ) ಇವುಗಳ

ಅರ್ಥ ಆಯಾಮಗಳನ್ನು ಹಾಗೂ ಮೌಲ್ಯಮಾಪನ ಕುರಿತು ಚರ್ಚಿಸಿದರು. ಈ ಅವಧಿಯಲ್ಲಿ ಸದರಿ ಸಂಪನ್ಮೂಲ ವ್ಯಕ್ತಿಗಳು ಶಿಕ್ಷಣ, ಶಿಕ್ಷಣದ ಗುರಿಗಳು, ಪಠ್ಯ ಕ್ರಮದ ಅರ್ಥ, ಪಠ್ಯವಸ್ತು ಹಾಗೂ ಪಠ್ಯಪುಸ್ತಕಗಳ ಅರ್ಥ ವ್ಯತ್ಯಾಸಗಳನ್ನು ವಿವರಿಸಿದರು. ರಾಷ್ಟ್ರೀಯ ಪಠ್ಯಕ್ರಮದ ಅರ್ಥ ಪಠ್ಯಕ್ರಮ ಚೌಕಟ್ಟು –

**2005 ರ ಮಾರ್ಗದರ್ಶಿ ತತ್ವಗಳಾದ :**

1. ಜ್ಞಾನವನ್ನು ಶಾಲೆಯ ಹೊರಗಿನ ಜೀವನಕ್ಕೆ ಸಂಬಂಧೀಕರಿಸುವುದು.
2. ಬಾಯಿಪಾಠ ಮಾಡುವ ವಿಧಾನಗಳಿಂದ ಅದನ್ನು ಬೇರೆಯಾಗಿಸುತ್ತಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
3. ಪಠ್ಯಕ್ರಮವು ಪಠ್ಯಪುಸ್ತಕಗಳನ್ನು ಮೀರಿ ನಿಲ್ಲುವಂತೆ ಶ್ರೀಮಂತಗೊಳಿಸುವುದು.
4. ಪರೀಕ್ಷೆಗಳನ್ನು ಹೆಚ್ಚು ನಮ್ಯ ಮಾಡುವುದು ಹಾಗೂ ತರಗತಿಯ ಆಗುಹೋಗುಗಳೊಂದಿಗೆ ಸಮ್ಮಿಳಿತಗೊಳಿಸುವುದು.
5. ಪ್ರಜಾಸತ್ತಾತ್ಮಕ ರಾಜ್ಯ ವ್ಯವಸ್ಥೆಯಲ್ಲಿ ಪಾರಸ್ಪರಿಕ ಶ್ರದ್ಧೆ ಹಾಗೂ ಪ್ರೀತಿಗಳುಳ್ಳ ಕಾಳಜಿಗಳನ್ನು ಬೆಳೆಸುವುದು.

ಈ ಅಂಶಗಳಿಗೆ ನಿದರ್ಶನಗಳನ್ನು ನೀಡುವ ಮೂಲಕ ಅರ್ಥೈಸಿದರು. ನಂತರ CCE – ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ – ಏನು ? ಏಕೆ ? ಹೇಗೆ ನಿರ್ವಹಣೆ ಮಾಡಬೇಕು ? ಎಂಬುವುದನ್ನು ಅದರ ಅಗತ್ಯತೆಯನ್ನು ತಿಳಿಸಿದರು. ರೂಪಣಾತ್ಮಕ ಮೌಲ್ಯಮಾಪನ (FA) ಮತ್ತು ಸಂಕಲನಾತ್ಮಕ ಮೌಲ್ಯಮಾಪನ SA ಇವುಗಳ ವ್ಯತ್ಯಾಸವನ್ನು / ಪಾತ್ರಗಳನ್ನು ವಿವರಿಸಿದರು.

8 ನೇ ದಿನ ದಿನಾಂಕ 11–08–2020ರಂದು ಶ್ರೀ ಜಯಕುಮಾರ್ ಆಂಗ್ಲ ಭಾಷಾ ಶಿಕ್ಷಕರು ಸರ್ಕಾರಿ ಪ್ರೌಢಶಾಲೆ ಎಡೇಹಳ್ಳಿ ಭದ್ರಾವತಿ ತಾಲ್ಲೂಕು ಇವರು CCE – ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ತಂತ್ರಗಳು ಮತ್ತು ಸಾಧನಗಳು ಹಾಗೂ ಸಾಂಧರ್ಬಿಕ ದಾಖಲೆಗಳನ್ನು ಹೇಗೆ ನಿರ್ವಹಣೆ ಮಾಡಬೇಕು, ನಿಯೋಜಿತ ಕಾರ್ಯಗಳು ಯಾವುವು ಅವುಗಳ ಮಹತ್ವವನ್ನು ಕುರಿತು ವಿಷಯವಾರು ಉದಾಹರಣೆಗಳೊಂದಿಗೆ ಅರ್ಥೈಸಿದರು. ಈ ಅವಧಿಯಲ್ಲಿ ಯಾವ ತಂತ್ರಗಳಿಗೆ ಯಾವ ಸಾಧನಗಳು ಎಂಬುವುದನ್ನು ಹಾಗೂ ಅದರ ಉದ್ದೇಶವನ್ನು ತಿಳಿಯಲಾಯಿತು. ಯಾವ ವಿಷಯಗಳಿಗೆ ಯಾವ ರೀತಿಯ ಎಷ್ಟರ ಪ್ರಮಾಣದಲ್ಲಿ ನಿಯೋಜಿತ ಕಾರ್ಯಗಳನ್ನು ನೀಡಬೇಕೆಂದು ಹಾಗೂ ದಾಖಲೆಗಳನ್ನು ಹೇಗೆ ನಿರ್ವಹಿಸಬೇಕು ಎಂಬುದನ್ನು ಅರಿಯಲಾಯಿತು.

9 ನೇ ದಿನ ದಿನಾಂಕ 12–08–2020ರಂದು ಶ್ರೀಮತಿ ಕವಿತಾ ಟ್ರಾಫಿಕ್ ಪೋಲಿಸ್ ಇನ್ಸ್‌ಪೆಕ್ಟರ್ ಹಾಗೂ ಅವರ ಸಿಬ್ಬಂದಿ ಚಿಕ್ಕಣ್ಣರವರು ಭದ್ರಾವತಿ. ಇವರು ರಸ್ತೆ ಸುರಕ್ಷತೆಯ ಅಗತ್ಯ ಮತ್ತು ಪ್ರಾಮುಖ್ಯತೆಯನ್ನು, ರಸ್ತೆ ಅಪಘಾತಗಳಲ್ಲಿ ಮರಣ ಹೊಂದಿರುವವರ ಅಂಕಿ–ಅಂಶಗಳ ಆಲೇಖ ಚಿತ್ರಗಳನ್ನು ಪ್ರದರ್ಶಿಸಿ ಮರಣದ ಪ್ರಮಾಣವನ್ನು ಅವಲೋಕಿಸುವಂತೆ ಮಾಡಿದರು. ಇದಕ್ಕೆ ಕಾರಣಗಳನ್ನು ಚರ್ಚಿಸಿದರು. ರಸ್ತೆ ಸಂಕೇತಗಳು, ಚಿನ್ಹೆಗಳು. ದೀಪಗಳು ಹೇಗೆ ಅಪಘಾತಗಳ ಪ್ರಮಾಣವನ್ನು ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ ಎಂಬುವುದನ್ನು ತಿಳಿಸಿದರು. ರಸ್ತೆ ಬಳಕೆದಾರರ ವರ್ತನೆಗಳು ಹೇಗಿರುತ್ತವೆ ಎಂಬುದನ್ನು ನಿದರ್ಶನಗಳೊಂದಿಗೆ ಹೇಳುತ್ತಾ ವಾಹನಗಳನ್ನು ಚಾಲನೆ ಮಾಡುವವರು, ಅವರ ಜಡ್ಡುಗಟ್ಟಿದ ನಿಲುವುಗಳು ಬದಲಾಗುವ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯವನ್ನು ಹದಿಹರೆಯದ ವಯಸ್ಸಿನಲ್ಲಿಯೇ ಮೂಡಿಸಿದರೆ ಸೂಕ್ತವೆನಿಸುತ್ತದೆ. ಸಂಚಾರ

ನಿಯಮಗಳನ್ನು ಪಾಲಿಸುವುದರಿಂದ ಸಂಚಾರ ಸುರಕ್ಷತೆಯ ಬಗ್ಗೆ ಕಾಳಜಿ ವಹಿಸುವಂತೆ ಮಾಡಬೇಕಾಗಿದೆ. ಹಾಗಾಗಿ ಶಾಲಾ ಮಕ್ಕಳಿಗೆ ರಸ್ತೆ ತಿಳುವಳಿಕೆ ಅನಿವಾರ್ಯವಾಗಿರುತ್ತದೆ. ಇದರಿಂದ ಮುಂದಿನ ದಿನಗಳಲ್ಲಿ ಸುಗಮ ಸಂಚಾರವನ್ನು ನಿರೀಕ್ಷಿಸಬಹುದಾಗಿದೆ ಎಂದು ತಿಳಿಸಿದರು. ಸಾರ್ವಜನಿಕ ಹಾಗೂ ಶಾಲಾ ವಾತಾವರಣದಲ್ಲಿ ಅಪಘಾತಗಳಿಗೆ ಒಳಗಾದ ವ್ಯಕ್ತಿಗಳಿಗೆ ಹೇಗೆ ಪ್ರಥಮ ಚಿಕಿತ್ಸೆಯನ್ನು ನೀಡಬೇಕೆಂಬುದನ್ನು ವಿವರಿಸಿದರು. ಶಾಲಾ ಬಸ್ಸುಗಳಲ್ಲಿ ಮಕ್ಕಳು ಸಂಚಾರ ಮಾಡುವಾಗ ಯಾವ ನಿಯಮಗಳನ್ನು ಎಚ್ಚರಿಕೆಗಳನ್ನು ತಿಳಿದಿರಬೇಕೆಂಬುದರ ಬಗ್ಗೆ ಮಾಹಿತಿಯನ್ನು ಶಿಕ್ಷಕರಿಗೆ ನೀಡಿದರು.

10ನೇ ದಿನ ದಿನಾಂಕ 13-08-2020ರಂದು ಶ್ರೀ ದಿವಾಕರ್ ಎಂ. ಆಂಗ್ಲ ಭಾಷಾ ಶಿಕ್ಷಕರು ಸಂಚಿಹೊನ್ನಮ್ಮ ಸರ್ಕಾರಿ ಬಾಲಿಕಾ ಪದವಿಪೂರ್ವ ಕಾಲೇಜು, ಹಳೇನಗರ, ಭದ್ರಾವತಿ ಇವರು SDP-ಶಾಲಾ ಅಭಿವೃದ್ಧಿ ಯೋಜನೆ ಮತ್ತು ಫಲಿತಾಂಶಗಳ ಕ್ರಿಯಾಯೋಜನೆಯನ್ನು ಹೇಗೆ ತಯಾರಿಸಬೇಕು? ಏಕೆ ತಯಾರಿಸಬೇಕು? ಇದರ ಅಗತ್ಯವೇನು ಎಂಬುದರ ಬಗ್ಗೆ ಸವಿವರವಾಗಿ ಮಾಹಿತಿ ನೀಡಿದರು. 3 ವರ್ಷಗಳ ಕಾಲಾವಧಿಯ ಅಭಿವೃದ್ಧಿಯ ನೋಟವನ್ನು ಎಸ್.ಡಿ.ಪಿ ಯಲ್ಲಿ ಕಾಣಬಹುದಾಗಿದೆ. ಇದರ ದಾಖಲೀಕರಣ ಅಥವಾ ನಿರ್ವಹಣೆಯ ಮಾಹಿತಿಯನ್ನು ಹೇಗೆ ಮಾಡಬೇಕೆಂಬುದರ ಬಗ್ಗೆ ತಿಳಿಸಿದರು. ಹಾಗೆಯೇ ಶಾಲಾ ಗ್ರಂಥಾಲಯಗಳು ಮತ್ತು ಶಾಲಾ ವಿವಿಧ ಕ್ಲಬ್‌ಗಳು, ಅವು ಏಕೆ? ಅವುಗಳ ಉದ್ದೇಶವೇನು? ಅವುಗಳ ನಿರ್ವಹಣೆ ಹೇಗೆಂಬುದನ್ನು ಉದಾಹರಣೆಗಳ ಮೂಲಕ ಹಾಗೂ ಚರ್ಚೆಯ ಮೂಲಕ ಅರ್ಥೈಸಿದರು. ಈ ದಿನದ ಜೀವನ ಕೌಶಲಗಳು ವಿಷಯದ ಆನ್‌ಲೈನ್ ತರಬೇತಿಯ ಕೊನೆಯ ಅಧಿವೇಶನಕ್ಕೆ ಭದ್ರಾವತಿ ತಾಲ್ಲೂಕಿನ ಮಾನ್ಯ ಕ್ಷೇತ್ರಶಿಕ್ಷಣಾಧಿಕಾರಿಗಳಾದ ಶ್ರೀ ಟಿ.ಎನ್.ಸೋಮಶೇಖರಯ್ಯ ನವರು ಹಾಗೂ ಮಾನ್ಯ ಕ್ಷೇತ್ರ ಸಮನ್ವಯಾಧಿಕಾರಿಗಳಾದ ಶ್ರೀ ವೈ. ಗಣೇಶ್ ರವರು ಆಗಮಿಸಿ ಈ ತರಬೇತಿಯ ಮಹತ್ವವನ್ನು ಅರಿತುಕೊಂಡ ಶಿಕ್ಷಕರು ತಮ್ಮ ತಮ್ಮ ಶಾಲೆಗಳಲ್ಲಿ ಮಕ್ಕಳಿಗೆ ಮಾಹಿತಿ ನೀಡಿ ಈ ಅಂಶಗಳನ್ನು ಅವರಲ್ಲಿ ಅಳವಡಿಕೆಯಾಗುವಂತೆ ಪ್ರೇರೇಪಿಸುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದು ಈ ಹತ್ತು ದಿನಗಳ ತರಬೇತಿಯ ಮುಕ್ತಾಯ ಸಮಾರಂಭದಲ್ಲಿ ಹೇಳುವ ಮೂಲಕ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿ ತರಬೇತಿಯನ್ನು ಮುಕ್ತಾಯಗೊಳಿಸಿದರು.

**ಕ್ಷೇತ್ರ ಶಿಕ್ಷಣಾಧಿಕಾರಿಗಳ ಮತ್ತು**
**ಕ್ಷೇತ್ರ ಸಮನ್ವಯಾಧಿಕಾರಿಗಳು,** ಭದ್ರಾವತಿ ತಾ||.

# "ನನ್ನ ಶಾಲೆ"

ಅದೋ ನನ್ನ ಶಾಲೆ
ಮಕ್ಕಳ ಜ್ಞಾನದ ನೆಲೆ

ಕನಸುಗಳ ಚಿಗುರಿಸಿ
ಜ್ಞಾನದಾಹವ ತಣಿಸಿ
ಚಿಗುರೊಡೆದು ಹೆಮ್ಮರವಾಗಿ
ಫಲಕೊಡುವ ಮರದೋಪಾದಿಯಲಿ
ಹರಡಿ ನಿಂತಿಹುದು ನನ್ನ ಶಾಲೆ॥

ಅಕ್ಷರಗಳ ಹರವಿನಲಿ
ಲೆಕ್ಕಗಳ ಚಿತ್ತಾರದಲಿ
ಮೌಲ್ಯಗಳ ಬಿತ್ತನೆಯಲ್ಲಿ
ಅರಳುವ ಕುಸುಮಳಿಗೆ
ನೀರೆರೆದು ಪೋಷಿಸುವುದು ನನ್ನ ಶಾಲೆ॥

ಎಸ್.ಡಿ.ಎಮ್. ಸಿಯವರ ಜವಾಬ್ದಾರಿ
ಪೋಷಕರ ಸಹಕಾರ
ಶಿಕ್ಷಕರ ಶ್ರಮ
ಮಕ್ಕಳ ಉತ್ಸಾಹ
ಸರ್ಕಾರದ ಚುಕ್ಕಾಣಿಯಲಿ
ನಡೆಯುತ್ತಿರುವುದು ನನ್ನ ಶಾಲೆ॥

ಪುಟ್ಟ ಜ್ಞಾನದ ಹಕ್ಕಿ
ಬಂದಿನಿತು ಜ್ಞಾನದಾ ತೆಕ್ಕೆಗೆ
ಅರಸಿ ತಿಂದಿತು ಜ್ಞಾನದಾ ಬುತ್ತಿ
ನಲಿವಿಂದ ಹಾರಿತು ವಿಶ್ವದೆಡೆಗೆ
ಮನವರಳಿಸಿ ಮಕ್ಕಳನ್ನು ನೋಡಿರಿ
ಹೃದಯವರಳಿಸಿ ಪ್ರೀತಿಯನ್ನು ನೀಡಿರಿ॥

ಅದೋ ನನ್ನ ಶಾಲೆ
ಮಕ್ಕಳ ಜ್ಞಾನದಾ ನೆಲೆ ॥

**ರಾಜೇಶ್ವರಿ ಎನ್. ವಿ. ದೈವಜ್ಞ**
ಸಹ ಶಿಕ್ಷಕಿ
ಸ.ಹಿ.ಪ್ರಾ ಶಾಲೆ, ಗೊಂದಿಚಟ್ನಹಳ್ಳಿ, ಶಿವಮೊಗ್ಗ

**ಕವನ**

# ಕೊರೊನಾದ ಮಹಿಮೆ

ಕೊರೊನ, ಕೊರೊನ
ಕರುನಾಡನ್ನೇ ಬೆಚ್ಚಿ
ಬೀಳುವಂತೆ ಮಾಡಿದೆ.

ಜನಜಂಗುಳಿಯ ರಸ್ತೆಗಳು
ಶಬ್ಧವನ್ನೇ ಸೀಳಿ ಮುನ್ನಡೆವ,
ಕಾರು, ಬೈಕುಗಳು !!

ಪ್ರಾರಂಭವಾಗದ ಶಾಲೆಗಳು
ಆನ್‌ಲೈನ್ ಪಾಠಗಳ ಧೋರಣೆಗಳು,
ಸಾಯುವವರ ಸಂಖ್ಯೆ ಹೆಚ್ಚಾಗಿದ್ದು.

ಉಸಿರು ಕಟ್ಟಿಸುವ ಮಾಸ್ಕ್‌ಗಳು
ಮುಸುಕಿನ ಮುಖಗಳು
ಸುರಕ್ಷತೆ ಕಾಣದೆ ನರಳುತ್ತಿರುವ ರೋಗಿಗಳು!

ಆರೋಗ್ಯ ಇಲಾಖೆಯ ಧೋರಣೆಗಳು,
ಇದೆಲ್ಲದರ ನಡುವೆ ನಾವು
ಎಲ್ಲಿಗೆ ಹಾರೋಣ ನಾವು
ಎಲ್ಲಿಗೆ ಹಾರೋಣ !!

**ಶ್ರೀಮತಿ ತಿಪ್ಪಮ್ಮ (ಲಕ್ಷ್ಮೀ ಕುಮಾರ್)**
ಇ.ಸಿ.ಓ. ಕೂಡ್ಲಿಗೆರೆ ವಲಯ
ಭದ್ರಾವತಿ ತಾ॥

# ಶಿಕ್ಷಣದ ಮಹತ್ವ

ಶಿಕ್ಷಣವೇ ಸಮಾಜದ ಸಂಜೀವಿನಿ. ಶಿಕ್ಷಣ ಮಲಗಿರುವ ವ್ಯಕ್ತಿಯನ್ನು ಎಚ್ಚರಗೊಳಿಸುತ್ತದೆ. ಬಿದ್ದ ವ್ಯಕ್ತಿಯನ್ನು ಎಬ್ಬಿಸಿ ನಿಲ್ಲಿಸುತ್ತದೆ. ಎದ್ದು ನಿಂತ ವ್ಯಕ್ತಿಯನ್ನು ಮುನ್ನಡೆಸುತ್ತದೆ. ನಡೆವ ವ್ಯಕ್ತಿಯನ್ನು ಓಡುವಂತೆ ಮಾಡುತ್ತದೆ. ಓಡುವ ವ್ಯಕ್ತಿಯನ್ನು ಹಾರುವಂತೆ ಮಾಡುತ್ತದೆ. ಶಿಕ್ಷಣ ಸಮಾಜಕ್ಕೆ ಹಾಗೂ ವ್ಯಕ್ತಿಗೆ ಅತ್ಯಮೂಲ್ಯವಾದ ಪೌಷ್ಠಿಕಾಂಶವಿದ್ದಂತೆ. ಶಿಕ್ಷಣ ಆತ್ಮೋನ್ನತಿಗೆ, ಸಮಾಜ ಸುಧಾರಣೆಗೆ, ಸಾಮಾಜಿಕ ಪರಿವರ್ತನೆಗೆ, ಆತ್ಮಶುದ್ದಿಗೆ ದಾರಿದೀಪವಾಗಬಲ್ಲ ಪರಮಾಮೃತವಾದ ದಿವ್ಯ ಸಾಧನ. "ಪರೋಪಕಾರಾಯ ಪುಣ್ಯಾಯ ಪಾಪಯ ಪರಪೀಡನಂ ಪರೋಪಕಾರಮಿದಂ ಶರೀರಂ". "ಗುರು ಬ್ರಹ್ಮ ಗುರು ವಿಷ್ಣು ಗುರು ದೇವೋ ಮಹೇಶ್ವರ: ಗುರು ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀ ಗುರವೇ ನಮ:" "ಸತ್ಯಂ ಶಿವಂ ಸುಂದರಂ ಸತ್ಯಮೇವ ಜಯತೇ. ಫಲೇನ ಪರಿಚೀಯತೇ ವೃಕ್ಷ:" "ಓಂ ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ ಚಕ್ಷುರುನ್ಮೀಲಿತಂ ಏನ ತಸ್ಮೈ ಶ್ರೀ ಗುರುವೇ ನಮ:" ಇತ್ಯಾದಿ ಹೀಗೆ ಹತ್ತಾರು ಸಾಲುಗಳು ಶಿಕ್ಷಣ ಕುರಿತು ಆಲೋಚಿಸಲಾರಂಭಿಸಲು ಮನವೆಂಬ ಮೂಸೆಯಲ್ಲಿ ಧುತ್ತನೆ ಸುಳಿದು ಹೊಮ್ಮಿ ಎಸೆಯುತ್ತವೆ.

ಶಿಕ್ಷಣವೆಂಬ ಪದವೇ ಅತ್ಯಾಕರ್ಷಣೀಯ ಹಾಗೂ ಅಮೋಘವಾಗಿ ಇರುವಾಗ ಅದರ ಅರ್ಥ ಮಥಿತಾರ್ಥ, ವ್ಯಾಖ್ಯಾನ, ವಿವರಣೆ, ಶಿಕ್ಷಣದ ಮಜಲುಗಳ ಪ್ರಾಮುಖ್ಯತೆಯನ್ನರಿತು ಶಿಕ್ಷಣಾರ್ಥಿ ಹಾಗೂ ಶಿಕ್ಷಕ ಶಿಕ್ಷಣದ ಬಂಧನವನ್ನು ಕ್ರಮಬದ್ಧವಾಗಿ ಹಾಗೂ ಅದರ ಔಚಿತ್ಯವನ್ನು ಸಮಂಜಸವಾಗಿ ಅರಿತು ಉಣಲು ಉಣಬಡಿಸಲು ಸರ್ವದಾ ಯತ್ನಿಸುತ್ತಾ ಸಮಾಜಮುಖಿಯಾಗಿ ಅಥವಾ ಸಮುದಾಯಮುಖಿಯಾಗಿ ಮಹೋನ್ನತವಾದ ಸದಾಶಯದೊಂದಿಗೆ ಒಂದೊಂದೇ ಪುಟ್ಟ ಹೆಜ್ಜೆಗಳನ್ನು ಇಡುತ್ತಾ ಹೋದರೆ ಸಮಾಜದ ಸರ್ವಾಂಗೀಣ ಬೆಳವಣಿಗೆಗೆ, ಮಹದ್ಪರಿವರ್ತನೆಗೆ ದಾಪುಗಾಲಿಟ್ಟಂತೆ ಆಗುತ್ತದೆ.

ಈ ಸಮಷ್ಟಿಯೊಳು ಶಿಕ್ಷಣ ಶಿಕ್ಷಕರೊಳು ಭೂಮ ದೃಷ್ಟಿಯಿಂದ ವಿಕಸಿಸಿ ಸಮಾಜವನ್ನು ಬಿಡಿಬಿಡಿಯಾಗಿ ನೋಡುವ ಬದಲು ಇಡಿಯಾಗಿ ನೋಡುವ ನಿಸರ್ಗವನ್ನು ಸ್ವರ್ಗವಾಗಿಸುವ ನಿಟ್ಟಿನಲ್ಲಿ ವಾತ್ಸಲ್ಯಕ್ಕೆ ಪ್ರತಿಯಾಗಿ ಅತ್ಯಂತ ಆಸ್ಥೆ. ಅಕ್ಕರೆ ಹಾಗೂ ಮಮತೆಯಿಂದ ಕಾಣುವ ಮನಸೂರೆಗೊಳ್ಳುವ ನಿಸರ್ಗದ ಎಲ್ಲ ಜೀವಿಗಳನ್ನು ಮನಸಾರೆ ಪ್ರೀತಿಸುವ ಜಾತ್ಯಾದಿವರ್ಗರಹಿತ ಶಾಂತಿಯುತ ಸಮಾಜವೊಂದನ್ನು ನಮ್ಮ ಮನುಕುಲದ ಬಾವಿ ಪ್ರಜೆಗಳು ಅರ್ಥಾತ್ ನಮ್ಮ ಮುದ್ದು ಮಕ್ಕಳಿಗಾಗಿ ಕಟ್ಟಿಕೊಡುವ ಹಾದಿಯಲ್ಲಿ ಶಿಕ್ಷಣ ಭದ್ರಬುನಾದಿ ಹಾಕುವ ಹೊಣೆ ಹೊತ್ತಿದ್ದರೂ ಹೇಗೋ ಏನೋ ಏಕೋ ಎಲ್ಲಿಯೋ ನಿತ್ಯವೂ ಶೈಕ್ಷಣಿಕ ಪ್ರಯತ್ನ ಈ ದಿಸೆಯಲ್ಲಿ ಸಫಲವಾಗಲು ವಿಘ್ನಗಳ ಜಾಲ ಭೇದಿಸುವ ಆಧುನಿಕ ಮೂಷಿಕವಾಹನನ ಅವತಾರ ಇನ್ನು ಆಗಿಲ್ಲವೇನೋ ಎಂದೆನಿಸುತ್ತದೆ. ಅಂದಿನ ಗುರುಕುಲ ಶಿಕ್ಷಣದಿಂದ ಇಂದಿನ ಗೂಗಲ್ ಅಂತರ್ಜಾಲ ಪ್ರಚೋದಿತ, ಅಂತರ್ಜಾಲ ಬೆಂಬಲಿತ, ಅಂತರ್ಜಲಾಧಾರಿತ, ತಂತ್ರಜ್ಞಾನಪೂರಿತ, ತಂತ್ರಜ್ಞಾನಧಾರಿತ, ಅತ್ಯಾಧುನಿಕ ಸೌಲಭ್ಯ ಹಾಗೂ ಮಹತ್ವಾಕಾಂಕ್ಷೆಗಳಿಂದೊಡಗೂಡಿದ್ದರೂ ಅದೇಕೋ ಏನೋ ಶಿಕ್ಷಣದಾಶಯ ಗುಣಾತ್ಮಕವಾಗಿ ಪ್ರಬಲಗೊಳ್ಳದಿರುವುದು ಪ್ರಸ್ತುತ ಕಾಲಘಟ್ಟದ ಶೋಚನೀಯ ದೌರ್ಭಾಗ್ಯ ಹಾಗೂ ದುರಂತ, ಶಿಕ್ಷಕರು ವಿದ್ಯಾರ್ಥಿಗಳು ಹಾಗೂ ಪೋಷಕರು ಎಲ್ಲರೂ ಒಟ್ಟಾಗಿ ಒಂದು ಚಾವಡಿಯಡಿ ಕಲೆತು ಸಮಸ್ಯೆಗಳನ್ನು ನೋವು ನಲಿವುಗಳನ್ನು, ಎಡರು–ತೊಡರುಗಳನ್ನು, ವಿಚಾರಧಾರೆಗಳನ್ನು, ಮೈಮನ ಘಾಸಿಗೊಳಿಸುವ

ಕುಂದು ಕೊರತೆಗಳೆಂಬ ಮುಳ್ಳುಗಳ ಕುರಿತು ಧಾರಾವಾಹಿಯಂದದಿ ಚರ್ಚಿಸಿ ಪರಿಹಾರ ಕಾಣದೆ, ಶಿಕ್ಷಣವನ್ನು ಪ್ರತಿಷ್ಠೆಯ ಹಾಗೂ ದ್ರವ್ಯದ ತಕ್ಕಡಿಯಲ್ಲಿ ತೂಗುತ ಮೌಲ್ಯಗಳನ್ನೆಲ್ಲಾ ಗಾಳಿಗೆ ತೂರಿ ಕೆಲವು ಪೋಷಕರು ಮಕ್ಕಳ ಚಂದನೆಯ ಭವಿತವ್ಯದ ಗಾಳಿಗೋಪುರ ಕಟ್ಟಿದರೆ, ದ್ರವ್ಯಾಸಕ್ತರು ಆತ್ಯಾಧುನಿಕ ಸೌಲಭ್ಯಗಳನ್ನು ಮಾತ್ರ ತೋರಿ ಮಗುವಿನ ಅಳವು. ಆಂತರ್ಯವರಿಯದೆ ಅವನನ್ನು ಶೈಕ್ಷಣಿಕವಾಗಿ ಬಲಭೀಮನನ್ನಾಗಿಸದೆ ಕೇವಲ ಸ್ವಾರ್ಥಪರ ಚಿಂತನಾಸಕ್ತರಾಗಿ ಸಮಾಜಕ್ಕೆ ಕಂಟಕಪ್ರಾಯರಾಗುತ್ತಾರೆ.

ಕೆಲವೊಮ್ಮೆ ಸಮಾಜದ ದಿಕ್ಕುತಪ್ಪಿಸುವ ಮನರಂಜನಾ ಕೇಂದ್ರಿತ, ಮೌಲ್ಯರಹಿತ ಅರ್ಥ ಕೇಂದ್ರಿತ ದೃಶ್ಯ ಮಾಧ್ಯಮಗಳನ್ನೇ, ಹೆಚ್ಚಾಗಿ ಆಶ್ರಯಿಸಿ ವಿನಾಕಾರಣ ಕಾಲಹರಣ ಮಾಡಿ ಜೀವನ ವ್ಯರ್ಥ ಮಾಡಿಕೊಂಡು ಮೂರ್ಖರಂತೆ ಕಾಣುವ ಕೆಲವು ಪೋಷಕರು, ವಿದ್ಯಾರ್ಥಿಗಳು, ಶಿಕ್ಷಕರು ಓದುವ ಬರೆಯುವ, ಸಮಯದ ಮೌಲ್ಯವರಿತು ಪ್ರತಿಕ್ಷಣ ಕಲಿಯುವ, ಅಧ್ಯಯನಶೀಲ, ಚಿಂತನಶೀಲ, ಪ್ರವೃತ್ತಿ ಹೊಂದಿ ಆಳವಾಗಿ ವಿಸ್ತೃತವಾಗಿ ಜ್ಞಾನಾರ್ಜನೆ ಮಾಡುವ ಕರ್ತವ್ಯದಲ್ಲಿ ಕೈಂಕರ್ಯದಲ್ಲಿ ಕಾಯಾ ವಾಚಾ ಮನಸಾ ತೊಡಗಿಸಿಕೊಳ್ಳದ, ಕಾರ್ಯತತ್ಪರರಾಗದ ಹೊರತು ಶಿಕ್ಷಣವೆಂದೆಂದೂ ಸಮಾಜಕ್ಕೆ ವರವಾಗದು. ಅದೊಂದು ಸೌಂದರ್ಯವರ್ಧಕ ಪ್ರಸಾಧನವೆಂಬಂತೆ ತೋರ್ಪಡಿಮದಂತೆ.

**ಚಿದಾನಂದ ಎಸ್.ಎಂ.**
ಸಹಶಿಕ್ಷಕರು, ಸರ್ಕಾರಿ ಪ್ರೌಢಶಾಲೆ
ಮಾವಿನಕೆರೆ ಕಾಲೋನಿ ಭದ್ರಾವತಿ.

## ಪದಬಂಧ ಉತ್ತರಗಳು

| ಎಡದಿಂದ ಬಲ .. | ಮೇಲಿನಿಂದ ಕೆಳಕ್ಕೆ |
|---|---|
| .ವಿದ್ಯಾಗಮ | .ವಿಪ್ಲವ |
| .ಅರಸಾಳು | .ಮತಿ |
| .ತಿಮ್ಮಕ್ಕ | .ಅಕ್ಕ ತಮ್ಮ |
| .ವಣಿಕ | .ಸಾವಯವ |
| .ತನ್ಮಯ | .ಕಮಲಾಕರ |
| .ದಮ್ಮ | .ದಯ |
| .ವಸ್ತು | .ಸ್ತುತ್ಯಾರ್ಹ |
| .ವಿಪುಲಾಶ್ರಯ | .ವಿರಾಮ |
| .ಗಮನಾರ್ಹ | .ಸಮ |
| .ಮಥುರ | .ಗರಿ |
| .ಅರಿ | .ನಾಕ |

# "ವಿನೂತನ ವಿಧಾನದ ಮುಖೇನ ಯಶಸ್ವಿಯಾದ ಇಂಗ್ಲೀಷ್ ನಲಿಕಲಿ ONLINE ತರಬೇತಿ ಯಾನ "

**ಉದ್ಧಮೇನೈವ ಸಿದ್ಧ್ಯಂತಿ ಕಾರ್ಯಾಣಿನ ಮನೋರಥೈ :**
**ನ.ಹಿ.ಸುಪ್ತಸ್ಯ ಸಿಂಹಸ್ಯ ಪ್ರವಿಶಂತಿ ಮಖೇ ಮೃಗಾ: ॥**

ಕಠಿಣ ಹಾಗೂ ಸತತ ಪ್ರಯತ್ನಗಳಿರದೇ ಯಾವುದೇ ಕಾರ್ಯವೂ ಸಾಧ್ಯವಾಗದು. ಹೇಗೆ ಜಿಂಕೆಯಂತಹ ಸಾಧು ಪ್ರಾಣಿಯನ್ನು ಆಹಾರವಾಗಿಸಿಕೊಳ್ಳಲಿಕ್ಕೆ ಸಿಂಹದಂತಹ ಬಲಿಷ್ಠ ಪ್ರಾಣಿಯೂ ಬೇಟೆ ಆಡಲೇಬೇಕೋ ಹಾಗೇ !

ಹೌದು, ಯಾವುದೇ ಕ್ಷೇತ್ರದಲ್ಲಿಯಾದರೂ ಸಾಧನೆ ಮಾಡಲು ಕಠಿಣ ಹಾಗೂ ಸತತ ಪರಿಶ್ರಮ – ಪ್ರಯತ್ನಗಳು ಬೇಕೇ – ಬೇಕು ಅದರಲ್ಲಿಯೂ ಭವ್ಯ ಭವಿತವ್ಯದ ನಿರ್ಮಾತೃಗಳನ್ನು ನಿರ್ಮಿಸುವ ನಮ್ಮ ಶೈಕ್ಷಣಿಕ ಕ್ಷೇತ್ರದಲ್ಲಿ, ವಿಭಿನ್ನ ಹಾಗೂ ವಿಶಿಷ್ಠ ಸಾಮರ್ಥ್ಯ ಹೊಂದಿರುವ ಮಕ್ಕಳ ಪ್ರಗತಿಯಲ್ಲಿ ಪರಿಣಾಮಕಾರಿ – ಸಕಾರಾತ್ಮಕ ಬದಲಾವಣೆಗಳನ್ನ ತರುವಲ್ಲಿ ಸತತ ಪ್ರಯತ್ನಗಳ ಅವಶ್ಯಕತೆ ಹಾಗೂ ಅನಿವಾರ್ಯತೆ ಬಹಳಷ್ಟಿದೆ.

"Learning is not product of teaching,
Learning is the product of the activity of learners"

– John Holt

ಮೇಲಿನ ಉಕ್ತಿಗೆ ಪುಷ್ಠಿ ಕೊಡುವಂತೆ ನಮ್ಮ ಬೋಧನಾ ಪದ್ಧತಿ ಶಿಕ್ಷಕ ಕೇಂದ್ರಿತ ಮಾದರಿಯನ್ನ ತೊರೆದು ಶಿಶು ಕೇಂದ್ರಿತ – ಚಟುವಟಿಕೆಯಾಧಾರಿತ ಸ್ವಕಲಿಕೆಗೆ ಒತ್ತು ನೀಡುವಂತಹ ನಿಟ್ಟಿನಲ್ಲಿ ಹೊಸ –ಹೊಸ ಪ್ರಯತ್ನಗಳನ್ನು ತನ್ನದಾಗಿಸಿಕೊಳ್ಳುತ್ತಾ ಬಂದಿದೆ. ಇಂತಹ ಪ್ರಯತ್ನಗಳ ಫಲಶೃತಿಯೇ ನಮ್ಮ ಬಹುಬೇಡಿಕೆಯ "ಇಂಗ್ಲೀಷ್ ನಲಿ–ಕಲಿ " ಬೋಧನಾ ವಿಧಾನವೆಂದರೆ ತಪ್ಪಾಗಲಾರದು.

2015 ರಲ್ಲಿ ಕರ್ನಾಟಕ ರಾಜ್ಯ 4 ಜಿಲ್ಲೆಗಳ 100 ಶಾಲೆಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಿ ಇಂಗ್ಲೀಷ್ ಭಾಷಾ ಬೋಧನೆಯಲ್ಲಿ ಎದುರಾದ ಎಡರು – ತೊಡರುಗಳ ಬಗ್ಗೆ ಸೂಕ್ತ ಹಿಮ್ಮಾಹಿತಿ ಪಡೆದು ಮತ್ತೊಮ್ಮೆ, ಮಗದೊಮ್ಮೆ ಹಲವು ಬದಲಾವಣೆಗಳಿಗೊಳಪಟ್ಟ ನಾವಿನ್ಯಯುತವಾದ ಇಂಗ್ಲೀಷ್ ನಲಿ–ಕಲಿ ಬೋಧನಾ ವಿಧಾನ ಪ್ರಸ್ತುತ ನಮ್ಮ ಮುಂದಿದೆ.

ಶಿಕ್ಷಕರಾಗಿ ನಾವುಗಳೂ ಕೂಡಾ 2009 ರಿಂದಲೂ ನಲಿ–ಕಲಿ ವಿಧಾನದಲ್ಲಿ ಬೆರೆತು – ನುರಿತಿರುವುದರಿಂದ ಇಂಗ್ಲೀಷ್ ಭಾಷಾ ಬೋಧನೆಯೂ ಹೀಗೇಕಾಗಬಾರದು ? ಎಂಬ ನಿರೀಕ್ಷೆಯಲ್ಲಿದ್ದೆವು. ಆದರೆ, ಈ ನಿರೀಕ್ಷೆಯ ಸಮಯ ಅಂತ್ಯವಾಗಿದೆ ಎಂಬುದು ಅರಿವಿಗೆ ಬಂದದ್ದು ENK ತರಬೇತಿಗೆ ನಮಗೆ ಆದೇಶ ಬಂದಾಗ, ENK online ತರಬೇತಿ, ಆದರೆ COVID ನಂತಹ ಸೂಕ್ಷ್ಮ ಪರಿಸ್ಥಿತಿಯಲ್ಲಿ ಮುಖಾ–ಮುಖಿ ತರಬೇತಿ ಸಾಧ್ಯವಾಗದು, ಎಂಬ ಅಭಿಪ್ರಾಯಕ್ಕೆ ಪೂರಕವಾಗಿ ENK online ತರಬೇತಿ ಎಂದು ತಿಳಿದಾಗ ಸ್ವಲ್ಪ ಬೇಸರ ಹಾಗೂ ಗೊಂದಲವಾದದ್ದು ನಿಜ.

ಆದರೆ ನಮ್ಮೆಲ್ಲರ ಬೇಸರ – ಗೊಂದಲಗಳನ್ನು ನಿವಾರಿಸಿ ENK ತರಬೇತಿಯನ್ನು 09 ದಿನಗಳ ONLINE ಹಾಗೂ 01 ದಿನ ಮುಖಾ ಮುಖಿ ನೀಡಿ ಯಶಸ್ವಿಗೊಳಿಸಿದ ಶ್ರೇಯ ಶ್ರೀಯುತ. ಫಣೀಶ್ ಹಿರಿಯ ಉಪನ್ಯಾಸಕರು, ಶ್ರೀಮತಿ ರೇಣುಕಾ, ಉಪನ್ಯಾಸಕರು ಹಾಗೂ ಅವರ ತಂಡಕ್ಕೆ ಸಲ್ಲುತ್ತದೆ.

"Technology will not replace great teachers,
But technology in the hand of great teachers
can be transformational"

-George Couros.

ಮೇಲಿನ ಹೇಳಿಕೆಯನ್ನು ಸಾಕ್ಷಾತ್ಕರಿಸಿದ ತರಬೇತಿ ENK ಅಂತಾ ಹೇಳಬಹುದು. ONLINE ತರಬೇತಿಗಳು ನೀರಸ ಹಾಗೂ ಪರಿಣಾಮಕಾರಿಯಾಗಿ ತಲುಪಲಾರವು ಎಂಬೆಲ್ಲಾ ಪೂರ್ವಾಗ್ರಹಗಳನ್ನು ಮೆಟ್ಟಿ ನಿಂತು, ONLINE ನಲ್ಲಿಯೂ ಸಹ ಎಲ್ಲರಿಗೂ ತಲುಪುವಂತಹ ಕುತೂಹಲಕಾರಿಯಾಗಿ ಪರಿಣಾಮಕಾರಿಯಾಗಿ ತರಬೇತಿ ನೀಡಬಹುದೆನ್ನುವುದು ಡಯಟ್ ಶಿವಮೊಗ್ಗ ಇವರ ವತಿಯಿಂದ ನೀಡಿದ ENK ತರಬೇತಿ ಸಾಕ್ಷಿಯಾಗಿದೆ

ENK ಯ ಪ್ರಮುಖಾಂಶಗಳಾದ 7 theme, 7 segments, Listening & Speaking cards, Reading & writing cards, 2 ರೀತಿಯ ಅಭ್ಯಾಸ ಪುಸ್ತಕಗಳು, 2 ರೀತಿಯ ಪ್ರಗತಿ ನೋಟಗಳು, ಕಲಿಕಾ ಏಣಿ ಹೀಗೆ ಇಷ್ಟು ದಿನಗಳ ನಮ್ಮ ಇತರೆ ವಿಷಯಗಳ ನಲಿ–ಕಲಿ ಬೋಧನಾ ಸಾಮಗ್ರಿಗಳಿಗಿಂತ ಸ್ವಲ್ಪ ವಿಭಿನ್ನವಾಗಿರುವ ಮೇಲಿನ ಅಂಶಗಳನ್ನು ಶಿಕ್ಷಕರಿಗೆಲ್ಲಾ ಗೊಂದಲವಾಗದ ರೀತಿಯಲ್ಲಿ, ಮನದಟ್ಟಾಗುವಂತೆ ಸಾದರಪಡಿಸಿದರು.

ನಾವು ಕಂಡಂತೆ ONLINE ENK ತರಬೇತಿಯ ಯಶಸ್ಸಿಗೆ ಕಾರಣವಾದ ಅಂಶಗಳು :–

* ತಂಡದ ಒಟ್ಟಾರೆ ಪ್ರಯತ್ನ
* ತಂತ್ರಜ್ಞಾನದ ಸೂಕ್ತ ಹಾಗೂ ಸಮಯೋಚಿತ ಬಳಕೆ.
* ಸ್ನೇಹಶೀಲ ನಾಯಕನ ಸೂಕ್ತ ಮಾರ್ಗದರ್ಶನ
* ಪರಿಣಾಮಕಾರಿ ಪೂರ್ವ ತಯಾರಿ
* ಸಂಪನ್ಮೂಲ ವ್ಯಕ್ತಿಗಳ ಸಂವಹನ ಸಾಮರ್ಥ್ಯ ಹಾಗೂ ಅರ್ಥೈಸಬೇಕಾದ ವಿಷಯದ ಮೇಲಿನ ಅವರ ಅರಿವು ಹಾಗೂ ಪ್ರೀತಿ
* ಹಲವು ಅನಿವಾರ್ಯತೆಗಳ ಹೊರತಾಗಿಯೂ ನಮ್ಮನ್ನು ಪ್ರಜ್ಞರನ್ನಾಗಿಸಿದ ತಂಡದ ಕರ್ತವ್ಯಪರತೆ.

ಏಕೆಂದರೆ, ಇಲಾಖಾ ಸುತ್ತೋಲೆ ಇರದ ಆದರೂ ಸಂಪನ್ಮೂಲ ವ್ಯಕ್ತಿಗಳಿಗೆ ರಾಜ್ಯ ಹಂತಕ್ಕಿಂತ ಮೊದಲು ಮುಂದಿನ ಶೈಕ್ಷಣಿಕ ವರ್ಷ ENK ಯ ಯಶಸ್ವಿ ಅನುಷ್ಠಾನ ಆಗಲೇಬೇಕೆಂಬ ಧೃಡ ಹಾಗೂ ಸ್ವಯಂ ನಿರ್ಧಾರದಿಂದ ರಾಜ್ಯದ ಯಾವುದೇ ಜಿಲ್ಲೆಗಳಲ್ಲಿ ನೀಡದ ENK ತರಬೇತಿಯನ್ನು ಕೇವಲ ಶಿವಮೊಗ್ಗ ಜಿಲ್ಲೆಯಲ್ಲಿ ಮಾತ್ರ ಮಕ್ಕಳ ಹಿತಾಸಕ್ತಿಯನ್ನು ಕೇಂದ್ರವಾಗಿಸಿ ಆನ್‌ಲೈನ್‌ನಲ್ಲಿ ನೀಡಿದ, ಶ್ರೀಮತಿ ಸುಮಂಗಳಾ ಪಿ. ಕುಚಿನಾಡ ಉಪನಿರ್ದೇಶಕರು (ಅಭಿವೃದ್ಧಿ) ಡಯಟ್ ಶಿವಮೊಗ್ಗ, ಶ್ರೀಯುತ ಫಣೀಶ್ ಹಿರಿಯ ಉಪನ್ಯಾಸಕರು EN K ಜಿಲ್ಲಾ ನೋಡಲ್ ಅಧಿಕಾರಿ ಹಾಗೂ ಶ್ರೀಮತಿ ರೇಣುಕಾ ಉಪನ್ಯಾಸಕರು ಡಯಟ್ ಶಿವಮೊಗ್ಗ ತಮಗೆ ನಮ್ಮ ನಮನಗಳು.





ENK ತರಬೇತಿಯನ್ನು ಪರಿಣಾಮಕಾರಿಯಾಗಿ ನಮಗೆ ತಲುಪಿಸಿದ ಶ್ರೀಮತಿ ಮರಿಯಾ ಡಿಸೋಜ ಸ.ಶಿ.ಸ.ಹಿ.ಪ್ರಾ.ಶಾಲೆ ಹಸೂಡಿ ಫಾರಂ ಶಿವಮೊಗ್ಗ, ಶ್ರೀಮತಿ ಶುಭ .ಎಸ್. ಸ.ಶಿ.ಸ.ಹಿ.ಪ್ರಾ.ಶಾಲೆ ಶಂಕರ್ ಮೈನ್ಸ್ ಶಿವಮೊಗ್ಗ, ಶ್ರೀಮತಿ ರೂಪ. ಸ.ಶಿ.ಸ.ಹಿ.ಪ್ರಾಶಾಲೆ ಹಾದಿಗಲ್ಲು ತೀರ್ಥಹಳ್ಳಿ ನಿಮ್ಮೆಲ್ಲರಿಗೂ ನಮ್ಮ ಅಭಿನಂದನೆಗಳು.

ಒಟ್ಟಾರೆ,

" Change is the end result of all true learning " Leo Buscagila

ಅನ್ನೊಹಾಗೆ ಬದಲಾವಣೆಯ ಈ ಹೊಸ ಗಾಳಿ ತನ್ನ ಸುಗಂಧವನ್ನು ಪಸರಿಸಲಿ, ಹೊಸ ಕಲಿಕೆಯತ್ತ ಮಗುವನ್ನು ಕರೆದೊಯ್ಯುವಲ್ಲಿ ಯಶಸ್ವಿಯಾಗಲಿ ಎನ್ನುವ ಉತ್ಸಾಹದೊಡನೆ...

**ಪ್ರಿಯಾಂಕ ಎಸ್.ಎಂ.**
ಸ.ಶಿ.ಸ.ಹಿ.ಪ್ರಾ.ಶಾ. ಸಮಟಗಾರು
ಹೊಸನಗರ ತಾ॥

# ಎಲ್ಲರಂತೆ ನೀವಲ್ಲ...... ನಿಮ್ಮಂತೆ ಬೇರಾರಿಲ್ಲ.....

ಗುರಿ ಇರದ ಬದುಕಾಗಿತ್ತು
ನೀವು ಬರುವ ಮುನ್ನ
ಜ್ಞಾನ ಸುಧೆಯದು ಸಾಕಿತ್ತು
ಗುರಿಯೆಡೆಗೆ ಮುಖ ಮಾಡಿತ್ತು ನನ್ನ..
ಎಲ್ಲರಂತೆ ನೀವಲ್ಲ.... ನಿಮ್ಮಂತೆ ಬೇರಾರಿಲ್ಲ....

ಬಾಳ ಬೆಳಗಿಸಿತ್ತು
ನೀವಿತ್ತ ಜ್ಞಾನ
ಜೀವನ ನೆಲೆ ಕಂಡಿತು
ನೀವು ನೀಡಿದ ಮಾರ್ಗದರ್ಶನ
ಎಲ್ಲರಂತೆ ನೀವಲ್ಲ...... ನಿಮ್ಮಂತೆ ಬೇರಾರಿಲ್ಲ.....

ಮಾನವೀಯ ವ್ಯಕ್ತಿಯಾಗಿಸಿತು
ನೀವಿತ್ತ ಮೌಲ್ಯ ಶಿಕ್ಷಣವೇ
ಉತ್ತಮ ನಾಗರೀಕನಾಗಲು
ಕಾರಣವು ನೀವಲ್ಲವೇ
ಎಲ್ಲರಂತೆ ನೀವಲ್ಲವೇ
ಎಲ್ಲರಂತೆ ನೀವಲ್ಲ.... ನಿಮ್ಮಂತೆ ಬೇರಾರಿಲ್ಲ...

ಕನಸುಗಳಿಗೆ ನೀರೆರೆದಿರಿ
ಸಾಕಾರಗೊಳ್ಳಲು ನೆರವಾದಿರಿ
ನಿಮ್ಮ ಗುಲಾಮ ನಾನಾಗಿರುವೆ
ಮುಕ್ತಿಯ ದಾರಿ ನೀವು ತೋರಿರುವಿರಿ
ಎಲ್ಲರಂತೆ ನೀವಲ್ಲ..... ನಿಮ್ಮಂತೆ ಬೇರಾರಿಲ್ಲ....

ಜಾತಿ ಭೇದ ತೋರದೆ
ವಿದ್ಯೆ ನೀಡುವಿರಿ
ಮೇಲು ಕೀಳೆಂದು ನೋಡದೆ
ಜ್ಞಾನ ಹರಿಸುವಿರಿ
ಎಲ್ಲರಂತೆ ನೀವಲ್ಲ.... ನಿಮ್ಮಂತೆ ಬೇರಾರಿಲ್ಲ...

ಸದ್ಬುದ್ಧಿಯ ಬೀಜ ಬಿತ್ತುವಿರಿ
ನಿಮ್ಮ ಪರಿಶ್ರಮದಿಂದ
ಸನ್ಮಾರ್ಗದ ಹಾದಿ ತೋರುವಿರಿ
ನಿಮ್ಮ ನಿಷ್ಕಲ್ಮಶ ಮನದಿಂದ
ಎಲ್ಲರಂತೆ ನೀವಲ್ಲ...... ನಿಮ್ಮಂತೆ ಬೇರಾರಿಲ್ಲ.....

ಯಾರದ್ದೋ ಮಕ್ಕಳನ್ನು
ತನ್ನ ಕುಡಿಗಳೆಂದೇ ಭಾವಿಸುವಿರಿ
ನಮ್ಮಿಂದ ಏನನ್ನೂ ಬಯಸದೆ
ನಮ್ಮೆಲ್ಲರ ಏಳಿಗೆಗಾಗಿ ಶ್ರಮಿಸುವಿರಿ
ಎಲ್ಲರಂತೆ ನೀವಲ್ಲ.... ನಿಮ್ಮಂತೆ ಬೇರಾರಿಲ್ಲ.....

ಸಮಾಜಕ್ಕೆ ಅದುವೇ ಮಾದರಿ
ಎಲ್ಲರ ಒಳಿತು ಬಯಸುವ ಜೀವ
ನೀವಲ್ಲವೇ ಈ ಬಾಳ ಬೆಳಗೋ ನಿಜ ದೈವ
ಎಲ್ಲರಂತೆ ನೀವಲ್ಲ... ನಿಮ್ಮಂತೆ ಬೇರಾರಿಲ್ಲ....

**ಅಂಬಿಕಾ ಸಂತೋಷ್**
ಸ.ಕಿ.ಪ್ರಾ.ಶಾಲೆ, ಗೌಡಕೊಪ್ಪ
ಹೊಸನಗರ ತಾ॥

# ನಲಿ–ಕಲಿ ಪರಿಚಯಾತ್ಮಕ ಆನ್‌ಲೈನ್ ತರಬೇತಿ

ದಿನಾಂಕ : 10.08.2020 ರಿಂದ 14.08.2020 ರವರೆಗೆ ತೀರ್ಥಹಳ್ಳಿ ತಾಲ್ಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ನಲಿ–ಕಲಿ ಪರಿಚಯಾತ್ಮಕ ಆನ್‌ಲೈನ್ ತರಬೇತಿಯನ್ನು ಡಯಟ್ ಹಾಗೂ ಕ್ಷೇತ್ರ ಸಂಪನ್ಮೂಲ ಕೇಂದ್ರದ ಮಾರ್ಗದರ್ಶದೊಂದಿಗೆ ಕಸ್ಟರ್ ಹಂತದಲ್ಲಿ ಆಯೋಜನೆ ಮಾಡಲಾಯಿತು. ಕೋವಿಡ್ – 19 ರ ಹಿನ್ನಲೆಯಲ್ಲಿ 2020–21 ಸಾಲಿನ ಮುಖಾಮುಖಿ ತರಬೇತಿಗೆ ಬದಲಾಗಿ ಆನ್‌ಲೈನ್‌ನಲ್ಲಿ ವೆಬಿನಾರ್‌ಗಳ ಮೂಲಕ ತರಬೇತಿಯನ್ನು ನೀಡಲಾಯಿತು.

ಈ ತರಬೇತಿಯನ್ನು ಸೂಕ್ತ ವೇಳಾಪಟ್ಟಿಯೊಂದಿಗೆ ನಲಿ–ಕಲಿಯ ಪ್ರಮುಖಾಂಶಗಳನ್ನು ಶಿಕ್ಷಕರೊಂದಿಗೆ ಚರ್ಚಿಸಲಾಯಿತು. ಗುಂಪು ಚಟುವಟಿಕೆ ಮುಖಾಮುಖಿ ಸಂವಾದ ಹೊರತುಪಡಿಸಿ ನಲಿ–ಕಲಿಯ ಸಮಗ್ರ ಅಂಶಗಳನ್ನು ಆನ್‌ಲೈನ್ ತರಬೇತಿಯಲ್ಲಿ ಚರ್ಚಿಸಲಾಯಿತು.

ದಿನಾಕ: 10–08–2020 ರಂದು ನಲಿ–ಕಲಿ ವಿಧಾನ ನಲಿ–ಕಲಿ ಬೆಳೆದುಬಂದ ದಾರಿ, ನಲಿ–ಕಲಿ ಮತ್ತು ಎನ್.ಸಿ.ಎಫ್. ನಲಿ–ಕಲಿ ಮತ್ತು ಆರ್.ಟಿ.ಇ, ನಲಿ–ಕಲಿ ಮತ್ತು ಸಿ.ಸಿ.ಇ., ಭಾಷೆಯಲ್ಲಿನ ಕಲಿಕಾಂಶಗಳು, ಭಾಷೆಯಲ್ಲಿ ಬಳಸಲಾದ ಲೋಗೋಗಳ ಪರಿಚಯವನ್ನು ಮಾಡಲಾಯಿತು.

ಭಾಷೆಯಲ್ಲಿ ಬರುವ ಚಟುವಟಿಕೆಗಳು, ಅವುಗಳ ಉದ್ದೇಶ, ಚಟುವಟಿಕೆ ನಿರ್ವಹಣೆಯ ಗುಂಪು, ಚಟುವಟಿಕೆ ನಿರ್ವಹಣೆಗೆ ನಲಿ–ಕಲಿ ಶಿಕ್ಷಕರು ತಯಾರಿಸಿಕೊಳ್ಳಬೇಕಾದ ಪೂರ್ವ ಸಿದ್ಧತೆಗಳ ಬಗ್ಗೆಯೂ ತಿಳಿಸಲಾಯಿತು.

ನಲಿ–ಕಲಿಯಲ್ಲಿ ಗಣಿತ ಕಲಿಕಾಂಶಗಳ ವ್ಯಾಪ್ತಿಯೊಂದಿಗೆ ಗಣಿತದ ಚಟುವಟಿಕೆಗಳಿಗೆ ಗುರುತಿಸಲಾಗಿರುವ ಲೋಗೋಗಳನ್ನು ಪರಿಚಯಿಸಲಾಯಿತು.

ನಲಿ–ಕಲಿಯಲ್ಲಿ ಪರಿಸರ ಅಧ್ಯಯನದ ಕಲಿಕಾಂಶಗಳು ಮತ್ತು 17 ಚಟುವಟಿಕೆಗಳಿಗೆ ನೀಡಲಾದ ಲೋಗೋಗಳು, ಪರಿಸರ ಆಧ್ಯಯನದ ಚಟುವಟಿಕೆಗಳ ಉದ್ದೇಶಗಳು, ಚಟುವಟಿಕೆ ನಿರ್ವಹಣೆಗೆ ಮಾಡಿಕೊಳ್ಳಬೇಕಾದ ಪೂರ್ವ ಸಿದ್ಧತೆಗಳ ಬಗ್ಗೆ ತಿಳಿಸಲಾಯಿತು.

ಗಂಪು ತಟ್ಟೆಗಳ ಪರಿಚಯ, ವಿದ್ಯಾರ್ಥಿಗಳ ಗಂಪು ಚಲನೆ, ಮೂರು ತರಗತಿಗಳ ನಿರ್ವಹಣೆ, ನಲಿ–ಕಲಿ ಶಾಲಾ ಹಂತದಲ್ಲಿ ಅನುಷ್ಠಾನ, ತರಗತಿಗಳ ನಿರ್ವಹಣೆಯಲ್ಲಿ ಶಿಕ್ಷಕರು ಮತ್ತು ಸಹಪಾಠಿಗಳ ಪಾತ್ರ, ಹವಮಾನ ನಕ್ಷೆ ನಿರ್ವಹಣೆ ಮತ್ತು ಕ್ರೋಢೀಕರಣ ಕುರಿತು ಮಾಹಿತಿ ನೀಡಲಾಯಿತು.

ಕ್ರಾಫ್ಟ್ ಚಟುವಟಿಕೆಗಳು, ಯೋಜನೆ ತಯಾರಿ, ಪಪೆಟ್ ಶೋಗಳ ಉದ್ಧೇಶ ಹಾಗೂ ನಿರ್ವಹಣೆಯ ಬಗ್ಗೆ ವಿವರವಾಗಿ ತಿಳಿಸಿಕೊಡಲಾಯಿತು.

**ನಲಿ–ಕಲಿ ಆನ್‌ಲೈನ್ ತರಬೇತಿಯ ಉತ್ತಮಾಂಶಗಳು :**

* ಈ ತರಬೇತಿಯ ಕೋವಿಡ್–19 ಸಾಂಕ್ರಾಮಿಕ ರೋಗ ತೀವ್ರವಾಗಿ ಹರಡುವಿಕೆಯಲ್ಲಿ ಶಿಕ್ಷಕರು ತರಬೇತಿಯಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳಲು ಮತ್ತು ನಲಿ–ಕಲಿ ಬೋಧನಾ ವಿಧಾನ ಕುರಿತಾದ ಪರಿಚಯಾತ್ಮಕ

ಮಾಹಿತಿ ಪಡೆದುಕೊಳ್ಳಲು ಸಹಕಾರಿಯಾಯಿತು.

* ಈ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳು ಮುಖಾಮುಖಿ ತರಬೇತಿಯಲ್ಲಿದ್ದೇವೆ ಎಂಬ ಅರಿವು ಮೂಡುವಂತೆ ವಿಷಯ ಮಂಡಿಸಿ ಶಿಕ್ಷಕರನ್ನು ಚರ್ಚೆಯಲ್ಲಿ ತೊಡಗಿಸಲು ಅನುಕೂಲವಾಯಿತು.

* ಹೆಚ್ಚು ಶಿಕ್ಷಕರಿಗೆ ಏಕಕಾಲದಲ್ಲಿ ತರಬೇತಿ ನೀಡಲು ಸಹಕಾರಿಯಾಯಿತು.
* ತಂತ್ರಜ್ಞಾನ ಬಳಕೆಯೊಂದಿಗೆ ಜ್ಞಾನ ಪಡೆದುಕೊಳ್ಳುವುದು ಮತ್ತು ಅದರ ಅನುಷ್ಠಾನಕ್ಕೆ ಸಹಕಾರಿಯಾಯಿತು.
* ಆರ್ಥಿಕ ಹೊರೆ ಇಲ್ಲದೆ ತರಬೇತಿಯ ಆಯೋಜನೆ ಮಾಡಲು ಸಾಧ್ಯವಾಯಿತು.
* ಶಿಕ್ಷಕರು ಸಂತಸದಿಂದ ಸಕ್ರೀಯವಾಗಿ ವಿಷಯ ಗ್ರಹಿಸಲು ಸಾಧ್ಯವಾಯಿತು.

**ನಲಿ–ಕಲಿ ಆನ್‌ಲೈನ್ ತರಬೇತಿಯ ಸವಾಲುಗಳು :**

* ಈ ತರಬೇತಿಯಲ್ಲಿ ಗುಂಪು ಚರ್ಚೆ, ಚಟುವಟಿಕೆ ಹಮ್ಮಿಕೊಳ್ಳಲು ಸಾಧ್ಯವಾಗಿರುವುದಿಲ್ಲ.
* ಕೆಲವು ಶಿಕ್ಷಕರು ತರಬೇತಿಯಿಂದ ಬಹುಬೇಗನೆ ಹೊರಹೋಗಲು ಅವಕಾಶವಿರುತ್ತದೆ.
* ಕೆಲವೊಮ್ಮೆ ನೆಟ್‌ವರ್ಕ್ ಸಮಸ್ಯೆಯಿಂದ ಸರಿಯಾಗಿ ಕೇಳಿಸದಿರುವುದು.
* ಕೆಲವು ಶಿಕ್ಷಕರು ತರಬೇತಿಗೆ ಭಾಗವಹಿಸಿ ವಿಷಯ ಆಲಿಸುವಿಕೆ ಬಿಟ್ಟು ಬೇರೆ ಬೇರೆ ಕೆಲಸಗಳಲ್ಲಿ ತೊಡಗಿಕೊಳ್ಳುವ ಸಾಧ್ಯತೆ ಇರುತ್ತದೆ.
* ಕೆಲವೊಮ್ಮೆ ಸ್ಪಷ್ಟವಾಗಿ ಕೇಳಿಸದಿರುವುದು, ನಿರಂತರತೆ ಇಲ್ಲದೆ ವಿಷಯ ಅಪೂರ್ಣ ಎನಿಸುವುದು.

ಕೋವಿಡ್ – 19 ರ ಹಿನ್ನಲೆಯಲ್ಲಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ದೃಷ್ಟಿಯಿಂದ ಮುಖಾಮುಖಿ ತರಬೇತಿಯ ಬದಲಿಗೆ ಆಯೋಜಿಸಲಾದ ಆನ್‌ಲೈನ್ ತರಬೇತಿ ಆಸಕ್ತಿದಾಯಕವಾಗಿತ್ತು. ನಿಗದಿತ ಸಮಯದಲ್ಲಿ ನಲಿ–ಕಲಿಯ ನಿರ್ದಿಷ್ಟ ಅಂಶಗಳನ್ನು ಪರಿಚಯಾತ್ಮಕವಾಗಿ ಅರ್ಥೈಸಿಕೊಳ್ಳಲು ಸಹಕಾರಿಯಾಯಿತು. ಒಟ್ಟಾರೆಯಾಗಿ ಐದು ದಿನಗಳ ತರಬೇತಿಯು ಯಶಸ್ವಿಯಾಗಿ ನಡೆಯಿತು.

**ಸಮನ್ವಯಾಧಿಕಾರಿಗಳು**
**ಕ್ಷೇತ್ರ ಸಂಪನ್ಮೂಲ ಕೇಂದ್ರ,** ತೀರ್ಥಹಳ್ಳಿ

# “ಟೆರೇಸ್ ಗಾರ್ಡನ್‌ನ ಮಡಿಲಲ್ಲಿ ಒಂದು ಪರ್ಯಟನೆ”

ಹದವಾದ ಮನಸ್ಸಿನಲ್ಲಿ ಸದ್ಭಾವ ಮೂಡಿದರೆ ಮಾಡಿಕೊಂಡಿರುವ ಸಂಕಲ್ಪ ಸಾಕಾರಗೊಳ್ಳುತ್ತದೆ, ಇದೇ ಸಾಕ್ಷಾತ್ಕಾರ. ಮಾನ್ಯ ಉಪನಿರ್ದೇಶಕರು (ಅಭಿವೃದ್ಧಿ) ಆದ ಶ್ರೀಮತಿ ಸುಮಂಗಳಾ ಪಿ. ಕುಚಿನಾಡ ರವರ ಸಮಯೋಚಿತ ಸಾತ್ವಿಕ ನಿರ್ಧಾರದಿಂದಾಗಿ ರೂಪುಗೊಂಡ ಸಮಾಜಮುಖಿ ಸಂಸ್ಥೆ “ಮಡಿಲು” ಕಿರು ಸಂಘಟನೆಯಾದರೂ ತನ್ನ ಹಿರಿದಾದ ಯೋಚನೆಗಳ ಮೂಲಕ ಪ್ರಾರಂಭಗೊಂಡ ಕೆಲವೇ ತಿಂಗಳಿನಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮೆಚ್ಚುಗೆಗೆ ಪಾತ್ರವಾಗಿದೆ.

ಸ್ತ್ರೀ ಶಕ್ತಿ ಅದ್ಭುತವಾದ ಶಕ್ತಿ, ಇದನ್ನು ಯುಕ್ತ ಕಾರ್ಯಗಳಿಗೆ ಬಳಸಿಕೊಳ್ಳುವ ನಿಟ್ಟಿನಲ್ಲಿ ಇಟ್ಟ ದಿಟ್ಟ ಹೆಜ್ಜೆಯ ಪ್ರತಿಫಲವೇ “ಮಡಿಲು” ಈ ಸಂಘಟನೆಯ ಮೂಲಕ ಮಹಿಳಾ ದಿನಾಚರಣೆಯನ್ನು ಕೇವಲ ಸಾಂಕೇತಿಕವಾಗಿ ಆಚರಿಸದೇ ಸಮಾಜಮುಖಿ ಕಾರ್ಯಗಳಿಗಾಗಿ ತೆರೆದು ವೃದ್ಧಾಶ್ರಮ, ಅನಾಥಾಶ್ರಮ ಇತ್ಯಾದಿ ಭೇಟಿಗೆ ಮುನ್ನುಡಿ ಬರೆಯಿತಲ್ಲದೇ ರಕ್ಷಾ ಬಂಧನದ ಮೂಲಕ ಸಹೃದಯಿಗಳ ಬಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸಲಾಯಿತು.




ದಿನಾಂಕ : 25–09–2020 ರಂದು ಈ ಎಲ್ಲಾ ಕಾರ್ಯಕ್ರಮಗಳಿಗೆ ಪುಟವಿಟ್ಟಂತೆ ಒಂದು ವಿನೂತನ ಕಾರ್ಯಕ್ರಮವನ್ನು ಮಾನ್ಯ ಉಪನಿರ್ದೇಶಕರು (ಅಭಿವೃದ್ಧಿ) ರವರಾದ ಶ್ರೀಮತಿ ಸುಮಂಗಳಾ ಪಿ. ಕುಚಿನಾಡ ರವರ ಆಶಯ ಮತ್ತು ಮಡಿಲು ಸಂಘದ ಸದಸ್ಯರ ಅಪೇಕ್ಷೆಯೊಂದಿಗೆ ಹಮ್ಮಿಕೊಳ್ಳಲಾಗಿತ್ತು. ಟೆರೇಸ್ ಗಾರ್ಡನ್ ಕುರಿತು ವಿಶೇಷ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಯನ್ನು ಡಾ॥ ಕೃಷ್ಣಪ್ಪಗೌಡ ಪಡ್ಡಂಬೈಲು ಇವರಿಂದ ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ಶ್ರೀಮತಿ ರೇಣುಕಾ ಉಪನ್ಯಾಸಕರು ಹಾಗೂ ಖಚಾಂಚಿಯವರು ಮಡಿಲು ಸಂಘ, ಇವರ ಪ್ರಾರ್ಥನೆ ಯೊಂದಿಗೆ ಪ್ರಾರಂಭಿಸಲಾಯಿತು. ಕಾರ್ಯಕ್ರಮದಲ್ಲಿ ಉಪಸ್ಥಿತಿರಿದ್ದ ಸರ್ವರನ್ನೂ ಶ್ರೀಮತಿ ಜ್ಯೋತಿಕುಮಾರಿ ಇವರು ಆತ್ಮೀಯವಾಗಿ ಸ್ವಾಗತಿಸಿದರು. ಕಾರ್ಯಕ್ರಮದ ಕೇಂದ್ರಬಿಂದುವಾದ ಡಾ. ಕೃಷ್ಣಪ್ಪಗೌಡ ಪಡ್ಡಂಬೈಲು ಇವರನ್ನು ಪರಿಚಯಿಸುತ್ತಾ ಪ್ರಾಸ್ತಾವಿಕವಾಗಿ ಶ್ರೀಯುತರ ಸಾಧನೆಗಳ ಕಿರುಪರಿಚಯ ಮತ್ತು ಸನ್ಮಾನ ಕಾರ್ಯಕ್ರಮವನ್ನು ಉಪನ್ಯಾಸಕರಾದ ಶ್ರೀಮತಿ ವಿನೋದಕುಮಾರಿ ಹೆಚ್.ವಿ. ಇವರು ನೆರವೇರಿಸಿಕೊಟ್ಟರು.

Winners don’t do different things, they do things differently ಎಂಬ ಸೂಕ್ತಿಯಂತೆ ಕಾಂಕ್ರೀಟ್ ಕಾಡಿನಲ್ಲಿ ಹಸಿರು ಪರಿಸರದ ಮರುಸೃಷ್ಟಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸಾಧನೆಯ ಶಿಖರವನ್ನೇರಿದ ಡಾ. ಕೃಷ್ಣಪ್ಪಗೌಡ ಪಡ್ಡಂಬೈಲು ಇವರು ಮಾತನಾಡುತ್ತಾ ತಮ್ಮ ಬಾಲ್ಯ, ಪ್ರಕೃತಿಯೆಡಗಿನ ತಮ್ಮ ಸೆಳೆತ, ಅದಕ್ಕಾಗಿ ಅವರು ಶ್ರಮಿಸಿದ ಹಾದಿ, ಪಟ್ಟ ಪರಿಶ್ರಮ, ಒದಗಿದ ಕೌಟುಂಬಿಕ ಸಹಕಾರ ಮುಂತಾದವುಗಳನ್ನು ಎಳೆ,

ಎಳೆಯಾಗಿ ಬಿಡಿಸಿ ಹೇಳಿದರು.

ತಾರಸಿ ಗಾರ್ಡನ್ ಪ್ರಾರಂಭ ಮಾಡಲು ಅವರಿಗೆ ಯೋಚನೆ ಬಂದ ಬಗೆ ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ತಾವು ಸಕ್ರಿಯವಾಗಿ ತೊಡಗಿಕೊಂಡ ರೀತಿಯನ್ನು ವಿವರಿಸುತ್ತಾ ಪ್ರಾತ್ಯಕ್ಷಿಕೆಯ ಮೂಲಕ ತಮ್ಮ ತೋಟದಲ್ಲಿ ಬೆಳೆದ ಭತ್ತ ವಿವಿಧ ಬಗೆಯ ಹಣ್ಣುಗಳು, ತರಹೇವಾರಿ ತರಕಾರಿಗಳು, ಬಣ್ಣಬಣ್ಣದ ಹೂವುಗಳು ಔಷಧಿಯ ಸಸ್ಯಗಳು, ವೈವಿಧ್ಯಮಯ ಸೊಪ್ಪು ಇವುಗಳ ಬಗ್ಗೆ ಕುತೂಹಲಕರವಾದ ಮಾಹಿತಿಯನ್ನು ಸೊಗಸಾಗಿ ವರ್ಣಿಸಿದರು.

ತದನಂತರ ಸಂವಾದ ಕಾರ್ಯಕ್ರಮದಲ್ಲಿ ನಮಗಿರುವ ಕುತೂಹಲ, ಗೊಂದಲ ಮತ್ತು ಪ್ರಶ್ನೆಗಳಿಗೆ ತಮ್ಮ ಅನುಭವದ ಆಧಾರದ ಮೂಲಕ ಪರಿಹರಿಸುವ ಪ್ರಯತ್ನ ಮಾಡಿದರು.

ಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ಉನಿರ್ದೇಶಕರು (ಅಭಿವೃದ್ಧಿ) ರಾದ ಶ್ರೀಮತಿ ಸುಮಂಗಳಾ ಪಿ. ಕುಚಿನಾಡ ಇವರು ಗಿಡಗಳನ್ನು ಬೆಳೆಸುವಲ್ಲಿ ತಮಗಿರುವ ಆಸಕ್ತಿ ಪರಿಸರದ ಒಡನಾಟದಿಂದ ನಮಗಾಗುವ ಉಪಯೋಗ, ಈ ಕಾರ್ಯಕ್ರಮ ರೂಪಿಸಲು ಅವರಿಗಿದ್ದ ಹಂಬಲ. ಅದು ಸಾಕಾರಗೊಂಡ ಬಗೆ ಇವುಗೆಳಲ್ಲದರ ಬಗ್ಗೆ ಬೆಳಕು ಚೆಲ್ಲಿದರು. ನಾವು ಗಿಡಗಳನ್ನು ಪ್ರೀತಿಸಿದರೆ ನಮಗೆ ಸಂತೋಷ, ಸಂತೃಪ್ತಿ, ನೆಮ್ಮದಿ ದೊರಕುತ್ತದೆ. ಎಂದು ಅಭಿಪ್ರಾಯ ವ್ಯಕ್ತ ಪಡಿಸಿದರು. ಏಕತಾನತೆಯಿಂದ ಹೊರಬರುವ ಅಮೂಲ್ಯ ಮಾರ್ಗ ಪರಿಸರ ಪ್ರೀತಿಯಾಗಿರುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಉಪಪ್ರಾಂಶುಪಾಲರಾದ ಶ್ರೀ ವೀರಭದ್ರಪ್ಪ ಹಾಗೂ ಇತರೆ ಹಿರಿಯ ಉಪನ್ಯಾಸಕರು, ಉಪನ್ಯಾಸಕರು ಮತ್ತು ಕಛೇರಿಯ ಸಿಬ್ಬಂದಿಯವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಸರ್ವರಿಗೂ ಶ್ರೀಮತಿ ಜಯಮ್ಮ. ಉಪನ್ಯಾಸಕರು ಇವರು ವಂದಿಸಿದರು. ಶ್ರೀಮತಿ ಗೀತಾ ಇವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು.

**ಶ್ರೀಮತಿ ಜ್ಯೋತಿಕುಮಾರಿ**
ಉಪನ್ಯಾಸಕರು, ಡಯಟ್, ಶಿವಮೊಗ್ಗ







ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸಮಟಗಾರು



ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ

ಹಡ್ಲಬೈಲು, ಹೊಸನಗರ ತಾ॥



ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ

ವಿಠ್ಠಲನಗರ, ತೀರ್ಥಹಳ್ಳಿ ತಾ॥



2020-21ನೇ ಸಾಲಿನ ಉಪನಿರ್ದೇಶಕರು (ಅಭಿವೃದ್ಧಿ), ಹಿರಿಯ ಉಪನ್ಯಾಸಕರು
ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗ, ಡಯಟ್, ಶಿವಮೊಗ್ಗ

ಮುದ್ರಣ : ಮಲ್ನಾಡ್, ಶಿವಮೊಗ್ಗ. 94497 95464